# ಹೊಸ ಮನುಷ್ಯ

**ಸಮಾಜವಾದಿ ಮಾಸಿಕ**

**ಅಕ್ಟೋಬರ್, ೨೦೧೮** **ಸಂಪಾದಕ : ಡಿ.ಎಸ್.ನಾಗಭೂಷಣ** **ಸಂಪುಟ: ೭ ಸಂಚಿಕೆ: ೬**

**ಚಂದಾ:** (ವ್ಯಕ್ತಿಗಳಿಗೆ) ರೂ. ೨೦೦/- (ಸಂಘ-ಸಂಸ್ಥೆಗಳಿಗೆ) ರೂ. ೩೦೦/- **ಬೆಲೆ:** ಬಿಡಿ ಪ್ರತಿ: ರೂ. ೨೦/- **ಪುಟ:** ೨೦

**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೮೯೨ ೪೨೨೮೪ ***ಈ ಮೇಲ್:*** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ರಾಷ್ಟ್ರ ಮತ್ತು ರಾಜ್ಯ ರಾಜಕಾರಣಗಳೆರಡರಲ್ಲೂ ದಿನೇ ದಿನೇ ಬಿಸಿ ಏರುತ್ತಿದೆ. ಲೋಕಸಭಾ ಚುನಾವಣೆಗಳು ಹತ್ತಿರ ಬರುತ್ತಿದ್ದಂತೆ ಒಂದು ವರ್ಷದಷ್ಟೇ ಹಿಂದೆ ನಿಶ್ಚಿತವಾಗಿದ್ದಂತೆ ತೋರುತ್ತಿದ್ದ ತನ್ನ ಜಯ ಇತ್ತೀಚಿನ ದಿನಗಳಲ್ಲಿ ಕೈ ತಪ್ಪಿ ಹೋಗುತ್ತಿರುವಂತೆ ಭಾಸವಾಗಿ ಮೋದಿ ಸರ್ಕಾರ ಜನರ ವಿಶ್ವಾಸವನ್ನು ಸಂಘಟಿಸಿಕೊಳ್ಳಲು ಎಲ್ಲ ಕಸರತ್ತುಗಳನ್ನೂ ಮಾಡತೊಡಗಿದೆ. ನೋಟು ರದ್ದತಿಯನ್ನು ಮಾಡಿದ ಸರ್ವಾಧಿಕಾರಿ ಆಡಳಿತ ಶೈಲಿ ಮತ್ತು ಅದರಿಂದ ದೇಶದ ಆರ್ಥಿಕತೆಯ ಮೇಲೆ ಆದ ದೀರ್ಘಕಾಲಿಕ ದುಷ್ಪರಿಣಾಮಗಳ ಅಧಿಕೃತ ವರದಿಗಳು ಸರ್ಕಾರದ ಆಡಳಿತ ಜ್ಞಾನದ ವಿಶ್ವಾಸಾರ್ಹತೆಯನ್ನೇ ಭಂಗಗೊಳಿಸಿವೆ.. ಜೊತೆಗೆ ಕಪ್ಪು ಹಣ ವಾಪಸು ತರುವ ಮತ್ತು ರೈತರಿಗೆ ಒಂದು ನಿರ್ದಿಷ್ಟ ಸೂತ್ರದ ಪ್ರಕಾರ ಬೆಳೆ ಬೆಲೆ ಸಿಗುವಂತೆ ಮಾಡುವ, ಭಾರಿ ಪ್ರಮಾಣದ ಉದ್ಯೋಗ ಸೃಷ್ಟಿಸುವ ಅದರ ಚುನಾವಣಾ ಭರವಸೆಗಳು ಇನ್ನೊಂದು ಚುನಾವಣೆ ಬರುವ ಹೊತ್ತಿಗಾದರೂ ಈಡೇರುವ ನಿರೀಕ್ಷೆ ಇಲ್ಲದಾಗಿ ಜನ ಮೋದಿಯವರ ಆಡಳಿತದ ದಕ್ಷತೆಯ ಬಗ್ಗೆ ಮರು ಆಲೋಚನೆ ಮಾಡುವಂತಾಗಿದೆ.

'ನಾನು ತಿನ್ನುವುದಿಲ್ಲ, ಇತರರನ್ನೂ ತಿನ್ನಲು ಬಿಡುವುದಿಲ್ಲ' ಎಂಬ ಮೋದಿಯವರ ಆಶ್ವಾಸನೆಯನ್ನು ನಂಬಿದ್ದ ಜನ ಈಗ ಬಯಲಾಗುತ್ತಿರುವ ರಫೇಲ್ ಯುದ್ಧ ವಿಮಾನ ಖರೀದಿ ಒಪ್ಪಂದದ ವಿವರಗಳನ್ನು ಕಂಡು ಗಾಬರಿಯಾಗುತ್ತಿದ್ದಾರೆ. ಯುಪಿಎ ಸರ್ಕಾರದ ಕಾಲದಿಂದಲೂ ನೆನೆಗುದಿಗೆ ಬಿದ್ದಿದ್ದ ಈ ಖರೀದಿ ಸಂಧಾನಗಳನ್ನು ಸ್ವತಃ ಮೋದಿಯವರೇ ವೈಯಕ್ತಿಕವಾಗಿ ಅಂತಿಮಗೊಳಿಸಿ ತ್ವರಿತ ನಿರ್ಧಾರದ ಆಡಳಿತಗಾರನೆಂಬ ಕೀರ್ತಿಯನ್ನು ತಮ್ಮದಾಗಿಸಿಕೊಂಡಿದ್ದರು. ಆ ಕೀರ್ತಿಯೂ ಈಗ ವಿವಾದಾಸ್ಪದವಾಗಿದೆ. ಇದರಲ್ಲಿ ಮೋದಿಯವರ ವೈಯಕ್ತಿಕ ಲಾಭದ ಪ್ರಶ್ನೆ ಇಲ್ಲವಾದರೂ, ತಮ್ಮ ಸರ್ಕಾರದ ಪರವಾದ ವ್ಯಾಪಾರಿ ಸಂಸ್ಥೆಗೆ ಮತ್ತು ತಮ್ಮ ಪಕ್ಷಕ್ಕೆ ಲಾಭ ಮಾಡಿಕೊಡುವ ಉದ್ದೇಶಗಳು ಇರುವ ಎಲ್ಲ ಸೂಚನೆಗಳೂ ಈ ಕುರಿತ ವರದಿಗಳಲ್ಲಿ ಇದ್ದಂತಿವೆ.

ಯಾವುದೇ ಸರ್ಕಾರದ ಭ್ರಷ್ಟಾಚಾರಗಳು ಬಯಲಾಗಲು ಸ್ವಲ್ಪ ಕಾಲ ಬೇಕಾಗುತ್ತದೆ. ಮೋದಿ ಸರ್ಕಾರದ ಆಯ್ಕೆಗೆ ಮುಖ್ಯ ಕಾರಣವಾದ ಯುಪಿಎ ಸರ್ಕಾರದ ಭ್ರಷ್ಟಾಚಾರದ ಹಗರಣಗಳು ಬಯಲಾಗತೊಡಗಿದ್ದೂ ಐದು ವರ್ಷಗಳ ನಂತರದ ಅದರ ಎರಡನೇ ಅವಧಿಯ ಕೊನೆಯ ವರ್ಷಗಳಲ್ಲಿಯೇ ಅಲ್ಲವೇ? ಇದರ ಜೊತೆಗೇ ಮಲ್ಯ-ನೀರವ್ ಮೋದಿ ನಂತರ ನಿತಿನ್ ಸಂದೇಸರ ಎಂಬ ಇನ್ನೋರ್ವ ವ್ಯಾಪಾರಿ ನಮ್ಮ ಬ್ಯಾಂಕುಗಳಿಗೆ ಸಾವಿರಾರು ಕೋಟಿ ರೂ. ಗಳ ದೋಖಾ ಮಾಡಿ ನೈಜೀರಿಯಾಕ್ಕೆ ಪರಾರಿಯಾದ ಸುದ್ದಿಯ ಬೆನ್ನಲೇ, ತಾನು ಹಣಕಾಸು ಮಂತ್ರಿ ಅರುಣ್ ಜೈಟ್ಲಿಯವರಿಗೆ ತಿಳಿಸಿಯೇ ಇಂಗ್ಲೆಂಡ್‌ಗೆ ತೆರಳಿದೆ ಎಂಬ ಮಲ್ಯ ಹೇಳಿಕೆ ಸರ್ಕಾರವನ್ನು ನಿಜವಾದ ಇಕ್ಕಟ್ಟಿಗೆ ಸಿಲುಕಿಸಿದಂತಿದೆ.

ಮೋದಿ ಸರ್ಕಾರ ಜನರಲ್ಲಿ ಉಂಟು ಮಾಡುತ್ತಿರುವ ಈ ಎಲ್ಲ ಭ್ರಮ ನಿರಸನಗಳಿಗೆ ಮುಖ್ಯ ಕಾರಣ ಮೊನ್ನೆ ಹಿರಿಯ ರಾಜಕೀಯ ವಿಶ್ಲೇಷಣಾಕಾರ ಶೇಖರ್ ಗುಪ್ತ ತಮ್ಮದೊಂದು ಅಂಕಣದಲ್ಲಿ ಬರೆದಂತೆ ಬಿಜೆಪಿಗೆ ಪ್ರತಿಭಾನ್ವಿತರನ್ನು ಕಂಡರೆ ಇರುವ ಅಲರ್ಜಿಯೇ ಕಾರಣವಾಗಿದೆ. ಅವರ ೭೦ ಜನರ ಸಂಪುಟದಲ್ಲಿನ ಮೂರು ನಾಲ್ಕು ಜನರನ್ನು ಬಿಟ್ಟರೆ ಮಿಕ್ಕವರು ಇದ್ದೂ ಇಲ್ಲದಂತಿರುವ ನಿಷ್ಪ್ರಯೋಜಕರು!

ತಮ್ಮ ಪಕ್ಷವನ್ನು ಅದರ ಹಿಂದೂ ಕೋಮುವಾದಿ ಮತ್ತು ಬಲಪಂಥೀಯ ಆರ್ಥಿಕತೆಯ ಕಾರಣದಿಂದಾಗಿ ವಿರೋಧಿಸುತ್ತಿದ್ದ ಎಡಪಂಥೀಯ ಬುದ್ಧಿಜೀವಿಗಳ ಮೇಲಿನ ಕೋಪದಿಂದ ಪಕ್ಷ ಇಡಿಯಾಗಿ ಬುದ್ಧಿಜೀವಿಗಳು ಎಂಬ ಸಮುದಾಯದ ವಿರುದ್ಧವೇ ಪ್ರಚಾರಾಂದೋಲನವನ್ನು ನಡೆಸಿ ಬುದ್ಧಿಗೇಡಿಯಾಗಿ ವರ್ತಿಸಿ ಬುದ್ಧಿ ಇರುವ ಯಾರೂ ಆ ಪಕ್ಷದ ಕಡೆ ಸುಳಿಯದಂತಾಗಿದೆ. ಅಥವಾ ಎಡಪಂಥೀಯರಲ್ಲದಿದ್ದ ಕೆಲ ಬುದ್ಧಿವಂತರು ಪಕ್ಷದ ಸಹವಾಸ ಮಾಡಿ ಪಡೆದ ಕೆಟ್ಟ ಅನುಭವದಿಂದ ಒಬ್ಬೊಬ್ಬರಾಗಿ (ಕೊನೆಯದಾಗಿ ಆರ್ಥಿಕ ಸಲಹಾಕಾರರಾಗಿದ್ದ ಅರವಿಂದ ಸುಬ್ರಮಣ್ಯಂ) ಅಲ್ಲಿಂದ ದೂರವಾಗತೊಡಗಿದ್ದಾರೆ. ಇದರಿಂದಾಗಿ ಸರ್ಕಾರ ಮೋದಿಯವರೂ ಸೇರಿದಂತೆ ಕೇವಲ ಸರ್ವಜ್ಞ ಗರ್ವದ ಚತುರ ಭಾಷಣಕಾರರ ಪಕ್ಷವಾಗಿ ಮಾತ್ರ ಉಳಿಯುವಂತಾಗಿದೆ.

ಹಾಗಾಗಿಯೇ ಪಕ್ಷ ಲೋಕಸಭಾ ಚುನಾವಣೆಗಳ ಮತ್ತು ಅದಕ್ಕೆ ಮೊದಲು ನಡೆಯಲಿರುವ-ಸೋಲಿನ ಸೂಚನೆಗಳನ್ನು ನೀಡುತ್ತಿರುವ-ರಾಜಸ್ಥಾನ, ಮಧ್ಯಪ್ರದೇಶ ಮತ್ತು ಚತ್ತಿಸ್‌ಗಢ ರಾಜ್ಯ ವಿಧಾನ ಸಭಾ ಚುನಾವಣೆಗಳ ಸಮಯದಲ್ಲಿ ಮತ್ತೆ ಹಿಂದುತ್ವದ ಹುಯಿಲೆಬ್ಬಿಸುವ ತಯಾರಿ ನಡೆಸಿದೆ ಎಂಬ ವರದಿ ಇದೆ. ಇದು ನಿಜವಾಗಿದ್ದರೆ ಇದು ಪಕ್ಷಕ್ಕಾಗಲೀ, ದೇಶಕ್ಕಾಗಲೀ ಒಳ್ಳೆಯದಲ್ಲ. ಇದರಿಂದ ಜನ ಬೇಸತ್ತಿದ್ದು ಈ ತಂತ್ರ ಪಕ್ಷಕ್ಕೆ ತಿರುಗುಬಾಣವಾಗುವ ಸಾಧ್ಯತೆಯೇ ಹೆಚ್ಚು. ಏಕೆಂದರೆ, ತನಗೆ ಆಗದವರನ್ನೆಲ್ಲ ಕೊಲ್ಲುವ ಹಿಂದೂ ಕೋಮುವಾದಿ ಗುಂಪೊಂದರ ಸಂಚು ಈಗ ನಿಧಾನವಾಗಿ ಬಯಲಾಗುತ್ತಿದೆ. ಇದರಿಂದ ಬಿಜೆಪಿ ಏನೆಲ್ಲ ಹೇಳಿ ತನ್ನನ್ನು ಈ ಬೆಳವಣಿಗೆಯಿಂದ ಪ್ರತ್ಯೇಕಿಸಿಕೊಳ್ಳುವ ಪ್ರಯತ್ನ ಮಾಡುತ್ತಿರುವುದಾದರೂ ಅದರ 'ಪರಿವಾರ'ದ ಚರಿತ್ರೆಯನ್ನು ಅದರಿಂದ ಪ್ರತ್ಯೇಕಿಸಲಾಗದ ಜನ ಇದೆಲ್ಲದರಿಂದ ರೋಸಿ ಹೋಗತೊಡಗಿದ್ದಾರೆ. ಬಹುಶಃ ಇದನ್ನು ತಡೆಯಲೆಂದೇ ಸರ್ಕಾರ ಮೋದಿ ಹತ್ಯೆಯ ಆರೋಪದಲ್ಲಿ 'ನಗರ ನಕ್ಸಲರು' ಎಂಬ ಹೊಸ ಶಬ್ದವನ್ನು ಚಲಾವಣೆಗೆ ತಂದು ನಾಲ್ವರು 'ಮಾನವ ಹಕ್ಕುಗಳ ಹೋರಾಟಗಾರ'ರನ್ನು ಬಂಧಿಸಲು ಯತ್ನಿಸಿ ಸರ್ವೋಚ್ಚ ನ್ಯಾಯಾಲಯದ ಮುಂದೆ ಮುಖಭಂಗಕ್ಕೀಡಾಗಬೇಕಾಯಿತು. ಈ ಪ್ರಕರಣದ ಪರಿಣಾಮವನ್ನು ಇನ್ನಷ್ಟೇ ಕಾದು ನೋಡಬೇಕಿದೆ.

ಈ ಎಲ್ಲ ಪ್ರತಿಕೂಲ ಹಿನ್ನೆಲೆಯಲ್ಲೂ ಮೋದಿ ನೇತೃತ್ವದ ಸರ್ಕಾರಕ್ಕೆ ಜಯದ ನಂಬಿಕೆ ಇದ್ದರೆ ಅದಕ್ಕೆ ಮುಖ್ಯ ಕಾರಣಗಳು ಎರಡು. ಒಂದು ರಚನಾತ್ಮಕವಾದದ್ದು. ಅದೆಂದರೆ, ಸಾಮಾನ್ಯ ಜನರಿಗೆ ಆರೋಗ್ಯ ಭದ್ರತೆ ನೀಡುವ ಮಹತ್ವಾಕಾಂಕ್ಷೆಯ 'ಆಯುಷ್ಮಾನ್' ಯೋಜನೆ. ಆದರೆ ಇದು ನಮ್ಮ ಕುಮಾರಸ್ವಾಮಿಯವರ 'ರೈತರ ಸಾಲ ಮನ್ನಾ' ಯೋಜನೆಯಂತೆಯೇ ಅದು ಜಾರಿಯಾದಗಲೇ ಅದರ ಬಂಡವಾಳ ಗೊತ್ತಾಗುವುದು. ಮತ್ತೊಂದು ಪರೋಕ್ಷ ವರದಂತಿರುವುದು : ಮೋದಿಯವರಿಗೆ ಸಮರ್ಥ ಸವಾಲು ಒಡ್ಡಬಲ್ಲ ವಿರೋಧಿ ನಾಯಕತ್ವ ಇಲ್ಲದಿರುವುದು. ಇದಕ್ಕೆ ಮುಖ್ಯ ಕಾರಣ, ಕಾಂಗ್ರೆಸ್ಸೂ ಸೇರಿದಂತೆ ಇತರ ಬಹುಪಾಲು ಪಕ್ಷಗಳನ್ನು ಕುಟುಂಬ ರಾಜಕಾರಣವೇ ಆಳುತ್ತಿದ್ದು ಸಮರ್ಥ ನಾಯಕತ್ವ ಮೂಡಲು ಅಲ್ಲಿ ಅಸಾಧ್ಯವಾಗಿರುವುದು. ಇದರ ಜೊತೆಗೇ ಈ ಪಕ್ಷಗಳಾವಕ್ಕೂ ಒಂದು ಆದರ್ಶ ಎಂಬುದಿಲ್ಲದಿರುವುದು. ಜನ ಬಿಜೆಪಿಯನ್ನು ಬೆಂಬಲಿಸಿದ್ದು ,ಒಳ್ಳೆಯದೋ ಕೆಟ್ಟದೋ ಅದಕ್ಕೊಂದು ಬದ್ಧತೆ ಇದೆ' ತನ್ನದೇ ಆದ "ಶೀಲ'ವಿದೆ ಎಂಬ ಕಾರಣಕ್ಕೆ. ಕರ್ನಾಟಕ ಸರ್ಕಾರ ದಿನನಿತ್ಯ ಬಹುಮತ ಕಳೆದುಕೊಳ್ಳುವ ಆತಂಕದಲ್ಲೇ ದಿನವಹಿ ಆಧಾರದ ಮೇಲೆ ನಡೆಯುತ್ತಿರುವ ರೀತಿ ನೋಡಿದರೇ ಇದು ಗೊತ್ತಾಗುವಂತಿದೆ! ಸಮ್ಮಿಶ್ರ ಸರ್ಕಾರದ ಪಕ್ಷಗಳು ವಿಧಾನ ಪರಿಷತ್ತಿಗೆ ಈಗ ಆಯ್ಕೆ ಮಾಡಿದ ಅಭ್ಯರ್ಥಿಗಳನ್ನು ನೋಡಿದರೆ, ಇವು ಸದ್ಯಕ್ಕೆ ಬುದ್ಧಿ ಕಲಿಯುವ ಯಾವ ಸಾಧ್ಯತೆಯೂ ಇದ್ದಂತೆ ಕಾಣುವುದಿಲ್ಲ.

**-ಸಂಪಾದಕ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

'ಹೊಸ ಮನುಷ್ಯ'ದ ವಾರ್ಷಿಕ ವಿಶೇಷ ಸಂಚಿಕೆ ವೈಚಾರಿಕ ಲೇಖನಗಳಿಂದ ಸಮೃದ್ಧವಾಗಿದೆ. ಇದೇ ಇಂದು ನಮಗೆ ಬೇಕಾಗಿರುವ ನಿಜವಾದ 'ಅಭಿವೃದ್ಧಿ'

**–ಚೆನ್ನವೀರ ಕಣವಿ,** ಧಾರವಾಡ

'ಹೊಸ ಮನುಷ್ಯ' ಅತಿ ಕರ್ಮಠತೆಯ ಜಿಡ್ಡಿನಿಂದಲೂ, ಹಣಗಳಿಕೆಗೆ ಮಾರುಕಟ್ಟೆ ಪ್ರೇಮಿಯಾಗುವ ಅತಿ ಮಸಾಲೆಯಿಂದಲೂ ಮುಕ್ತವಾದ ಸ್ವಸ್ಥ, ಶ್ರೇಷ್ಠ ಬರಹಗಳನ್ನು ನಮಗೆ ಬಡಿಸುತ್ತಿದೆ. ಓದಲು ಆರಂಭಿಸಿದಾಗಿನಿಂದ ನನ್ನ ಮಾನಸಿಕ ಆರೋಗ್ಯ ಸುಮಾರು ಸುಧಾರಣೆ ಕಂಡಿದೆ.

ಸೆಪ್ಟೆಂಬರ್ ಸಂಚಿಕೆಯಲ್ಲಿ ವಾಜಪೇಯಿ, ಕರುಣಾನಿಧಿ ಕುರಿತ ವ್ಯಕ್ತಿ ಚಿತ್ರಗಳು ಇಷ್ಟವಾದವು. ಇಂಗ್ಲೀಷ್ ಬೋಧನೆಯಲ್ಲಿ ಎದುರಾಗುವ ತೊಡಕುಗಳನ್ನು ಪ್ರಸನ್ನಕುಮಾರ್ ಸರಿಯಾಗಿ ಗುರುತಿಸಿದ್ದಾರೆ. ಅದರ ಜೊತೆಗೇ ಪರಿಣಾಮಕಾರಿ ಇಂಗ್ಲೀಷ್ ಕಲಿಕೆಗೆ ಇರುವ ಪರ್ಯಾಯ ಮಾರ್ಗಗಳ ಕುರಿತಂತೆ ಒಂದಷ್ಟು ಚರ್ಚಿಸಬಹುದಿತ್ತು. ಸಂಪಾದಕೀಯದ ನಂತರ ನಾನು ಮೊದಲು ಓದಬಯಸುವುದೇ ಧರ್ಮವಿಚಾರ. ನನ್ನಂತಹ ಯುವಜನತೆ ಇಂದು ಡಂಭಾಚಾರದಿಂದ ದೂರವಾದ, ದುಡ್ಡಿನ ರಾವಿನಿಂದ ವಿಕೃತವಾಗದ ಆಧ್ಯಾತ್ಮಿಕ ಜ್ಞಾನದಿಂದ ಅತಿ ದೂರ ಉಳಿದಿದೆ. ಧರ್ಮವಿಚಾರ ಹೊರತುಪಡಿಸಿ ಈ ಕುರಿತ ಒಂದಷ್ಟು ಬರಹಗಳು ಬರಬಹುದೇ!? ಕವನಗಳು ಏನಾದರೂ ಬರೆವ ಆಸೆ ಹುಟ್ಟಿಸುವಂತಿವೆ.

**–ಶ್ರೀಧರ ಕೊಪ್ಪ,** ನೊಣವಿನಕೆರೆ

ವಿಶೇಷಾಂಕದಲ್ಲಿ ೨೫ ಪುಟಗಳ ಜಾಹೀರಾತುಗಳು! ಇವೆಲ್ಲವನ್ನೂ ಒಂದೇ ಪುಟದಲ್ಲಿ ಹಾಕಿ ಮುಗಿಸುವುದು ಸೂಕ್ತ.

ಜಾಹೀರಾತೀಕರಣ, ಜಾಗತೀಕರಣಗಳ ಭರಾಟೆಯಲ್ಲಿ ಮನುಷ್ಯ ಪ್ರತಿಯೊಂದನ್ನೂ (ಉಣ್ಣುವುದು, ಉಡುವುದು, ನೋಡುವುದು ಇತ್ಯಾದಿ) ಅನುಕರಣೆ ಮಾಡುತ್ತಾ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಿದ್ದಾನೆ. ಸಹಜತೆ–ಸರಳತೆಗಳನ್ನು ಉತ್ತೇಜಿಸಬೇಕಾದ ಮಾಧ್ಯಮಗಳು ಮಾಧ್ಯಮೋದ್ಯಮಗಳಾಗಿ ಮಾರ್ಪಟ್ಟು ನೀತಿ ನಿರೂಪಣೆಯ ನಿರ್ಣಾಯಕ ಜವಾಬ್ದಾರಿಯ ಸಂಪಾದಕನ ಜಾಗದಲ್ಲಿ ಸಿ.ಇ.ಓ.ಗಳು ಬಂದು ಕೂತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ 'ಹೊಸ ಮನುಷ್ಯ' ಕಾಗದ, ಪುಟ ವಿನ್ಯಾಸ, ಮುದ್ರಣ ಸುಧಾರಣೆಗಳ ಹೆಸರಿನಲ್ಲಿ ಯಾವುದೇ ಕಾರ್ಪೋರೇಟೀಕರಣದ ಲಕ್ಷಣಗಳಿಗೆ ಒಳಗಾಗದೆ ಈಗಿರುವಂತೆ ನಿರಾಭರಣ ಸುಂದರಿಯಾಗಿಯೇ ಹೊರಬರಲಿ. ಆರೋಗ್ಯಪೂರ್ಣ ಸಮಾಜವನ್ನು ಕಟ್ಟುವ ಅದರ ಬದ್ಧತೆಯೇ ಅದಕ್ಕೆ ಶ್ರೀರಕ್ಷೆಯಾಗಿರುವುದು.. ನಮ್ಮ 'ಹೊಸ ಮನುಷ್ಯ' ನೀವು ಹೇಳಿದಂತೆ ನಿಮ್ಮ ಕಲ್ಪನೆಯ ಕೂಸಾಗಿ ಕುಟೀರ ಕೈಗಾರಿಕೆಯಾಗಿಯೇ ಉಳಿಯಲಿ.

ಹೌದು, ವಿಶೇಷಾಂಕದಲ್ಲಿ ಜಾಹೀರಾತುಗಳು ಜಾಸ್ತಿಯಾದವು. ವಾಣಿಜ್ಯ ಉದ್ದೇಶದ ಜಾಹೀರಾತುಗಳ ಹೊರತಾಗಿ ಮಿಕ್ಕವನ್ನು ಒಂದೇ ಪುಟದಲ್ಲಿ ಹಾಕಬಹುದೇನೋ ಯೋಚಿಸಿ. ಲೇಖಕರಿಗೆ ಸಂಭಾವನೆ ಕೊಡುವ ಸಂಪ್ರದಾಯ ಒಳ್ಳೆಯದೇ. ಆದರೆ ಈ ಪತ್ರಿಕೆಯ ಲೇಖಕರಾರೂ ಸಂಭಾವನೆ ನಿರೀಕ್ಷಿಸಿ ಬರೆಯಲಾರರೆಂದೇ ನನ್ನ ಭಾವನೆ. ಅವರೆಲ್ಲರೂ ತಾಂತ್ರಿಕವಾಗಿಯಲ್ಲದಿದ್ದರೂ ಸಮಷ್ಟಿ ಪ್ರಜ್ಞೆಯ ನೆಲೆಯಲ್ಲಿ ಪತ್ರಿಕೆಯ ಪಾಲುದಾರರೇ ಹೌದಲ್ಲವೆ?

**–ಸಿ. ಚನ್ನಬಸವಣ್ಣ,** ಬಳ್ಳಾರಿ

ಅಗಲಿದ ಇಬ್ಬರು ಜನನಾಯಕರ ಕುರಿತು (ವಾಜಪೇಯಿ ಮತ್ತು ಕರುಣಾನಿಧಿ) ಶ್ರದ್ಧಾಂಜಲಿ ರೂಪದಲ್ಲಿ ಬರೆದ ಎರಡು ಟಿಪ್ಪಣಿಗಳು ಉತ್ತಮ ಬರಹಗಳು. ಇಂತಹ ಅಪರೂಪದ ವ್ಯಕ್ತಿಚಿತ್ರಣಕ್ಕಾಗಿ ಅವರ ಸಾವಿನವರೆಗೆ ಕಾಯಬೇಕಾದದ್ದು ಒಂದು ವಿಪರ್ಯಾಸವೇ ಸರಿ. ಕರುಣಾನಿಧಿ ಕುರಿತು ಬರೆಯುತ್ತಾ 'ಭಾರತದಲ್ಲಿ ವಂಚಿತ ಜನವರ್ಗಗಳ ಜನರನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬಲಗೊಳಿಸುವುದರ ಜೊತೆಗೇ ಅವರ ಮನಸ್ಸಿನಲ್ಲಿರುವ ಹಳೆಯ ಪಾರಂಪರಿಕ

## ಚಾಮರಾಜನಗರದಲ್ಲಿ 'ಹಸಿರು ಚಾಮರ' : ಪರಿಸರ ವಿಕೋಪ ಕುರಿತ ಕಾರ್ಯಾಗಾರ




**'ಜಾ**ಗತಿಕವಾಗಿ ಆಲೋಚಿಸು, ಸ್ಥಳೀಯವಾಗಿ ಕೆಲಸ ಮಾಡು' ಎಂಬ ನಾಣ್ಣುಡಿ ಇಂದು ಬಹು ಪ್ರಸ್ತುತವಾಗಿದೆ ಎಂದು ವಿಜ್ಞಾನ ಲೇಖಕ ನಾಗೇಶ್ ಹೆಗಡೆ ಹೇಳಿದರು. ಅವರು ಸೆಪ್ಟೆಂಬರ್ ೧೧ರಂದು ಚಾಮರಾಜನಗರದಲ್ಲಿ ಅಲ್ಲಿನ ದೀನಬಂಧು ಸಂಸ್ಥೆ, ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ ನಾಗವಲ್ಲಿಯ ಪುನರ್ಚಿತ್, ಹೊಂಡರಬಾಳುವಿನ ಅಮೃತಭೂಮಿ ಟ್ರಸ್ಟ್, ಮತ್ತು ಸ್ಥಳೀಯ ಶಾಂತಲಾ ಕಲಾವಿದರು ಸಂಯುಕ್ತವಾಗಿ ಏರ್ಪಡಿಸಿದ್ದ 'ಹಸಿರುಚಾಮರ' ವೇದಿಕೆಯಡಿಯಲ್ಲಿ ಆಯೋಜಿಸಿದ್ದ 'ಮಾಧವ ಗಾಡ್ಗೀಳ್ ಮತ್ತು ಕಸ್ತೂರಿ ರಂಗನ್ ವರದಿಗಳ ಕುರಿತ ಕಾರ್ಯಾಗಾರದಲ್ಲಿ ಮಾತನಾಡುತ್ತಿದ್ದರು. ಹೆಗಡೆಯವರು ಜಗತ್ತಿನಾದ್ಯಂತ ಘಟಿಸುತ್ತಿರುವ ಅನೇಕ ಪರಿಸರ ಸಂಬಂಧಿ ದುರಂತಗಳನ್ನು ದೃಶ್ಯಾವಳಿಗಳ ಸಮೇತ ವಿವರಿಸುತ್ತಾ ಪಶ್ಚಿಮ ಘಟ್ಟಗಳ ಸಂರಕ್ಷಣೆಯ ಸಂಬಂಧದ ಗಾಡ್ಗೀಳ್ ಮತ್ತು ಕಸ್ತೂರಿರಂಗನ್ ವರದಿಗಳನ್ನು ಸ್ಥೂಲವಾಗಿ ಪರಿಚಯಿಸಿ ಪಶ್ಚಿಮ ಘಟ್ಟಗಳು ನಿಸರ್ಗದ ಗರ್ಭಗುಡಿ ಮತ್ತು ಇಡೀ ದಕ್ಷಿಣ ಭಾರತಕ್ಕೆ ನೀರನ್ನು ಒದಗಿಸುವ ಮಹಾ ಜಲಾಶಯ ಎಂದು ವರ್ಣಿಸುತ್ತ ಈ ಘಟ್ಟ ಪ್ರದೇಶವನ್ನು ಅಭಿವೃದ್ಧಿ ಮತ್ತು ಮೋಜಿನ ಹೆಸರಲ್ಲಿ ದುರುಪಯೋಗ ಮಾಡುತ್ತಿರುವುದನ್ನು ಮುಂದುವರಿಸಿದರೆ ಇಡೀ ದಕ್ಷಿಣ ಭಾರತದ ಜನಸಾಮಾನ್ಯರು ಎಣಿಸಲಾಗದಂಥ ಸಂಕಷ್ಟಗಳನ್ನು ಅನುಭವಿಸಬೇಕಾದೀತು ಎಂದು ಎಚ್ಚರಿಸಿದರು.

ನಂತರದಲ್ಲಿ ಮಾತನಾಡಿದ ನಿವೃತ್ತ ಅರಣ್ಯಾಧಿಕಾರಿ ಶ್ರೀ.ಎಲ್ಲಪ್ಪರೆಡ್ಡಿ ತಮ್ಮ ಅಧಿಕಾರಾವಧಿಯಲ್ಲಿ ಅನೇಕ ಪರಿಸರ ಸಂರಕ್ಷಣೆಯ ಕ್ರಮಗಳನ್ನು ಜಾರಿಗೊಳಿಸಲು ಪ್ರಯತ್ನಿಸಿದ್ದು ಆ ಪ್ರಯತ್ನಕ್ಕೆ ಮಾಜಿ ಮುಖ್ಯಮಂತ್ರಿ ದೇವರಾಜ್‌ಅರಸು ಬಿಟ್ಟರೆ ನಂತರದ ಮತ್ತಾವ ರಾಜಕಾರಣಿಯೂ ಅವರ ಪರಿಸರ ಸಂರಕ್ಷಣೆಯ ಸಂಬಂಧಿ ಕಾಯಿದೆ ಮತ್ತು ವರದಿಗಳಿಗೆ ಮನ್ನಣೆ ಕೊಡದೆ ದೊಡ್ಡ ಅವ್ಯವಹಾರಗಳಿಗೆ ಮತ್ತು ಪರಿಸರ ನಾಶಕ್ಕೆ ಕಾರಣವಾಗಿದ್ದನ್ನು ಸ್ಮರಿಸಿ ಅಧಿಕಾರ ಕೇಂದ್ರದಲ್ಲಿರುವವರು ಭ್ರಷ್ಟರಾಗಿರುವವರೆಗೂ ದೊಡ್ಡ ಮಟ್ಟದಲ್ಲಿ ಒಳಿತನ್ನು ಸಾಧಿಸುವುದು ಕಷ್ಟ ಎಂದರು.

ಕೊನೆಯಲ್ಲಿ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಅಧ್ಯಕ್ಷರಾದ ಡಿ.ಎಸ್.ನಾಗಭೂಷಣ ಅವರು ಮಾತನಾಡಿ ಕೊಡಗು ಮತ್ತು ಕೇರಳ ದುರಂತಗಳು ಬಿಡಿಬಿಡಿ ಘಟನೆಗಳಲ್ಲದೆ ಯುರೋಪಿನ "ಜ್ಞಾನಯುಗ"ದ ಆಲೋಚನೆಗಳಿಂದ ಪ್ರೇರಿತವಾಗಿ ರೂಢಿಸಿಕೊಂಡ ಆಧುನಿಕ ವಿಜ್ಞಾನ ಮತ್ತು ಆರ್ಥಿಕತೆಯ ಮಾದರಿಗಳ ಎಡಬಿಡದ ಪರಿಣಾಮಗಳಷ್ಟೇ ಎಂದು ವಿಶ್ಲೇಷಿದರು. ಸೃಷ್ಟಿಯನ್ನು ತಾರ್ಕಿಕ ಅಧ್ಯಯನಕ್ಕೆ ಒದಗುವ ಜಡವಸ್ತುವೆಂದು ಪರಿಭಾವಿಸಿ ಮಿತಿಯಿಲ್ಲದ ದೈಹಿಕ ಸುಖ–ಸೌಕರ್ಯಗಳಿಗಾಗಿ ಭೂ ಮಂಡಲವನ್ನು ಸೂರೆ ಮಾಡತೊಡಗಿರುವ ಸದ್ಯದ ಲೋಕದೃಷ್ಟಿ ಬದಲಾಗದ ಹೊರತು ಇಂತಹ ಅನಾಹುತಗಳು ತಪ್ಪಿದ್ದಲ್ಲ; ಮನುಷ್ಯನಿಗೆ ನೆಮ್ಮದಿಯಿಲ್ಲ ಎಂದು ವಿವರಿಸಿದರು.

ನಂತರದ ಚರ್ಚೆಯಲ್ಲಿ ಹೆಚ್ಚಿನ ಜನ ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಕಾಣಿಸಿಕೊಳ್ಳುತ್ತಿರುವ ಸಮಸ್ಯೆಗಳು, ಜನಪ್ರತಿನಿಧಿಗಳ ಪಾತ್ರಬೆಳೆಗಳಿಗೆ ರಾಸಾಯನಿಕಗಳ ಬಳಕೆ,ನೀರಿನ ಕ್ಷಾಮ,ಬರ ಇತ್ಯಾದಿ ಸಮಸ್ಯೆಗಳನ್ನು ಚರ್ಚಿಸಲಾಯಿತು.ಸ್ಥಳೀಯ ಅನೇಕ ಅಧಿಕಾರಿಗಳು,ಗಣ್ಯರೂ,ರೈತರು ಉಪಸ್ಥಿತರಿದ್ದರು.

ದೀನಬಂಧು ಸಂಸ್ಥೆಯ ಜಿ.ಎಸ್.ಜಯದೇವ ಪ್ರಾಸ್ತಾವಿಕ ಮಾತುಗಳನ್ನಾಡಿ ಎಲ್ಲರನ್ನೂ ಸ್ವಾಗತಿಸಿದರು. ಪ್ರಜ್ಞಾ ನಿರೂಪಿಸಿದರು. ಸುನೀಲ್ ವಂದಿಸಿದರು.

(ವರದಿ : **ಬಿ.ವಿ. ಸುರೇಂದ್ರ**)

# ಲೋಹಿಯಾ-ಜೆಪಿ :ಇಬ್ಬರು ಮಹಾ ಸಮಾಜವಾದಿಗಳ ನೆನಪು



ಅಕ್ಟೋಬರ್ ತಿಂಗಳು ಸಮಾಜವಾದದಲ್ಲಿ ನಂಬಿಕೆ ಇಟ್ಟ ಭಾರತೀಯರಿಗೆ ಬಹು ಮುಖ್ಯ ತಿಂಗಳು. 'ಸಮಾಜವಾದ ಎಂಬುದು ಬಹು ಸುಂದರ ಶಬ್ದ' ಎಂದು ಹೇಳುತ್ತಾ, 'ನಾನು ಹುಟ್ಟು ಸಮಾಜವಾದಿ' ಎಂದು ಘೋಷಿಕೊಂಡ ಮಹಾತ್ಮ ಗಾಂಧಿ ಮತ್ತು ಭಾರತದ ಸಮಾಜವಾದಿ ಪಕ್ಷ ಮತ್ತು ಸಂಘಟನೆಗೆ ಅಡಿಗಲ್ಲು ಹಾಕಿದ ಲೋಕನಾಯಕ ಜಯಪ್ರಕಾಶ್ ನಾರಾಯಣ್ (ಅಕ್ಟೋಬರ್ ೧೧) ಇವರ ಹುಟ್ಟುಹಬ್ಬಗಳ ತಿಂಗಳಾದರೆ ಭಾರತೀಯ ಸಮಾಜವಾದಕ್ಕೆ ತಮ್ಮ ಉಜ್ವಲ ಪ್ರತಿಭೆ ಮತ್ತು ಸಂಘರ್ಷದ ರಾಜಕಾರಣದ ಮೂಲಕ ತನ್ನದೇ ಆದ ವಿಶಿಷ್ಟ ರೂಪ ನೀಡಿದ ರಾಮನೋಹರ ಲೋಹಿಯಾ ವರ ಪುಣ್ಯತಿಥಿ (ಅಕ್ಟೋಬರ್ ೧೨) ತಿಂಗಳು. ಈ ಮುವ್ವರಲ್ಲಿ ಮೊದಲಿಗರು ಉಳಿದಿಬ್ಬರ ಗುರು. ಜೆಪಿ ಮತ್ತು ಲೋಹಿಯಾ ಗಾಂಧಿಯವರೊಂದಿಗೆ ಜಗಳಾಡುತ್ತಲೇ ಅವರ ಆಪ್ತ ಶಿಷ್ಯರಾದವರು. ವಿಶೇಷವಾಗಿ, ಪ್ರಖರ ಮಾರ್ಕ್ಸ್‌ವಾದಿಯಾಗಿದ್ದ ಜೆಪಿ, ಮಾರ್ಕ್ಸ್‌ವಾದದಲ್ಲಿ ಮನುಷ್ಯನನ್ನು ಒಳ್ಳೆಯವನನ್ನಾಗಿ ಮಾಡುವಂತಹದ್ದೂ ಏನೂ ಇಲ್ಲವೆಂದು ಕಂಡುಕೊಂಡದ್ದು, ಗಾಂಧಿ ಮಾರ್ಗವನ್ನು ಒಪ್ಪಿಕೊಂಡದ್ದು ಗಾಂಧಿಯವರ ಮರಣದ ನಂತರವೇ. ಆದರೆ ಲೋಹಿಯಾ ಗಾಂಧಿ ಭಕ್ತರಾಗಿದ್ದ ಹೀರಾಲಾಲ್ ಮಗನಾಗಿದ್ದೂ ತಮ್ಮನ್ನು ನಾಸ್ತಿಕ ಎಂದು ಕರೆದುಕೊಂಡು ಗಾಂಧಿಯವರ ಧಾರ್ಮಿಕ ರಾಜಕಾರಣಕ್ಕೆ ಆಧುನಿಕ ವೈಚಾರಿಕತೆಯ ಸ್ಪರ್ಶ ನೀಡಿ ಅದನ್ನು ಭಾರತೀಯ ಸಮಾಜವಾದ ಎಂಬುದೊಂದನ್ನು ಕಟ್ಟಲು ಸೃಜನಶೀಲವಾಗಿ ಬಳಸಿದವರು. ಸತ್ಯಾಗ್ರಹದ ಆಂತರಿಕ ಧಾರ್ಮಿಕತೆಗೆ ಬಾಹ್ಯ ಹೋರಾಟದ ಕೆಚ್ಚನ್ನೂ ತುಂಬಿ ಹಲ್ಲು ಕಳೆದುಕೊಂಡಿದ್ದ ಗಾಂಧಿವಾದಕ್ಕೆ ಗಾಂಧಿಯೋತ್ತರ ಕಾಲಕ್ಕೆ ಬೇಕಾದ ಜೀವಂತಿಕೆಯನ್ನು ಒದಗಿಸಿದವರು ಅವರು.

ಜೆಪಿ ಮತ್ತು ಲೋಹಿಯಾ ೧೯೩೪ರ ಅಕ್ಟೋಬರ್‌ನಲ್ಲಿಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದ ದಿನಗಳಿಂದಲೂ ಆಪ್ತ ಸ್ನೇಹಿತರೇ ಆಗಿದ್ದವರು. ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳವಳಿಯ ಸಂದರ್ಭಧಲ್ಲಿ ಜೆಪಿ ಮತ್ತು ಲೋಹಿಯಾ ಭೂಗತರಾಗಿ ಸಂಘಟಿಸಿದ ಹೋರಾಟ ಮತ್ತು ಕಾರ್ಯಚರಣೆಗಳು ಮತ್ತು ಆ ಕಾರಣದಿಂದಾಗಿ ಆ ಇಬ್ಬರೂ ಲಾಹೋರ್ ಕೋಟೆಯ ಸೆರೆಮನೆಯಲ್ಲಿ ಬ್ರಿಟಿಷ್ ಪ್ರಭುತ್ವದಿಂದ ಅನುಭವಿಸಿದ ಚಿತ್ರ ಹಿಂಸೆ ಈ ಇಬ್ಬರನ್ನೂ ಆಗ ದೇಶದ ಯುವ ಕಣ್ಮಣಿಗಳನ್ನಾಗಿಸಿತ್ತು. ಆದರೆ ಗಾಂಧಿ ಹತ್ಯೆಯ ನಂತರ ಕಾಂಗ್ರೆಸ್‌ನಿಂದ ಹೊರಬೀಳಬೇಕಾಗಿ ಬಂದು ಹೊಸ ಸಮಾಜವಾದಿ ಪಕ್ಷವನ್ನು ಕಟ್ಟಲಾರಂಭಿಸಿದ ಕೆಲವೇ ದಿನಗಳಲ್ಲಿ ಈ ಇಬ್ಬರೂ ಬೇರೆ ದಾರಿ ಹಿಡಿಯುವಂತಾದದ್ದು ಭಾರತದ ಸಮಾಜವಾದಿ ಚಳುವಳಿಯ ನಿಜವಾದ ದುರಂತ.



ಈ ದುರಂತದ ಮೂಲ ಇದ್ದುದು ಈ ಇಬ್ಬರ ವ್ಯಕ್ತಿಗಳ ಮೂಲ ಸ್ವಭಾವದಲ್ಲೇ. ಜೆಪಿ ಪ್ರಭುತ್ವವೂ ಸೇರಿ ಎಲ್ಲರೊಂದಿಗೆ ಹೊಂದಿಕೊಂಡು ಹೋಗುವ ಉದಾರವಾದಿವಾಗಿದ್ದರೆ ಲೋಹಿಯಾ ಏಕೋದ್ರಢ ಮನಸ್ಸಿನಿಂದ ಗಾಂಧಿ ಸ್ಫೂರ್ತಿಯಲ್ಲಿ ಭಾರತ್ಕಾಗಿ ಒಂದು ಪರ್ಯಾಯ ರಾಜಕೀಯ ಹಾದಿಯನ್ನು ನಿರ್ಮಿಸಹೊರಟ ನಿಷ್ಠುರವಾದಿಯಾಗಿದ್ದರು. ಈ ಎರಡೂ ವ್ಯಕ್ತಿಗಳ ಸಂಘರ್ಷದ ಬಿಸಿ ಭಾರತದ ಸಮಾಜವಾದಿ ಚಳುವಳಿಯನ್ನು ತಾಗದೇ ಇರಲಿಲ್ಲ. ಅದು ಜೆಪಿಯವರನ್ನು ಸರ್ವೋದಯ ಚಳುವಳಿಯತ್ತ ತಳ್ಳಿದರೆ ಲೋಹಿಯಾರನ್ನು ಮತ್ತೆ ಮತ್ತೆ ಭಾರತೀಯ ಸೆರೆಮನೆಗಳಿಗೆ ತಳ್ಳಿತು. ಈ ಪ್ರತಿಭಟನೆಯ ಸೆರೆಮನೆ ವಾಸಗಳ ರಾಜಕಾರಣದ ಮಧ್ಯೆ ಲೋಹಿಯಾಗೆ ಜೆಪಿಯ ವ್ಯಕ್ತಿತ್ವ ಮಾತ್ರ ದೇಶವನ್ನು ಅಲುಗಾಡಿಬಲ್ಲದು ಎಂದು ಅನ್ನಿಸಿ, ಅದನ್ನು ಹಲವು ಬಾರಿ ಬಹಿರಂಗವಾಗಿ ಹೇಳಿದರು ಕೂಡ. ಆದರೆ ಆ ಹೊತ್ತಿಗೆ ಜೆಪಿ ಪಕ್ಷ ರಾಜಕಾರಣದಿಂದ ಬಹು ದೂರ ಸರಿದಿದ್ದರು. ಆದರೆ ಲೋಹಿಯಾರ ಪ್ರತಿಭಟನೆಯ ರಾಜಕಾರಣ ಅವರ ಪ್ರಾಣವನ್ನೇ ಬಲಿ ತೆಗೆದುಕೊಂಡಾಗ ಜೆಪಿ, 'ಅಯ್ಯೋ! ರಾಮನೋಹರ ನನ್ನ ತಮ್ಮ.. ನನಗಿಂತ ಎಂಟು ವರ್ಷ ಚಿಕ್ಕವನು. ಆ ಚಿತೆಯ ಮೇಲೆ ಇರಬೇಕಾಗಿದ್ದವನು ನಾನು; ಅವನಲ್ಲ ಎಂದು ಗೋಳಿಟ್ಟರು.

ಜೆಪಿಯವರ ಈ ಗೋಳು ಬರೀ ಗೋಳಾಗಿರಲಿಲ್ಲ. ಅದು ಅವರನ್ನು ಚಿಂತೆಗೂ ಹಚ್ಚಿದಕ್ಕೆ ಸಾಕ್ಷಿಯಾಗಿ ಅನತಿ ಕಾಲದಲ್ಲೇ ಅವರು 'ತಮ್ಮ 'ಸಂಪೂರ್ಣ ಕ್ರಾಂತಿ' ಚಳುವಳಿಯ ಮೂಲಕ ಲೋಹಿಯಾ ಪ್ರತಿಪಾದಿಸಿದ್ದ 'ಕಾಂಗ್ರೆಸ್ಸೇತರವಾದ'ದ ಪ್ರಸ್ತುತತೆಯನ್ನು ಮನಗಂಡು ೧೯೭೭ರಲ್ಲಿ ಜನತಾ ಸರ್ಕಾರವೆಂಬ ಭಾರತದ ಮೊದಲ ಕಾಂಗ್ರೆಸ್ಸೇತರ ಸರ್ಕಾರ ರಚನೆಗೆ ಕಾರಣರಾದರು.

ಅಲ್ಲಿಂದಾಚೆಗೆ ಭಾರತದ ರಾಜಕೀಯ ಇತಿಹಾಸದಲ್ಲಿ ಸಾಕಷ್ಟು ನೀರು ಹರಿದು ಹೋಗಿದೆ. ಜಾಗತೀಕರಣ ರಾಜಕಾರಣದ ದಿಕ್ಕುದೆಸೆಗಳನ್ನೇ ಬದಲಿಸಿದೆ. ಗಾಂಧಿಯನ್ನು ಸ್ವಚ್ಛ ಭಾರತಕ್ಕಾಗಿ ಮಾತ್ರ ನೆನಪಿಕೊಳ್ಳುವಂತಹ ಘಾತುಕ ರಾಜಕಾರಣ ಆರಂಭವಾಗಿದೆ. ಇಂತಹ ಸಂದರ್ಭದಲ್ಲಿ ಗಾಂಧಿಯ ಈ ಇಬ್ಬರು ಪ್ರಯೋಗಶೀಲ ಶಿಷ್ಯರ ನೆನಪು ನಮ್ಮನ್ನು ದಟ್ಟವಾಗಿ ಕಾಡಬೇಕಿದೆ. ಮತ್ತೆ ಆ ದಿನಗಳ 'ಅಂಧೇರಿ ಕೀ ತೀನ್ ಪ್ರಕಾಶ್! ಗಾಂಧಿ-ಲೋಹಿಯಾ-ಜಯಪ್ರಕಾಶ್!!' ಎಂಬ ಘೋಷಣೆ ನಮ್ಮ ಮಧ್ಯೆ ಮೊಳಗಬೇಕಿದೆ.

**-ಡಿಎಸ್ನೆಸ್**

---

ನಂಬಿಕೆಗಳ ಕಿಲುಬನ್ನೂ ತೆಗೆಯುವ ಕೆಲಸವಾಗದಿದ್ದರೆ ನಾವು ಕಾಣಲು ಸಾಧ್ಯವಾಗುವುದು ಒಂದು ಸಬಲ ಕ್ರೂರ ಸಮಾಜವನ್ನೇ ಹೊರತು ಹೊಸದೊಂದು ಘನತೆಯ ನಾಗರಿಕ ಸಮಾಜವನ್ನಲ್ಲ' ಎಂಬ ನಿಮ್ಮ ಮಾತುಗಳನ್ನು ಕರ್ನಾಟಕದ ಇಂದಿನ ಚಳವಳಿಗಾರರು ಅರಿತುಕೊಂಡಾರೆಯೆ?

**-ಎನ್.ಎಂ. ಕುಲಕರ್ಣಿ**, ಹೆಗ್ಗೋಡು

ಸೆಪ್ಟಂಬರ್ ಸಂಚಿಕೆಯಲ್ಲಿ ಇಂಗ್ಲಿಷ್ ಬೋಧನೆಯ ಸವಾಲುಗಳು ('ಯುವಲಹರಿ') ಕುರಿತ ಪ್ರಸನ್ನ ಕುಮಾರ್ ಅವರ ಲೇಖನ ವಿಷಯ ಕುರಿತ ಕರಾರುವಾಕ್ಕಾದ ವಿಶ್ಲೇಷಣೆಯಾಗಿದೆ.

ಸುಮಿತ್ರಾಬಾಯಿಯವರ ಪುಸ್ತಕ ವಿಮರ್ಶೆಯಲ್ಲಿನ, ಅವರ ಹಿರಿಯರು ಉನ್ನತ ಸರ್ಕಾರಿ ಹುದ್ದೆಗಳಲ್ಲಿದ್ದುದರಿಂದಲೇನೋ ಅವರು ಅಸ್ಪೃಶ್ಯತೆಯ ಸೋಂಕಿಲ್ಲದೆ ಬೆಳೆದ ಅದೃಷ್ಟವಂತೆ ಎಂಬ ನಿಮ್ಮ ಮಾತು ಮೇಲು-ಕೀಳುಗಳು ಸವರ್ಣೀಯರ ಡಿಎನ್‌ಎಯಲ್ಲಿಯೇ ಇದೆ ಎಂಬ ನಂಬಿಕೆಯನ್ನು ಸ್ವಲ್ಪ ಮಟ್ಟಿಗಾದರೂ ನಿವಾರಿಸುವಂತಹ ಆಶಾಭಾವನೆ ಹುಟ್ಟಿಸುವಂತಿದೆ.

ಸಿರಾಜ್ ಅಹಮದ್ ಅವರು ನಡೆಸಿರುವ ಗಣೇಶ್ ದೇವಿಯವರ ಸಂದರ್ಶನ ಮನನೀಯವಾಗಿವೆ. ನಮ್ಮ ಎಲ್ಲ ವಿದ್ವಾಂಸ 'ಆಕ್ಟಿವಿಸ್ಟ್'ರೂ ಪ್ರೊ. ದೇವಿಯವರಂತೆ ತಂತಮ್ಮ ಕ್ಷೇತ್ರಗಳಲ್ಲಿ ಇಂತಹುದೇ ಕೆಲಸ ಕೈಗೊಂಡರೆ ನಾವು ನಮ್ಮ ಸಮಾಜವನ್ನು ಅರಿಯಲು ವಿದೇಶಿ ವಿದ್ವಾಂಸರನ್ನು ಅವಲಂಬಿಸುವುದು ತಪ್ಪಬಹುದು.

**-ಗಿರೀಶ್ ವಿ. ವಾಘ್**, ಬೆಂಗಳೂರು

'ಹೊಸ ಮನುಷ್ಯ' ಸೊಗಸಾಗಿದೆ ಯಾವುದೇ ಪತ್ರಿಕೆಯ ಜೀವಂತಿಕೆ ಅಭಿವ್ಯಕ್ತವಾಗುವುದು ಅದರ ಸಂಪಾದಕೀಯದಲ್ಲಿ. ಪರಿಣಾಮಕಾರಿಯಾಗಿ ಬರೆದಿದ್ದೀರಿ. ಏಕವ್ಯಕ್ತಿ ಸಾಹಸವಾಗಿ ನೀವು ಪತ್ರಿಕೆಯನ್ನು ಹೊರತರುತ್ತಿರುವಾಗ ಅದರ ಗುಣಮಟ್ಟದ ಬಗ್ಗೆ ದೀರ್ಘ ಸಮಜಾಯಿಸಿ ಕೊಡುವ ಅಗತ್ಯವಿರಲಿಲ್ಲ. ಇರಲಿ. ಕರುಣಾನಿಧಿಯವರ ಬಗೆಗಿನ ಲೇಖನ ರಾಜಕೀಯದ ಇನ್ನೊಂದು ಮಗ್ಗಲಿನ ದರ್ಶನ ಮಾಡಿಸಿದಂತೆ ಆಯಿತು. ಹಾಗೆ ಪುಸ್ತಕಾವಲೋಕನದಲ್ಲಿ , ಸುಮಿತ್ರಾಬಾಯಿಯವರ ಪುಸ್ತಕಕ್ಕೆ ವಸ್ತುನಿಷ್ಠ ವಿಮರ್ಶೆ ಬಹು ಸೊಗಸಾಗಿದೆ.ಕುವೆಂಪು ವರ್ಸಸ್ ಅಂಬೇಡ್ಕರ್ ಟಿಪ್ಪಣಿ ಕೂಡಾ. ರವೀಂದ್ರ ರೇಷ್ಮೆಯವರ ರಾಜ್ಯ ರಾಜಕಾರಣದ ವಿಶ್ಲೇಷಣೆ ಪ್ರಸ್ತುತ ರಾಜಕಾರಣದ ಕೈಗನ್ನಡಿ. ಯಾವುದೇ ಪತ್ರಿಕೆಯಾಗಲಿ ನಿರ್ಭಿಡೆಯಿಂದ ಹೇಳಬೇಕಾಗಿದ್ದನ್ನು ಸರಿಯಾಗಿ ಜನಮನಕ್ಕೆ ಮುಟ್ಟುವಂತೆ ಹೇಳಿದಲ್ಲಿ ಅದೇ ವಾಚಕರ ಸೌಭಾಗ್ಯ. ಈ ನಿಟ್ಟಿನಲ್ಲಿ ಈ ಪತ್ರಿಕೆ ಯಶಸ್ವಿಯಾಗಿ ಮುಂದುವರಿಯಲಿ. ಎಂದು ಹಾರೈಸುವೆ.

**-ರೇಶ್ಮಾ ಸುಧೀರ್**, ದಾರದ ಹಳ್ಳಿ.

ಪತ್ರಿಕೆ ಚೆನ್ನಾಗಿ ಬರುತ್ತಿದೆ. ಅಭಿಪ್ರಾಯ ತಿಳಿಸಿಲ್ಲವೆಂದರೆ ಪ್ರತಿಕ್ರಿಯೆ ಇಲ್ಲವೆಂದಲ್ಲ. ಹೆಸರಿನೊಂದಿಗೆ ನಾಲ್ಕು ಸಾಲು ಬರೆಯಲು ಸಂಕೋಚ; ಕೆಲವೊಮ್ಮೆ ಅನವಶ್ಯಕ.

**-ಎಚ್.ಎಸ್. ಮಾಧವರಾವ್, ಬೆಂಗಳೂರು**

**(ಇನ್ನಷ್ಟು ಪತ್ರಗಳಿಗಾಗಿ ಮುಂದಿನ ಪುಟ ನೋಡಿ)**

**ಪ್ರೊ. ಗಣೇಶ್ ಎನ್. ದೇವಿಯವರೊಡನೆಯ ಡಾ. ಎಸ್. ಸಿರಾಜ್ ಅಹಮದ್‌ರ ಸಂದರ್ಶನದ ಕೊನೆಯ ಭಾಗ ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗಲಿದೆ.-ಸಂ.**

ವಿದೇಶ ವ್ಯವಹಾರ

# ಪಾಕಿಸ್ತಾನದೊಡನೆಯ ಸಂಬಂಧ: ಇಮ್ರಾನ್ ಖಾನ್ ಸುಧಾರಿಸಿಯಾರೆ?



**ಅಂತಾರಾಷ್ಟ್ರೀಯ ತಾರಾ ಕ್ರಿಕೆಟಿಗ ಇಮ್ರಾನ್ ಖಾನ್ ಎರಡು ದಶಕಗಳ ರಾಜಕೀಯ ಹೋರಾಟದ ನಂತರ ಪಾಕಿಸ್ತಾನದ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದಾಗ ಸಾಂಪ್ರಾಯಿಕ ರಾಜಕಾರಣದಾಚೆಯ ಮತ್ತು ಕ್ರೀಡಾಮನೋಭಾವದ ಅವರ ವ್ಯಕ್ತಿತ್ವ ಭಾರತಕ್ಕೆ ನಿರಂತರ ತಲೆನೋವಾಗಿರುವ ಪಾಕಿಸ್ತಾನದೊಡನೆಯ ಸಂಬಂಧದ ಬಿಗುವು ಕಡಿಮೆಯಾಗಬಹುದೆಂಬ ಆಶಾಭಾವನೆ ಜನಸಾಮಾನ್ಯರಲ್ಲಿ ಹುಟ್ಟಿತ್ತು. ಆದರೆ ವಾಸ್ತವ ಬೇರೆಯೇ ಇದೆ ಎಂದು ಈ ವಿಶ್ಲೇಷಣೆ ಹೇಳುತ್ತದೆ. ಆದರೆ ಕ್ರಿಕೆಟ್ ತಂಡದ ನಾಯಕನಾಗಿ ಇಮ್ರಾನ್ ತಂಡವನ್ನು ಯಶಸ್ವಿಯಾಗಿ ಮುನ್ನಡೆಸುವಲ್ಲಿ ತೋರಿದ ವಿಶೇಷ ಜಾಣ್ಮೆಯ ಬಗ್ಗೆ ಭರವಸೆ ಇರುವವರು ಖಂಡಿತ ದೇಶದ ನಾಯಕತ್ವದಲ್ಲೂ ಇಮ್ರಾನರ ಕೈಚಳಕಕ್ಕಾಗಿ ಎದುರುನೋಡಬಹುದಾಗಿದೆ. –ಸಂ.**

**ಪಾ**ಕಿಸ್ತಾನದಲ್ಲಿ ಇತ್ತೀಚೆಗೆ ಚುನಾವಣೆ ಮುಗಿದಿದ್ದು ಇಮ್ರಾನ್ ಖಾನ್ ಅವರ ನೇತೃತದ ಹೊಸ ನಾಗರೀಕ ಸರ್ಕಾರವೊಂದು ಅಸ್ತಿತ್ವಕ್ಕೆ ಬಂದಿದೆ. ಇದು ಭಾರತ ಪಾಕಿಸ್ತಾನಗಳ ನಡುವಿನ ಸಂಬಂಧದ ಹೊಸ ಶಕೆಯೊಂದಕ್ಕೆ ನಾಂದಿಯಾದೀತೇ? ಎಂಬ ಪ್ರಶ್ನೆ ಶಾಂತಿಯನ್ನು ಬಯಸುವ ಎರಡೂ ದೇಶಗಳ ಜನರಲ್ಲಿ ಮೂಡಿರುವುದು ಸಹಜವೇ. ಆದರೆ ವಸ್ತುಸ್ಥಿತಿ ಈ ಆಶಾವಾದಕ್ಕೆ ಪೂರಕವಾಗಿಲ್ಲ ಎಂಬುದು ಸದ್ಯದ ವಾಸ್ತವ. ಮುಖ್ಯವಾಗಿ ಇನ್ನೂ ಮಾಗದ ವಿಭಜನೆಯ ಗಾಯ, ಕಾಶ್ಮೀರ ಸಮಸ್ಯೆಯೆಂಬ ಕ್ಯಾನ್ಸರ್, ಈ ಹಿಂದಿನ ಯುದ್ಧಗಳು, ಭಾರತದ ವಿರುದ್ಧದ ಪಾಕ್ ಪ್ರಾಯೊಜಿತ ಭಯೋತ್ಪಾದನೆ, ಎಲ್ಲಕ್ಕಿಂತ ಪಾಕಿಸ್ತಾನದ ನಾಗರೀಕ ಸರ್ಕಾರಗಳ ಮೇಲೆ ಸೇನೆಯ ನಿಯಂತ್ರಣ ಹೀಗೆ ದ್ವಿಪಕ್ಷೀಯ ಸಂಬಂಧವನ್ನು ನಿಯಂತ್ರಿಸುವ ಹಲವು ಸಂಕೀರ್ಣ ಸಂಗತಿಗಳ ಹಿನ್ನೆಲೆಯಲ್ಲಿ ನೋಡಿದಾಗ. ಸಂಸತ್‌ನಲ್ಲಿ ಸ್ಪಷ್ಟ ಬಹುಮತವಿಲ್ಲದ ಇಮ್ರಾನ್ ಖಾನ್‌ರ ಸರ್ಕಾರವು ಹಿಂದಿನ ನವಾಜ್ ಷರೀಫ್ ಸರ್ಕಾರಕ್ಕಿಂತಲೂ ಹೆಚ್ಚು ದುರ್ಬಲವಾಗಿರುವುದು ಸ್ಪಷ್ಟ,

ಪಾಕಿಸ್ತಾನದ ಚುನಾವಣಾ ರಾಜಕೀಯದಲ್ಲಿ ವಿದೇಶಾಂಗ ನೀತಿಗೆ ಎಂದೂ ಅಂತಹ ಮಹತ್ವವಿಲ್ಲ. ಬಹಳಷ್ಟು ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ವಿದೇಶಾಂಗ ನೀತಿಯ ವಿಷಯವನ್ನು ಮೇಲ್ಮೈಯಲ್ಲಷ್ಟೇ ಪ್ರಸ್ತಾಪಿಸುತ್ತವೆ. ಈ ಸಲದ ಚುನಾವಣೆಯಲ್ಲಿ ಇಮ್ರಾನ್ ಅವರ ತೆಹ್ರೀಕ್–ಎ–ಇನ್ಸಾಫ್ ಪಕ್ಷ ಇದಕ್ಕೆ ಹೊರತಾಗಿರಲಿಲ್ಲ. ಹಾಗೆ ನೋಡಿದರೆ ಅಲ್ಲಿನ ಯಾವ ಪಕ್ಷವೂ ಚುನಾವಣಾ ಪ್ರಣಾಳಿಕೆಗಳಲ್ಲಿ ಕಾಶ್ಮೀರ ಸಮಸ್ಯೆಯನ್ನು ಒಂದು ಪ್ರಮುಖ ವಿಚಾರವನ್ನಾಗಿ ಮಾಡಿಕೊಂಡಿರಲಿಲ್ಲ. ಅದರೆ ಭಾರತಕ್ಕೆ ಖುಷಿ ತರುವ ಒಂದು ಸಂಗತಿ ಎಂದರೆ, ಕಾಶ್ಮೀರದ ಹೆಸರಿನಲ್ಲಿ ಹಿಂಸೆಯನ್ನು ಪ್ರಚೋದಿಸುವ ಗುಂಪುಗಳನ್ನು ಬೆಂಬಲಿಸುವ ಅಭ್ಯರ್ಥಿಗಳಿಗೆ ಮತದಾರ ಕ್ಯಾರೇ ಎಂದಿಲ್ಲ. ಪಾಕಿಸ್ಥಾನದ ಜನಸಾಮಾನ್ಯನಿಗೆ ತನ್ನ ದೈನಂದಿನ ಬದುಕಿನ ಭದ್ರತೆ ಭರವಸೆಗಳು ಮುಖ್ಯವೇ ಹೊರತು ಕಾಶ್ಮೀರವಲ್ಲ ಎಂಬ ಸಂದೇಶವನ್ನು ಈ ಚುನಾವಣಾ ಫಲಿತಾಂಶದಲ್ಲಿ ಕಾಣಬಹುದು.

ಪಾಕಿಸ್ತಾನದಲ್ಲಿ ಸೇನೆಯ ಪ್ರಾಬಲ್ಯಕ್ಕೆ ಬಹು ಮುಖ್ಯ ಸಾಧನವಾಗಿರುವ ಕಾಶ್ಮೀರ ಸಮಸ್ಯೆಯು ಪರಿಹಾರವಾಗದೇ ಇರುವುದರಲ್ಲಿಯೇ ಅದರ ಹಿತಾಸಕ್ತಿ ಅಡಗಿರುವುದರಿಂದ ಅದರ ಪರಿಹಾರಕ್ಕೆ ಸೇನೆಯದೇ ದೊಡ್ಡ ಅಡ್ಡಗಾಲು. ಇಮ್ರಾನ್ ಅವರ ಪಕ್ಷದ ಪ್ರಣಾಳಿಕೆಯು ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ ಒಂದು ನೀಲ ನಕ್ಷೆ ರಚಿಸುವ ಮಾತನ್ನೇನೋ ಆಡುತ್ತದೆ. ಆದರೆ ಅದರ ಯಾವ ವಿವರಗಳೂ ಅದರಲ್ಲಿಲ್ಲ. ಇಮ್ರಾನ್‌ರ ಪಕ್ಷವು ಸೇನೆಯೊಂದಿಗೆ ಹೊಂದಿರುವ ನಿಕಟ ಬಾಂಧವ್ಯವನ್ನು ಅವರ ಶತ್ರುಗಳು ಪ್ರಸ್ತಾಪಿಸಿ, ಮುಂದಿನ ದಿನಮಾನಗಳಲ್ಲೂ ಸಹ ದೇಶದ ಭದ್ರತೆ ಮತ್ತು ವಿದೇಶಾಂಗ ನೀತಿಯ ವಿಚಾರದಲ್ಲಿ ಸೇನೆಯ ಪ್ರಾಬಲ್ಯವು ಮುಂದುವರಿಯಲಿದೆ ಎನ್ನುತ್ತಾರೆ. ಇಮ್ರಾನ್ ಅವರು ನಡೆಸುತ್ತಿದ್ದ ಪ್ರತಿಭಟನೆಗಳಿಗೆ ಸಹಾಯಕವಾಗಿರುವ ಮೂಲಕ, ಕೆಳ ನ್ಯಾಯಾಲಯಗಳ ಮೇಲೆ ಪ್ರಭಾವ ಬೀರಿ ನವಾಜ್ ಷರೀಫ್‌ರ ವಿರುದ್ಧದ ಆರೋಪಗಳಲ್ಲಿ ಅವರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳುವ ಮೂಲಕ ಮೂಲಭೂತವಾದಿಗಳನ್ನು ಷರೀಫ್ ವಿರುದ್ಧ ಚುನಾವಣೆಗೆ ಇಳಿಸಿ ಅವರ ಭದ್ರ ನೆಲೆಗಳಲ್ಲಿ ಬಿರುಕು ಮೂಡಿಸುವ ಮೂಲಕ, ಮಾಧ್ಯಮಗಳನ್ನು ನಿಯಂತ್ರಿಸುವ ಮೂಲಕ ಸೇನೆಯು ಇಮ್ರಾನ್ ಅವರ ಗೆಲುವಿಗೆ ಅನುಕೂಲ ಮಾಡಿಕೊಟ್ಟಿದೆ ಎಂಬ ಮಾತು ಪ್ರಚಲಿತದಲ್ಲಿದೆ. ಇದು ನಿಜವಾದಲ್ಲಿ ಮುಂದಿನ ದಿನಗಳಲ್ಲೂ ಪಾಕಿಸ್ತಾನ–ಭಾರತದ ಸಂಬಂಧ ಸುಧಾರಿಸುವುದಿಲ್ಲ ಎಂಬುದು ಖಚಿತ.

ಭಾರತದ ಬಗೆಗಿನ ಭೀತಿ ಪಾಕಿಸ್ತಾನೀ ರಾಷ್ಟ್ರೀಯತೆಯ ಮೂಲ ನೆಲೆ. ಇಂದಿಗೂ ಬಹಳಷ್ಟು ಪಾಕಿಸ್ಥಾನೀಯರ ದೃಷ್ಟಿಯಲ್ಲಿ ಸೇನೆಯೇ ಅಂತರಿಕ ಮತ್ತು ಬಾಹ್ಯ ಅಪಾಯಗಳಿಂದ ದೇಶವನ್ನು ಬಚಾವು ಮಾಡಬಲ್ಲ ಶಕ್ತಿ. ಭ್ರಷ್ಟಾಚಾರ ಆರೋಪದಡಿಯಲ್ಲಿ ಶಿಕ್ಷೆಗೊಳಗಾಗಿ ಈಗ ಮೇಲ್ಮನವಿಯ ಮೂಲಕ ಸೆರೆವಾಸದಿಂದ ಬಿಡುಗಡೆಗೊಂಡಿರುವ ನವಾಜ್ ಶರೀಫ್ ಕೂಡ ಪಾಕಿಸ್ತಾನೀ ಸೇನೆಗೆ ಅಚ್ಚು ಮೆಚ್ಚಿನವರೇ ಆಗಿದ್ದವರು. ಸೇನಾ ಮುಖ್ಯಸ್ಥರೊಡನೆ ಅವರ ಸಂಬಂಧ ಹಳಸಿದ್ದರ ಪರಿಣಾಮವೇ ಅವರು ಇಂದು ಎದುರಿಸುತ್ತಿರುವ ಸಮಸ್ಯೆಗಳಿಗೆ ಕಾರಣ. ಸೇನೆಯು ನಾಗರೀಕ ಸರ್ಕಾರದ ಅಂಕೆಯಲ್ಲಿ ಕಾರ್ಯಾಚರಿಸುವುದು ಒತ್ತಟ್ಟಿಗಿರಲಿ, ಸೇನೆಯೊಡನೆ ಉತ್ತಮ ಸಂಬಂಧ ಹೊಂದಿರದ ಯಾವ ಪ್ರಧಾನಿಯೂ ತನ್ನ ಸ್ಥಾನದಲ್ಲಿ ಉಳಿಯುವುದು ಸಾಧ್ಯವಿಲ್ಲದ ಪರಿಸ್ಥಿತಿ ಪಾಕಿಸ್ತಾನದ ವಾಸ್ತವ. ಈ ಪರಿಸ್ಥಿತಿ ಸುಧಾರಿಸದ ಹೊರತು ವ್ಯಕ್ತಿಯಾಗಿ ಯಾವೊಬ್ಬ ಪ್ರಧಾನಿಗೂ ಭಾರತದ ಜೊತೆ ಸಂಬಂಧವನ್ನು ಸುಧಾರಿಸಿಕೊಳ್ಳುವ ಎಂಥದೇ ಬಯಕೆ ಇದ್ದರೂ ಅದು ವ್ಯರ್ಥ. ಕಾಶ್ಮೀರಕ್ಕೆ ಸಂಬಂಧಿಸಿದಂತೆ ಇಮ್ರಾನ್ ಅವರ– ಭಾರತದ ಸೇನೆ ನಡೆಸುತ್ತಿರುವ ಹಿಂಸಾಚಾರವು ನಿಲ್ಲಬೇಕು, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯದ ಅನ್ವಯ ಪರಿಹಾರವೊಂದು ರೂಪುಗೊಳ್ಳಬೇಕು– ಎಂಬ ನಿಲವು ಪಾಕಿಸ್ತಾನದ ಬಹಳಷ್ಟು ಮಂದಿ ರಾಜಕಾರಣಿಗಳ ಘೋಷಿತ ನಿಲುವಾಗಿದೆ. ಇಮ್ರಾನ್ ಅವರ ಪ್ರಕಾರ ಚೆಂಡು ಭಾರತದ ಅಂಗಳದಲ್ಲೇ ಇದೆ. ಮಾತುಕತೆಗೆ ಭಾರತವು ಒಲವು ತೋರಿದಲ್ಲಿ ಮಾತ್ರವೇ ಅದು ಸಾಧ್ಯ.ಆದರೆ ಚರ್ಚೆಗೆ ಕೂರುವ ಜನರ ಅಂಕೆಯನ್ನು ಮೀರಿದ ಶಕ್ತಿಗಳು ಕ್ರಿಯಾಶೀಲವಾಗಿರುವವರೆಗೆ ಚರ್ಚೆಯ ಮೇಜಿನಲ್ಲಾದ ತೀರ್ಮಾನಗಳಿಗೆ ಯಾವ ಮಾನ್ಯತೆಯೂ ಪರಿಣಾಮವೂ ಇರುವುದಿಲ್ಲವಾದ್ದರಿಂದ, ಭಾರತದ ಮಟ್ಟಿಗೆ ಪಾಕಿಸ್ತಾನದ ಪ್ರಧಾನಿ ಯಾರಾಗಿರುವರೆಂಬುದು ನಗಣ್ಯ.

**–ಎಂ. ರಾಜು** (ವಿವಿಧ ಮೂಲಗಳಿಂದ)

## ಇನ್ನಷ್ಟು ಪತ್ರಗಳು...

ಮುಖ್ಯವಾಗಿ, ನಮ್ಮನ್ನು 'ಹೊಸ ಮನುಷ್ಯ'ರನ್ನಾಗಿಸುವುದೇ ನಿಮ್ಮ ಮತ್ತು ಮತ್ತು ನಮ್ಮ ಈ ಪತ್ರಿಕೆಯ ಉದ್ದೇಶವಾಗಿದೆ. ಅದಕ್ಕೆ ತಕ್ಕಂತೆ ನಮ್ಮ ಚಿಂತನೆಗಳು ಸಿದ್ಧ ಮಾದರಿಗಳು ಮತ್ತು ಸೂತ್ರಗಳಲ್ಲಿ ಬಿಗಿದುಕೊಂಡು ಕೊಸರಾಡುವಾಗ 'ಹೊಸ ಮನುಷ್ಯ' ಬಂದು ಬಿಡುಗಡೆಗೊಳಿಸುತ್ತಾನೆ. ನಮ್ಮ ಸದ್ಯದ ರಾಜಕೀಯ ಸಂದಿಗ್ಧಗಳು ಮತ್ತು ಸಾಮಾಜಿಕ ಸಂಕಟಗಳಿಗೆ ಹಿಂದಿನ ದಾರಿಯಲ್ಲೇ ಉತ್ತರಗಳಿದ್ದು ಅವನ್ನು ನಾವು ಶೋಧಿಸಿಕೊಳ್ಳಬೇಕಾಗಿದೆ ಎಂಬುದು ಪತ್ರಿಕೆಯ ಸದಾಶಯವಾಗಿದೆ.

'ಹೊಸ ಮನುಷ್ಯ'ದ ಪ್ರತಿ ವಾರ್ಷಿಕ ಸಂಚಿಕೆಯಂತೆ ಈ ವರ್ಷದ ಸಂಚಿಕೆಯೂ ಕಾಯ್ದಿಟ್ಟುಕೊಳ್ಳುವಷ್ಟು ಸೂಕ್ತವಾಗಿದೆ.. ಕೆ. ಸತ್ಯನಾರಾಯಣರ 'ಸಾಹಿತ್ಯ–ಸಮಾಜ : ಅಂದು–ಇಂದು' ಲೇಖನ ಮತ್ತು ಗಣೇಶ್ ದೇವಿಯವರ ಸಂದರ್ಶನ ಗಮನಾರ್ಹವೆನಿಸಿದವು.

**–ಸತೀಶ್ ಕುಲಕರ್ಣಿ**, ಹಾವೇರಿ

'ಹೊಸ ಮನುಷ್ಯ' ಬರೀ ಪತ್ರಿಕೆಯಾಗಿ ಹೊರ ಬರುತ್ತಿಲ್ಲ ಬದಲಿಗೆ ನಮ್ಮಂತ ಯುವ ಮನಸ್ಸುಗಳಿಗೆ ಹೊಸತನವನ್ನು ನೀಡುವ ವಿಚಾರಗಳನ್ನ ಒಳಗೊಂಡಿದೆ, ಸಂಕುಚಿತ ಮನಸ್ಥಿತಿಗಳಿಗೆ ವಿಶಾಲತೆಯ ದಾರಿ ತೋರಿಸುವ ಪತ್ರಿಕೆಯಾಗಿದ್ದು, ಬೌದ್ಧಿಕ ವಲಯದ ಜ್ಞಾನ ವಿಸ್ತರಣೆಯ ವಿಷಯಗಳು ಗಮನಾರ್ಹವಾದವು.

**–ನರಸಿಂಹರಾಜು.** ಸಿ., ಸಿರಿವಾರ

ಯುವಲಹರಿ

# ಸರ್ಕಾರಿ ಶಾಲೆಯಲ್ಲಿ ಕಲಿಸುವ ಮತ್ತು ಕಲಿಯುವ ಸುಖ...

–ಸಮತಾ ಯುವರಾಜ್



ಸರ್ಕಾರಿ ಶಾಲೆಗಳ ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಬಹಳಷ್ಟು ಋಣಾತ್ಮಕ ಅಂಶಗಳೇ ಕೇಳಲು, ಓದಲು ಸಿಗುತ್ತವೆ. ಆದರೆ ಸರ್ಕಾರಿ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿರುವ ನನ್ನ ಅನುಭವಗಳು ಇವುಗಳನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತವೆ. ರಸಾಯನ ಶಾಸ್ತ್ರದ ಸ್ನಾತಕೋತ್ತರ ಪದವೀಧರೆಯಾಗಿದ್ದರೂ ಹಳ್ಳಿಯೊಂದರ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶೇಷ ಶಿಕ್ಷಕಿಯಾಗಿ, ಕಳೆದ ಹದಿನಾಲ್ಕು ವರ್ಷಗಳಿಂದ ೬ರಿಂದ ೮ನೇ ತರಗತಿಯ ವಿದ್ಯಾರ್ಥಿಗಳಿಗೆ. ಗಣಿತ–ವಿಜ್ಞಾನ ವಿಷಯಗಳನ್ನು ಬೋಧಿಸುತ್ತಿರುವ ನಾನು ಆರಂಭದಲ್ಲಿ ಈ 'ಚಿಲ್ಟಪಿಲ್ಟು'ಗಳಿಗೆ ಕಲಿಸುವುದೇನು ಮಹಾ!' ಎಂಬ ಉಡಾಫೆಯಿತ್ತು. ಆದರೆ ನೀರಿಗಿಳಿದಾಗಲೇ ಆಳದ ಅರಿವಾಗಿದ್ದು.

ನನ್ನದು ಕೊಡಗಿನ ಒಂದು ಹಳ್ಳಿಯ ಶಾಲೆಯಾಗಿದ್ದು, ಶಾಲೆಗೆ ಬರುವ ವಿದ್ಯಾರ್ಥಿಗಳ ತಂದೆ ತಾಯಂದಿರುಗಳಲ್ಲಿ ಕೂಲಿ ಕಾರ್ಮಿಕರೇ ಅಧಿಕ. ಹಲವಾರು ವಿದ್ಯಾರ್ಥಿಗಳು ಶಾಲೆಗೆ ಬರುತ್ತಿರುವ ಮೊದಲ ಅಥವಾ ಎರಡನೇ ತಲೆಮಾರಿನ ವಿದ್ಯಾರ್ಥಿಗಳು. ಅವರಿಗೆ ತಮ್ಮ ಸುತ್ತಮುತ್ತಲಿನ ಪರಿಸರದ ಅರಿವು ಸಾಕಷ್ಟಿದ್ದರೂ ಹೊರ ಜಗತ್ತನ್ನು ಅಷ್ಟು ಕಂಡವರಲ್ಲ. ಹಾಗಾಗಿ ನನ್ನ ಈ ವಿದ್ಯಾರ್ಥಿಗಳಿಗೆ ಗಣಿತ, ವಿಜ್ಞಾನ–ತಂತ್ರಜ್ಞಾನಗಳ ಮಹತ್ವ, ಅವರು ಕಾಣುತ್ತಿರುವ ಜಗತ್ತಿನಲ್ಲಿ, ವಸ್ತುಗಳಲ್ಲಿ ಬಳಕೆಯಾಗಿರುವ, ಬಳಕೆಯಾಗುತ್ತಿರುವ ಗಣಿತ, ವಿಜ್ಞಾನದ ಪರಿಕಲ್ಪನೆಗಳ ಬಗ್ಗೆ ಅರಿವು ಮೂಡಿಸುವುದು ಒಂದು ಸವಾಲೇ ಸರಿ. ಜೊತೆಗೆ ಎದುರಾದ ಇನ್ನೊಂದು ಸವಾಲೆಂದರೆ ತಮ್ಮ ಸ್ಥಳೀಯ ಭಾಷೆಗೆ ಒಗ್ಗಿ ಹೋಗಿರುವ ಆ ಮಕ್ಕಳಿಗೆ ಗಣಿತ–ವಿಜ್ಞಾನಗಳ ಪರಿಕಲ್ಪನೆಗಳನ್ನು ಗ್ರಾಂಥಿಕ ಭಾಷೆಯಲ್ಲಿ ಅರ್ಥೈಸುವುದು. ಅಲ್ಲದೆ ಇಂಗ್ಲೀಷ್‌ನಲ್ಲಿ ಕಲಿತ ಗಣಿತ ವಿಜ್ಞಾನಗಳನ್ನು ಕನ್ನಡಕ್ಕೆ ಪರಿವರ್ತಿಸಿಕೊಂಡು ವಿದ್ಯಾರ್ಥಿಗಳಿಗೆ ತಲುಪಿಸಲು ನಾನು ಪಟ್ಟ ಪಾಡು!. ಒಂದು ಹವ್ಯಾಸವಾಗಿ ಕನ್ನಡ ಸಾಹಿತ್ಯವನ್ನು ಅಷ್ಟಿಷ್ಟು ಓದಿಕೊಂಡಿದ್ದು, ಈಗ ನೆರವಿಗೆ ಬಂತು.

ಭೌಗೋಳಿಕ ಪರಿಸರವೂ, ಕೆಲವು ವಿಷಯಗಳಲ್ಲಿ ತೊಡಕಾದದ್ದಿದೆ. ಎಲ್ಲೆಡೆ ಬೆಟ್ಟ, ಗುಡ್ಡ, ಕಾಡು, ಎಸ್ಟೇಟ್‌ಗಳಿರುವ ಕೊಡಗಿನಲ್ಲಿ ಮಕ್ಕಳಿಗೆ ಧೃವ ನಕ್ಷತ್ರ, ನಕ್ಷತ್ರ ವೀಕ್ಷಣೆ ಮಾಡಿಸುವುದಾದರೂ ಹೇಗೆ? ರೈಲ್ವೇ ಸಂಪರ್ಕವಿಲ್ಲದ ಜಿಲ್ಲೆಯಲ್ಲಿ ಚಲನೆಯೊಂದು ಸಾಪೇಕ್ಷ ಸ್ಥಿತಿ ಎನ್ನಲು ಪಠ್ಯಪುಸ್ತಕದಲ್ಲಿ ನೀಡಿದ್ದ ಟ್ರೈನ್‌ಗಳ ಉದಾಹರಣೆ ಚಿಖಿತಂ ಸುತ್ತಮುತ್ತಲಿನ ಎಲ್ಲ ಜಲಮೂಲಗಳಲ್ಲಿ ಸಿಹಿ ನೀರೇ ತುಂಬಿರುವಾಗ ಗಡಸು ನೀರಿನ ಕಲ್ಪನೆ ಮತ್ತು ಶುದ್ಧೀಕರಣದ ವಿಚಾರ ಅವರಿಗೆ ಹೇಗೆ ಅರ್ಥವಾದೀತು? ಕೊಡಗಿಗೆ ಮಳೆ ನೀರು ಕೊಯ್ಲು ಏಕೆ?

ಈ ಪ್ರಶ್ನೆಗಳನ್ನೆಲ್ಲ ಹೇಗೋ ನಿಭಾಯಿಸಿದೆನಾದರೂ ನನ್ನ ಬೋಧನಾ–ಕಲಿಕಾ ಪ್ರಕ್ರಿಯೆಗಳಲ್ಲಿ ಏನೋ ಕೊರತೆ ಎಂಬ ಭಾವ. ಅಷ್ಟರಲ್ಲಿ ಶಾಲೆಯ ಗಣಿತ–ವಿಜ್ಞಾನ ಕಿಟ್‌ಗಳ ಉಸ್ತುವಾರಿ ಸಿಕ್ಕು ಅವುಗಳಲ್ಲಿದ್ದ ಉಪಕರಣಗಳು, ಮಾದರಿಗಳು ಹಾಗೂ ವಿವಿಧ ರಾಸಾಯನಿಕಗಳನ್ನು ನೋಡಿ ಒಂದು ಹೊಸಾ ಧೈರ್ಯ ಬಂತು. ಬರೀ ವಿಷಯ ಬೋಧಿಸದೆ, ಚಟುವಟಿಕೆ–ಪ್ರಯೋಗಗಳೊಂದಿಗೆ ಸಮ್ಮಿಳಿಸಿದರೆ ಕಲಿಕೆ ಹೆಚ್ಚು ಪ್ರಯೋಜನಕಾರಿ ಎಂಬುದು ಕಾಲಕ್ರಮೇಣ ಸ್ಪಷ್ಟವಾಗುತ್ತಾ ಹೋಯಿತು. ಅನ್ವೇಷಣಾ ವಿಧಾನ ಹೆಚ್ಚು ಪರಿಣಾಮಕಾರಿಯಾಯಿತು. ಈ ನಿಟ್ಟಿನಲ್ಲಿ ಇಲಾಖೆಯು ನೀಡಿದ ಹಲವಾರು ತರಬೇತಿ ಕಾರ್ಯಕ್ರಮಗಳೂ ನೆರವಿಗೆ ನಿಂತವು.

ಚಟುವಟಿಕೆ ಇಲ್ಲವೇ ಪ್ರಯೋಗವೊಂದನ್ನು ಮಾಡುವಾಗ ಮಕ್ಕಳು ತೋರುವ ಉತ್ಸಾಹ, ಅವರ ಕಣ್ಣುಗಳಲ್ಲಿ ಕಾಣುವ ಅಚ್ಚರಿಗಳೇ ನನ್ನ ಕೆಲಸಕ್ಕೆ ಶಕ್ತಿಯನ್ನು ತುಂಬುತ್ತವೆ. ಈ ಹಂತದ ವಿದ್ಯಾರ್ಥಿಗಳಿಗೆ ಅತ್ಯಾಧುನಿಕ ಉಪಕರಣಗಳೇನೂ ಬೇಕಿಲ್ಲ. ದಿನನಿತ್ಯ ಬಳಸುವ ವಸ್ತುಗಳು, ಇಲಾಖೆ ಪೂರೈಸುವ ಸಾಮಗ್ರಿಗಳ ಜೊತೆಗೆ ದಾನಿಗಳ ಸಹಾಯದಿಂದ ಖರೀದಿಸಿದ ಮತ್ತು ಜನ ತ್ಯಾಜ್ಯವೆಂದು ಎಸೆದ ಉಪಕರಣಗಳನ್ನು ಬಳಸಿ ಪ್ರಯೋಗಗಳನ್ನು ಮಾಡಿ ವಿಷಯ ಸ್ಪಷ್ಟೀಕರಣ ಮಾಡಿಸುವುದು ಸಾಧ್ಯವಿದೆ ಎಂಬುದನ್ನೂ ನಾನು ಕಂಡುಕೊಂಡೆ. ಹಾಗಾಗಿ ಶಾಲೆಯಲ್ಲಿ ಒಂದು ಪ್ರಯೋಗಾಲಯವೇ ಸ್ಥಾಪಿತವಾಯಿತು.

ಇದರಲ್ಲಿ ಮಕ್ಕಳ ಭಾಗವಹಿಸುವಿಕೆಯಂತೂ ಅತ್ಯಂತ ಉತ್ಸಾಹದಾಯಕ. ಯಾವುದೇ ಒಂದು ರೀತಿಯ ವಸ್ತು ಸಂಗ್ರಹಿಸಲು ಹೇಳಿದರೆ ಹಲವು ಬಂದು ರಾಶಿ ಬೀಳುತ್ತವೆ. ಯಾವುದಾದರೂ ಒಂದು ಪರಿಕಲ್ಪನೆಯ ಬಳಕೆಯ ಬಗ್ಗೆ ಹೇಳಿ ಎಂದರೆ ಊಹಿಸಲಸಾಧ್ಯ ಉದಾಹಣೆಗಳು ಹೊರ ಬರುತ್ತವೆ. ಉದಾಹರಣೆಗೆ, ನಿತ್ಯಜೀವನದಲ್ಲಿ ಉಷ್ಣ ಶಕ್ತಿಯ ಬಳಕೆ ಎಲ್ಲೆಲ್ಲಿ ಗುರುತಿಸಿದ್ದೀರಿ? ಎಂದು ಕೇಳಿದಾಗ, ಆಲೆಮನೆಯಲ್ಲಿ ಬೆಲ್ಲ ಕಾಯಿಸಲು, ರೋಡ್‌ಗೆ ಹಾಕಲು ಟಾರ್ ಕಾಯಿಸಲು, ಕಾಫಿ, ಮೆಣಸು ಒಣಗಿಸಲು ಎಂದೆಲ್ಲಾ ಹೇಳಿ, ಕೇವಲ ಕೈಗಾರಿಕಾ ಉದಾಹಣೆಗಳನ್ನು ನಿರೀಕ್ಷಿಸಿದ್ದ ನನ್ನನ್ನು ಚಕಿತಗೊಳಿಸಿದರು.

ವಿಜ್ಞಾನ ಕಲಿತರಾಗದು, ಬಳಸಲೂ ಬೇಕು ಎಂದಿದ್ದಕ್ಕೆ ಪ್ರತಿಭಾ ಕಾರಂಜಿಯ ಛದ್ಮವೇಶದ ಕೃಷ್ಣನಿಗೆ ಮೋಟಾರ್‌ನಿಂದ ತಿರುಗುವ ಸುದರ್ಶನ ಚಕ್ರ ಜೋಡಿಸಿ ಸಾಕ್ಷಾತ್ ಕೃಷ್ಣದರ್ಶನ ಮಾಡಿಸಿದ ಪ್ರಚಂಡರಿದ್ದಾರೆ. ಕಲಿಕೆಯಲ್ಲಿ ಹಿಂದುಳಿದಿದ್ದರೂ ತ್ಯಾಜ್ಯ ಪೈಪ್, ಪ್ಲಾಸ್ಟಿಕ್ ಬಾಟಲ್ ಬಳಸಿ ಶಾಲಾ ಕೈ ತೋಟಕ್ಕೆ ಸ್ಪ್ರಿಂಕ್ಲರ್ ಮಾಡಿದ ಮಕ್ಕಳಿದ್ದಾರೆ. ನನ್ನಲ್ಲೂ ಹೇಳಿಸಿಕೊಳ್ಳದೆ ಮಜ್ಜಿಗೆ ಯಂತ್ರ ರೂಪಿಸಿ ಹೆಮ್ಮೆ ಮೂಡಿಸಿದವರಿದ್ದಾರೆ. ವಿಜ್ಞಾನ ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸಿದಾಗ ತೋರುವ ಸ್ವಯಂ ಶಿಸ್ತು, ತಮಗೆ ನೀಡಿರುವ ಮಾದರಿ ಉಪಕರಣಗಳನ್ನು ಜವಾಬ್ದಾರಿಯಿಂದ ನಿರ್ವಹಿಸುವುದು, ವಿವರಿಸುವ ಸಂದರ್ಭಗಳಲ್ಲಿ ಎದುರಿಗಿರುವವರಿಗೆ ಅರ್ಥಮಾಡಿಸಿಯೇ ಸೈ ಎಂದು ತಮ್ಮದೇ ಭಾಷೆಯಲ್ಲಿ ಹೇಳುವಾಗ ನಮ್ಮ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಯಾರಿಗೇನು ಕಮ್ಮಿ ಇಲ್ಲ ಎಂದೆನಿಸುತ್ತದೆ. ತರಗತಿಯೊಳಗೆ ಕಾಲಿಟ್ಟ ತಕ್ಷಣವೇ 'ಟೀಚರ್, ಲ್ಯಾಬ್‌ಗೆ ಹೋಗೋಣ' ಎನ್ನುತ್ತಾರೆ. ನಮ್ಮ ಶಾಲೆಯಿಂದ ೮ನೇ ತರಗತಿ ಉತ್ತೀರ್ಣರಾಗಿ ಬೇರೆ ಶಾಲೆಗೆ ಹೋಗಿರುವ ವಿದ್ಯಾರ್ಥಿಗಳು ಒಮ್ಮೊಮ್ಮೆ ಶಾಲೆಗೆ ಬಂದಾಗ 'ಟೀಚರ್, ಲ್ಯಾಬ್‌ಗೆ ಒಂದು ಸಾರಿ ಹೋಗಿ ನೋಡಲಾ?' ಎನ್ನುವುದುಂಟು. ನಮ್ಮ ಶಾಲೆಯ ಮಾದರಿಗಳನ್ನು ತಮ್ಮ ಹೊಸ ಶಾಲೆಗೆ ತೆಗೆದುಕೊಂಡು ಹೋಗಿ ತೋರಿಸಿ ಮೆರೆಸಿದ್ದೂ ಇದೆ. ೮ನೇ ತರಗತಿಯಾದ ಬಳಿಕ ೯ನೇ ತರಗತಿಗೆ ಇಂಗ್ಲೀಷ್ ಮಾಧ್ಯಮ ಸೇರಿ ಎಸ್.ಎಸ್.ಎಲ್.ಸಿಯಲ್ಲಿ ಉತ್ತಮ ಅಂಕಗಳಿಸಿರುವ ನನ್ನ ಕೆಲವು ವಿದ್ಯಾರ್ಥಿಗಳನ್ನು ನೋಡಿದಾಗ, ಕಲಿಕೆಗೆ ಭಾಷೆ ಯಾವುದಾದರೇನು ಎನಿಸಿತ್ತು.

ಯಾವುದೇ ಶಾಲೆ ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾದರೆ ಅದು ಅಲ್ಲಿಯ ಶಿಕ್ಷಕರೆಲ್ಲರ ಸಂಘಟಿತ ಪ್ರಯತ್ನದಿಂದ ಮಾತ್ರ. ನನ್ನೆಲ್ಲಾ ಚಟುವಟಿಕೆಗಳಿಗೂ ಅಪಾರ ಬೆಂಬಲ ನೀಡುವ ನನ್ನ ಸಹೋದ್ಯೋಗಿಗಳು, ಪ್ರತಿ ವರ್ಷದ ಶಾಲಾನುದಾನದಲ್ಲಿ ನನ್ನ ಲ್ಯಾಬ್‌ಗೆಂದೇ ನಿಗದಿತ ಮೊತ್ತವನ್ನು ಮೀಸಲಿರಿಸಿ ಪ್ರೋತ್ಸಾಹಿಸುವ ನಮ್ಮ ಮುಖ್ಯ ಶಿಕ್ಷಕರನ್ನು ಮರೆಯಲಾಗದು. ಸರ್ಕಾರಿ ಶಾಲೆಗೆ ಬರುವ ವಿದ್ಯಾರ್ಥಿಗಳಿಗೆ ಸರ್ಕಾರ ಒದಗಿಸುವ ಸಮವಸ್ತ್ರ, ಬಿಸಿಯೂಟದಿಂದ ಹಿಡಿದು ವಾಚನಾಲಯ, ಶೈಕ್ಷಣಿಕ ಪ್ರವಾಸದವರೆಗಿನ ಎಲ್ಲಾ ಸೌಲಭ್ಯಗಳು ಯಾವ ಮಗುವಿಗೂ ದೊರೆಯಲೆಂದು ತಮ್ಮ ಶಕ್ತಿ ಮೀರಿ ಕೆಲಸ ಮಾಡಿ ದಾಖಲೆಗಳನ್ನು ನಿರ್ವಹಿಸುವ ಜೊತೆಗೆ ತಮ್ಮ ಬೋಧನಾ ಕಾರ್ಯಕ್ಕೂ ಚ್ಯುತಿ ಬಾರದಂತೆ ದುಡಿಯುವ ಶಿಕ್ಷಕರಿದ್ದಾರೆ. ವಿದ್ಯೆಯೆಂಬ ಮಾಂತ್ರಿಕ ಶಕ್ತಿಯಿಂದ ಉತ್ತಮ ಭವಿಷ್ಯ ರೂಪಿಸಿಕೊಳ್ಳಬಹುದೆಂಬ ಭರವಸೆ ನೀಡುತ್ತಾ, ವಿದ್ಯೆಯಿಂದ ಮಾನವನ ವ್ಯಕ್ತಿತ್ವದ ಘನತೆಯನ್ನು ಎಷ್ಟು ವಿಸ್ತಾರಗೊಳಿಸಲು ಸಾಧ್ಯವೆಂಬುದನ್ನು ವಿದ್ಯಾರ್ಥಿಗಳಿಗೆ ಮನದಟ್ಟುಗೊಳಿಸುವ ಕೆಲಸ ಮಾಡುತ್ತಿರುವ ಎಲ್ಲಾ ಕರ್ತವ್ಯ ನಿಷ್ಠ ಸರ್ಕಾರಿ ಶಾಲಾ ಶಿಕ್ಷಕರನ್ನು ನೋಡಿದಾಗ, ಸರ್ಕಾರಿ ಶಾಲೆಗಳ ಬಗ್ಗೆ ಅಪಾರ ಹೆಮ್ಮೆ ಎನಿಸುತ್ತದೆ.



**(ಮೂಲತಃ ಭದ್ರಾವತಿಯಲ್ಲಿ ಹುಟ್ಟಿ ಬೆಳೆದು ಓದಿದ ಸಮತಾ ಈಗ ಕೊಡಗಿನ ಮಾದಾಪಟ್ಟಣದಲ್ಲಿನ ಸರ್ಕಾರಿ ಶಾಲೆಯಲ್ಲಿ ಉಪಾಧ್ಯಾಯಿನಿಯಾಗಿದ್ದಾರೆ)**

# ಇವೊತ್ತಿಗೆ ಗಾಂಧಿ ಏಕೆ, ಎಷ್ಟು ಬೇಕು?

ಮಹಾತ್ಮ ಗಾಂಧಿಯವರ ೧೫೦ನೇ ಜನ್ಮೋತ್ಸವ

ಈ ಅಕ್ಟೋಬರ್ ೨ರಿಂದ ದೇಶ ಮಹಾತ್ಮ ಗಾಂಧಿಯವರ ೧೫೦ನೇ ಜನ್ಮ ವರ್ಷಾಚರಣೆಗಾಗಿ ಸಿದ್ಧಗೊಳ್ಳುತ್ತಿದೆ. ವರ್ಷಾಚರಣೆ ಎಂದರೆ ಏನು? ಔಪಚಾರಿಕವಾಗಿ ಅವರ ವಿಚಾರಗಳನ್ನು ಚರ್ಚಿಸುತ್ತಾ ಅವರಿಗೆ ಗೌರವಾರ್ಪಣೆ ಮಾಡುವುದೇ? ಸ್ವತಂತ್ರ ಭಾರತದ ಈ ೭೦ ವರ್ಷಗಳುದ್ದಕ್ಕೂ ದೇಶ ಮಾಡುತ್ತಾ ಬಂದಿರುವುದು ಅದನ್ನೇ, ಅವರ ಹೆಸರಿನ ಬಲದ ಮೇಲೇ ತಮ್ಮ ರಾಜಕೀಯ ಶಕ್ತಿಯನ್ನು ಸಂಘಟಿಸಿಕೊಂಡು ದೇಶವನ್ನಾಳಿದವರೂ ಸೇರಿಸಂತೆ. ಬಹುಶಃ ಹಾಗಾಗಿಯೇ ಗಾಂಧಿ ದಾರಿಯನ್ನು ವಿರೋಧಿಸುತ್ತಾ ಬಂದವರ ಕೈಗೆ ಇಂದು ರಾಷ್ಟ್ರಾಡಳಿತದ ಸೂತ್ರಗಳು ಹೋಗಿವೆ. ಅವರೂ ಇಂದು ಗಾಂಧಿಯ ಭಜನೆ ಮಾಡತೊಡಗಿದ್ದಾರೆ. ಹೀಗಾಗಿ ಇಂದು ಗಾಂಧಿ ಕುರಿತ ಚರ್ಚೆ-ಚಿಂತನೆಗಳೇ ವ್ಯಂಗ್ಯಕ್ರೀಡಾಗುವ ಅಪಾಯಕ್ಕೆ ಸಿಕ್ಕಿದೆ.

ಇದಕ್ಕೆ ಮುಖ್ಯ ಕಾರಣ ಗಾಂಧಿಯವರೇ ತಮ್ಮ ರಾಜಕೀಯ ಉತ್ತರಾಧೀಕಾರಿ ಎಂದು ಘೋಷಿಸಿದ್ದ ನಮ್ಮ ಮೊದಲ ಪ್ರಧಾನ ಮಂತ್ರಿ ಅವರಿಂದಲೇ ಆರಂಭವಾದಂತೆ ಗಾಂಧಿ ಜೀವನ ದೃಷ್ಟಿ ಮತ್ತು ವಿಚಾರಗಳು ಹೊಸ ಜಗತ್ತಿನ ಸಂದರ್ಭಕ್ಕೆ ಹಳೆಯದಾಗಿವೆ ಎಂಬ ಅಭಿಪ್ರಾಯವನ್ನು ರೂಢಿಸಲಾರಂಭಿಸಿದ್ದು. ಆದರೆ ಮುಖ್ಯವಾಗಿ ಹೊಸ ಜಗತ್ತಿನ ಸಮಸ್ಯೆಗಳನ್ನೇ ಗಾಂಧಿ ಗುರುತಿಸಿ ವಿಶ್ಲೇಷಿಸಿ ಅವುಗಳಿಗೆ ವ್ಯಾವಹಾರಿಕ ಪರಿಹಾರಗಳನ್ನು ಸೂಚಿಸಿದ್ದು ಎಂಬುದು ಇವರಾರೂ ಗ್ರಹಿಸಲಾರದೇ ಹೋಗಿದ್ದರು. ಆದರೆ ಇವರು ಉತ್ಸಾಹದಿಂದ ಸ್ವಾಗತಿಸಿದ ಹೊಸ ಜಗತ್ತೇ ನಮ್ಮ ಇಂದಿನ ಬದುಕಿನ ಹಲವು ನೆಲೆಗಳಲ್ಲಿ ಒಂದು ಸಮಸ್ಯೆಯಾಗಿ ಗೋಚರಿಸುತ್ತಿರುವಾಗ ಗಾಂಧಿಯ ನೆನಪು ಅನಿವಾರ್ಯವಾಗಿದೆ. ಆದರೆ ಗಾಂಧಿ ಗಾಂಧಿಯೇ. ಅವರೊಬ್ಬ ವ್ಯಕ್ತಿಯೂ ಶಕ್ತಿಯೂ ಆಗಿದ್ದರು. ಅಸಾಮಾನ್ಯ ವ್ಯಕ್ತಿಯಾಗಿ ಅವರನ್ನು ಅನುಸರಿಸುವುದು ದುಸ್ಸಾಧ್ಯವೇ ಸರಿ. ಆದರೆ ಅನನ್ಯ ವಿಚಾರಗಳ ರೂಪದಲ್ಲಿರುವ ಅವರ ಶಕ್ತಿಯನ್ನು ನಾವು ಇಂದಿನ ಅಗತ್ಯಗಳಿಗೆ ತಕ್ಕಂತೆ ಬಳಸಿಕೊಳ್ಳಬಹುದಾಗಿದೆ. ಇದೇ ಇಂದಿಗೆ ಬೇಕಾದ ಗಾಂಧಿಯನ್ನು ಶೋಧಿಸಿಕೊಳ್ಳುವ ಸವಾಲು. ಇಂತಹ ಒಂದು ಸಣ್ಣ ಪ್ರಯತ್ನವೇ ಈ 'ಇಂದಿಗೆ ಗಾಂಧಿ ಏಕೆ, ಎಷ್ಟು ಬೇಕು?' ಎಂಬ ಅಭಿಪ್ರಾಯ ಸಂಗ್ರಹ. ಹಲವು ಕ್ಷೇತ್ರಗಳ ಹಿನ್ನೆಲೆಯ ಜನ ಇಲ್ಲಿ ಬರೆದಿದ್ದಾರೆ. ನೀವೂ ಬರೆಯುವ / ಪ್ರತಿಕ್ರಿಯಿಸುವ ಮೂಲಕ ಈ ನಮ್ಮ ಪ್ರಯತ್ನದೊಂದಿಗೆ ಕೈ ಜೋಡಿಸಬಹುದು..-ಸಂ.



## ಗಾಂಧಿ ಇಂದಿಗೂ, ಎಂದಿಗೂ ಪೂರ್ಣವಾಗಿಯೇ ಬೇಕು!

ಒಮ್ಮೆ ಗಾಂಧಿ ಉಡುಪಿಗೆ ಬಂದಿದ್ದಾಗ ಅಲ್ಲಿನ ದೇವಾಲಯಕ್ಕೆ ಅವರನ್ನು ಆಹ್ವಾನಿಸಲಾಯಿತಂತೆ. ಆಗ ಗಾಂಧಿ ಈ ದೇವಾಲಯಕ್ಕೆ ಎಲ್ಲರಿಗೂ ಪ್ರವೇಶವುಂಟೆ ಎಂದು ಕೇಳಿದಾಗ, ಆಹ್ವಾನಿಸಿದವರು ಏನೋ ಗೊಣಗಿದಾಗ ಅವರು ದೇವಾಲಯದತ್ತ ತಿರುಗಿಯೂ ನೋಡದೆ ತಾವು ನಡೆದಿದ್ದ ಹೆದ್ದಾರಿಯಲ್ಲಿ ಮುಂದುವರೆದು ಹೋದರಂತೆ. ಗಾಂಧೀಜಿಯನ್ನು ತೀರ್ಥಹಳ್ಳಿಗೆ ಆಹ್ವಾನಿಸಲು ಉಡುಪಿಗೆ ಹೋಗಿದ್ದ ನಮ್ಮ ಹಿರಿಯರೊಬ್ಬರ ಬಾಯಿಂದ ಈ ಪ್ರಸಂಗವನ್ನು ಕೇಳಿದಾಗಿನಿಂದ ಗಾಂಧಿ ನನ್ನ ಆದರ್ಶವಾಗಿದ್ದಾರೆ. ಶಾಲಾ ವಿದ್ಯಾರ್ಥಿಯಾಗಿದ್ದಾಗಿನಿಂದ ಹಿಡಿದು ಎಂ.ಎ. ಓದುವ ತನಕವೂ ಒಂದಲ್ಲ ಒಂದು ರೂಪದಲ್ಲಿ ಗಾಂಧಿ ಚಿಂತನೆಯನ್ನು ಓದುತ್ತಾ, ಕೇಳುತ್ತಾ ಬಂದಿದ್ದೇನೆ. ಬಾಲ್ಯದಿಂದ, ಗೃಹಸ್ಥನಾಗಿ, ನಂತರ ಹಲವು ಹೋರಾಟಗ:ಳಲ್ಲಿ ಭಾಗಿಯಾದ ನನಗೆ ಎಂದೂ ಗಾಂಧಿ ಮಾರ್ಗ ಕಠಿಣ ಅಥವಾ ಅವಾಸ್ತವ ಎನಿಸಿಲ್ಲ.

ಗಾಂಧಿ ಇಂದಿಗೆ ಏಕೆ ಮತ್ತು ಎಷ್ಟು ಎಂಬ ಪ್ರಶ್ನೆಯೇ ನನಗೆ ಅಸಂಗತ. ಬ್ರಿಟಿಷರು ಬಂದು ಹೋದಮೇಲೂ ನಾವು ನಾವಾಗಿ ಉಳಿದಿರಲು ಗಾಂಧಿಯೇ ಕಾರಣ. ಹಾಗಾಗಿ ಗಾಂಧಿ ಇಂದಿಗೂ, ಎಂದಿಗೂ ಪೂರ್ಣವಾಗಿಯೇ ಬೇಕು. ಸಾರಾಂಶವಾಗಿ ಹೇಳುವುದಾದದರೆ ಅವರ ಅಹಿಂಸೆ, ಸ್ವದೇಶಿ ಮತ್ತು ಹಿಂದೂ–ಮುಸ್ಲಿಂ ಐಕ್ಯತೆಯ ಆದರ್ಶಗಳಿಲ್ಲದೆ ನಾವಿಂದು ಶಾಂತಿ–ನೆಮ್ಮದಿಗಳಿಂದ ಒಂದು ಸಮಾಜವಾಗಿ, ರಾಷ್ಟ್ರವಾಗಿ ಬದುಕಲು ಸಾಧ್ಯವೇ?



**–ಕಡಿದಾಳು ಶಾಮಣ್ಣ,** ಹಿರಿಯ ಸಮಾಜವಾದಿ ಮತ್ತು ರೈತ ನಾಯಕರು, ಭಗವತಿಕೆರೆ

## ಎದೆಗೆ ನೆಟ್ಟ ಮುಳ್ಳಿನ ಹಾಗೆ ನನ್ನಲ್ಲಿ ಇದ್ದೇ ಇದ್ದಾರೆ...

ನಾನು ನೋಡಿರುವಂತೆ ನಮಗೆ ಯಾವ ಗಾಂಧಿ ಬೇಕು, ಎಷ್ಟರಮಟ್ಟಿಗೆ ಬೇಕು– ಹೀಗೆ ಪ್ರಶ್ನೆಗಳನ್ನು ರೂಪಿಸಿಕೊಳ್ಳುವುದರಲ್ಲಿಯೇ ನಮ್ಮ ಹತಾಶೆ, ನಮ್ಮ ಗೊಂದಲಗಳು ಹಾಗೂ ಇಬ್ಬಂದಿತನಗಳು ವ್ಯಕ್ತವಾಗುತ್ತವೆ. ಏಕೆಂದರೆ ಈ ಪ್ರಶ್ನೆಗಳ ಹಿಂದಿನ ಅರ್ಥವೆಂದರೆ ನಾವು ಗಾಂಧಿಯನ್ನು ಇಡಿಯಾಗಿ ಸ್ವೀಕರಿಸಲು ಸಿದ್ಧರಿಲ್ಲವೆನ್ನುವುದು. ಹಾಗೆಯೇ ಅವರನ್ನು ಬಿಟ್ಟುಕೊಡಲೂ ಸಿದ್ಧರಿಲ್ಲವೆನ್ನುವುದು. ಸಮಸ್ಯೆಯೆಂದರೆ, 'ಗಾಂಧೀವಾದ'ವೆನ್ನುವುದು ಇಲ್ಲವೇ ಇಲ್ಲವೆಂದು ಸಾರಿದ ಹಾಗೂ ಆ ಕ್ಷಣದ ಸತ್ಯದ ಆಚೆಗೆ ಒಂದು ಸಿದ್ಧಾಂತವನ್ನು ಅಥವಾ ಶಾಶ್ವತ ಸತ್ಯವನ್ನು ಹೇಳಲು ನಿರಾಕರಿಸಿದ ಗಾಂಧಿಯವರ ಚಿಂತನೆ ಅದೆಷ್ಟು ಸಂಶ್ಲೇಶಣಾತ್ಮಕವಾಗಿದೆಯೆಂದರೆ, ಅದರಲ್ಲಿ ಒಂದನ್ನು ಬಿಟ್ಟು ಇನ್ನೊಂದನ್ನು ಆಯ್ಕೆ ಮಾಡಿಕೊಳ್ಳಲು ಆಗುವುದಿಲ್ಲ. ಉದಾಹರಣೆಗೆ ಅವರ ಅಹಿಂಸೆಯ ತತ್ವವನ್ನು ಒಪ್ಪುವುದಾದರೆ ಬಂಡವಾಳಶಾಹಿಯನ್ನು ವಿರೋಧಿಸಲೇಬೇಕು. ಏಕೆಂದರೆ ಬಂಡವಾಳಶಾಹಿಯು ಮೂಲತಃ ಹಿಂಸಾತ್ಮಕವಾಗಿರುತ್ತದೆ. ಅದನ್ನು ತ್ಯಜಿಸುವುದಾದರೆ ಗ್ರಾಮಸ್ವರಾಜ್ಯ, ಸರಳ ಜೀವನ, ಖಾದಿ ಇವೆಲ್ಲವನ್ನೂ ಒಪ್ಪಿಕೊಳ್ಳಬೇಕು.

ಉಪಭೋಗ ಸಂಸ್ಕೃತಿಯನ್ನು ಸಂಪೂರ್ಣವಾಗಿ ತೊರೆಯಬೇಕು. ಯಂತ್ರ ಸಂಸ್ಕೃತಿಯು ತಂದಿರುವ ಸವಲತ್ತುಗಳನ್ನು ಅನುಭವಿಸುತ್ತಲೇ ಅದನ್ನು 'ಹಿಂದ್‌ಸ್ವರಾಜ್'ನ ವಾದಗಳೊಂದಿಗೆ ವಿರೋಧಿಸಲಾಗದು. ಆದರೆ ಗಾಂಧಿಯನ್ನು ಬಿಟ್ಟುಬಿಡುವುದೂ ಸಾಧ್ಯವಿಲ್ಲ. ಏಕೆಂದರೆ ನಮ್ಮ ಬಹುಪಾಲು ಸಮಸ್ಯೆಗಳಿಗೆ ಅವರ ಚಿಂತನೆಯಲ್ಲಿ ಉತ್ತರವಿದೆ. ಆ ಚಿಂತನೆಯನ್ನು ಪಾಲಿಸಲಾಗದ ನೈತಿಕ ಪಶ್ಚಾತ್ತಪದಿಂದ ಬಿಡುಗಡೆ ಇಲ್ಲ, ನಮ್ಮ ಈ ಸೋಲಿನ ಅರ್ಥವೇನು? ಮಾರ್ಕ್ಸ್ ಹೇಳಿದ ಹಾಗೆ ಬಂಡವಾಳಶಾಹಿಯು ಚರಿತ್ರೆಯ ದೈತ್ಯ ಶಕ್ತಿಯಾಗಿರುವುದರಿಂದ ಅದು ಅಜೇಯವಾಗಿ ಹೊಸ ಹೊಸ ರೂಪಗಳನ್ನು ಪಡೆಯುತ್ತ ನಮ್ಮ ಬದುಕಿನ ಶೈಲಿಯನ್ನು ರೂಪಿಸುತ್ತಲೇ ಇರುತ್ತದೆ ಎಂದೇ? ಅದರ ಕೆಡುಕಿನ ಬಗ್ಗೆ ಗಾಂಧಿ ಕೊಟ್ಟ ತಿಳುವಳಿಕೆ ಹಾಗೂ ಅದರಿಂದ ದೂರವಿರಲಾಗದ ಅಪರಾಧಿ ಭಾವಗಳೇ ನಮಗೆ ದಕ್ಕಿರುವ ಗಾಂಧಿಯೇ? ಒಂದು ವೇಳೆ ವೈಯಕ್ತಿಕ ಜೀವನದಲ್ಲಿ ಅವರ ಚಿಂತನೆಯನ್ನು ಸಮಗ್ರವಾಗಿ ಅಳವಡಿಸಿಕೊಂಡರೂ ಸಮಾಜದ ಆರ್ಥಿಕ ರಚನೆಗಳಲ್ಲಿ ಬದಲಾವಣೆಗಳು ಸಾಧ್ಯವೇ?

ಗಾಂಧಿಯನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡಿರುವವರು ವೈಯಕ್ತಿಕ ಬದುಕಿನಲ್ಲಿ ಯಾವ ಹೊಂದಾಣಿಕೆ ಮಾಡಿಕೊಳ್ಳದೇ ಹೊಸ ಪ್ರಯೋಗಗಳ ಮೂಲಕ ಗಾಂಧಿಯನ್ನು ಜೀವಂತವಾಗಿಟ್ಟಿದ್ದಾರೆ. ಗಾಂಧಿ ಕಲಿಸಿಕೊಟ್ಟ ಪ್ರತಿಭಟನೆಯ ಮಾದರಿಯನ್ನು ನೈತಿಕ ಅಸ್ತ್ರವಾಗಿ ಬಳಸಿಕೊಂಡಿದ್ದಾರೆ. ಆದರೆ ಗಾಂಧಿಯ ಸಮಗ್ರ ಚಿಂತನೆಯನ್ನು ವಿಶೇಷವಾಗಿ ಗ್ರಾಮ ಸ್ವರಾಜ್ಯದ ಕಲ್ಪನೆಯನ್ನು ಅಲ್ಲಲ್ಲಿ ಓಯಸಿಸ್‌ಗಳಂತೆ ಅನುಷ್ಠಾನಕ್ಕೆ ತರಲಾಗಿದೆಯೆ ಹೊರತು, ಸಮಾಜದ ರಚನೆಗಳನ್ನೇ ಬದಲಾಯಿಸುವ ಅಪಾರ ರಾಜಕೀಯ ಸಂಕಲ್ಪ ಬಲದ, ಸಾಮುದಾಯಿಕ ಪ್ರಯತ್ನಗಳು ಸಾಧ್ಯವಾಗಿಲ್ಲ.

ಗಾಂಧಿ ಬೇಕೆ, ಎಷ್ಟು ಬೇಕು ಎನ್ನುವ ಆಯ್ಕೆ ನನ್ನ ಮಟ್ಟಿಗೆ ಇಲ್ಲವೇ ಇಲ್ಲ, ಎದೆಗೆ ನೆಟ್ಟ ಮುಳ್ಳಿನ ಹಾಗೆ ನನ್ನಲ್ಲಿ ಇದ್ದೇ ಇದ್ದಾರೆ.



**–ರಾಜೇಂದ್ರ ಚೆನ್ನಿ,** ನಿವೃತ್ತ ಇಂಗ್ಲಿಷ್ ಅಧ್ಯಾಪಕರು ಮತ್ತು ಚಿಂತಕರು, ಶಿವಮೊಗ್ಗ

## ಸ್ವತಂತ್ರ ಭಾರತದ ಪ್ರಥಮ ಸತ್ಯಾಗ್ರಹಿ

. ದೇಶದ ಮೊತ್ತ ಮೊದಲ ಸ್ವಾತಂತ್ರ್ಯದಿನದಂದು, ಸ್ವಾತಂತ್ರ್ಯ ಚಳುವಳಿಯ ಮಹಾನ್ ನಾಯಕ ಗಾಂಧೀಜಿ ದೇಶದ ರಾಜಧಾನಿಯಲ್ಲಿ ಇರಲಿಲ್ಲ. ಪೂರ್ವ ಭಾರತದಲ್ಲಿ ಉಲ್ಬಣಗೊಂಡಿದ್ದ ಕೋಮು ಪರಿಸ್ಥಿತಿಯನ್ನು ತಹಬಂದಿಗೆ ತರಲು ಅವರು ಬಂಗಾಳಕ್ಕೆ ತೆರಳಿದ್ದರು. ೧೯೪೭ರ ಆಗಸ್ಟ್ ೧೫ರಂದು ಕಲ್ಕತ್ತದಲ್ಲಿದ್ದ ಅವರು ಸಂಭ್ರಮದ ಬದಲು ಉಪವಾಸ ಆಚರಿಸಿದರು; ದೇಶ ಸಾವಿನ ಸೂತಕದಲ್ಲಿರುವಂತೆ ಗಾಂಧೀಜಿಗೆ ಕಂಡಿರಬೇಕು.

ನಂತರದ ದಿನಗಳಲ್ಲಿ ದೆಹಲಿಯಲ್ಲಿ ಹಿಂದೂ ಮುಸ್ಲಿಂ ದಂಗೆ ತೀವ್ರಗೊಂಡು ಮುಸ್ಲಿಮರ ಬದುಕು ಕ್ಷಣಕ್ಷಣಕ್ಕೂ ಅಪಾಯಕ್ಕೆ ಸಿಗುವಂತಾದಾಗ ಗಾಂಧಿ ಈ ವಾತಾವರಣಕ್ಕೆ ಪ್ರತಿರೋಧ ಮತ್ತು ಪ್ರಾಯಶ್ಚಿತ್ತವಾಗಿ ೧೯೪೮ರ ಜನವರಿ ೧೩ರಂದು ಗಾಂಧೀಜಿ ತಮ್ಮ ಬದುಕಿನ ಕಟ್ಟಕಡೆಯ ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಪ್ರಾಯಶಃ ಅದುವೇ ಸ್ವತಂತ್ರ ಭಾರತದ ಪ್ರಪ್ರಥಮ ಸತ್ಯಾಗ್ರಹ ಕೂಡ. ಆಗ ೭೯ರ ಇಳಿವಯಸ್ಸಿನಲ್ಲಿದ್ದ ಗಾಂಧೀಜಿಯವರ ದೇಹಾರೋಗ್ಯದ ಬಗ್ಗೆ ಪ್ರಧಾನಿ ನೆಹರೂ ಮತ್ತು ಗೃಹಮಂತ್ರಿ ಪಟೇಲ್ ಸೇರಿದಂತೆ ಎಲ್ಲ ಕಾಂಗ್ರೆಸ್ ನಾಯಕರೂ ಚಿಂತಾಕ್ರಾಂತರಾಗಿದ್ದರು; ಗಾಂಧೀಜಿ ತನ್ನ ಈ ಸತ್ಯಾಗ್ರಹವನ್ನು ನಿಲ್ಲಿಸಲು ಹಾಕಿದ ಈ ಮುಖ್ಯ ಶರತ್ತುಗಳಿಂದ ಇವರಿಗೆಲ್ಲ ಕಸಿವಿಸಿಯಾಗಿತ್ತು:

ಅ). ಪ್ರತಿಕೂಲ ಪರಿಸ್ಥಿತಿಯ ಕಾರಣ ಮುಂದೂಡಲ್ಪಟ್ಟಿರುವ ನಗರದ ಖ್ವಾಜಾ ಕುತುಬುದ್ದೀನ್ ದರ್ಗಾದ ಉರೂಸ್ ಅನ್ನು , ಅದೊಂದು ಧಾರ್ಮಿಕ ಆಚರಣೆಯಾದ್ದರಿಂದರಿಂದ ಅದನ್ನು ನಿಗದಿತ ದಿನದಂದೇ ನಡೆಯಗೊಡಬೇಕು.

ಆ). ದೆಹಲಿಯಲ್ಲಿ ಹಲವು ಕಡೆ ಬಲಾತ್ಕಾರದಿಂದ ಮಸೀದಿಗಳನ್ನು ವಶಪಡಿಸಿಕೊಂಡು ದೇವಾಲಯ ಮತ್ತು ಗುರುದ್ವಾರಗಳನ್ನಾಗಿ ಪರಿವರ್ತಿಸಲಾಗಿದೆ. ಅವುಗಳನ್ನು ಮರಳಿ ಮುಸ್ಲಿಂರ ವಶಕ್ಕೆ ಕೊಡಬೇಕು.

ಇ) ಮುಸ್ಲಿಮರ ಮೇಲೆ ಹೇರಲಾಗಿರುವ ಆರ್ಥಿಕ ಬಹಿಷ್ಕಾರವನ್ನು ಹಿಂತೆಗೆದುಕೊಳ್ಳಬೇಕು ಮತ್ತು ಪ್ರತಿ ಮುಸ್ಲಿಂ ಕುಟುಂಬಕ್ಕೂ ರಕ್ಷಣೆ ಒದಗಿಸಬೇಕು.

ಈ) ದೇಶವಿಭಜನೆಯ ಒಪ್ಪಂದದಂತೆ, ಪಾಕಿಸ್ತಾನಕ್ಕೆ ಭಾರತ ತನ್ನ ಖಜಾನೆಯಿಂದ ೫೫ ಕೋಟಿ ರೂಪಾಯಿಗಳನ್ನು ಕೊಡಬೇಕಿತ್ತು. ಈ ನಡುವೆ ಪಾಕಿಸ್ತಾನದ ಬಾಡಿಗೆ ಬಂಟರು ಕಾಶ್ಮೀರದೊಳಗೆ ಆಕ್ರಮವಾಗಿ ನುಗ್ಗಿದ ಕಾರಣಕ್ಕೆ ಭಾರತ ಈ ಪಾವತಿಯನ್ನು ತಡೆಹಿಡಿದಿತ್ತು. 'ಅದು ಸಲ್ಲದು; ಭಾರತ ಈಗ ಒಂದು ಸ್ವತಂತ್ರ ಸಾರ್ವಭೌಮ ರಾಷ್ಟ್ರವಾಗಿದ್ದು ಅಂತರ್ರಾಷ್ಟ್ರೀಯ ಒಪ್ಪಂದಗಳನ್ನು ಅದು ಪಾಲಿಸಲೇಬೇಕು 'ಎಂಬುದು ಗಾಂಧೀಜಿಯವರ ನಿಲುವಾಗಿತ್ತು.

ದಿನೇ ದಿನೇ ಕುಸಿಯುತ್ತಿದ್ದ ಗಾಂಧೀಜಿಯ ದೇಹ ಸ್ಥಿತಿಯ ಬಗ್ಗೆ ಆತಂಕಿತರಾಗಿದ್ದ ದೇಶದ ವಿವಿಧ ರಾಜಕೀಯ ಪಕ್ಷಗಳ ನೇತಾರರು, ಆರ್. ಎಸ್.ಎಸ್, ಹಿಂದು ಮಹಾಸಭಾ ಹಾಗೂ ಇನ್ನಿತರ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಗಾಂಧೀಜಿಯನ್ನು ಮುಖತಃ ಭೇಟಿಯಾಗಿ ಅವರ ಶರತ್ತುಗಳನ್ನು ತಾವು ಕೂಡಲೇ ಜ್ಯಾರಿಗೊಳಿಸುವುದಾಗಿ ಆಶ್ವಾಸನೆ ಕೊಟ್ಟರು. ತನ್ನ ಸತ್ಯಾಗ್ರಹದ ಐದನೇದಿನ, ಅಂದರೆ ೧೯೪೮ರ ಜನವರಿ ೧೮ರಂದು ಗಾಂಧೀಜಿ ತನ್ನ ಉಪವಾಸವನ್ನು ನಿಲ್ಲಿಸಿದರು. ಅದೇ ಜನವರಿ ೩೦ರಂದು ಹಂತಕನ ಗುಂಡೇಟಿನಿಂದ ಅವರ ದೇಹಾಂತ್ಯವಾಯಿತು.



**–ಜಿ. ರಾಜಶೇಖರ,** ಚಿಂತಕರು, ಉಡುಪಿ

## 'ಸ್ವದೇಶಿ'ಯನ್ನು ಆಯ್ದುಕೊಂಡ ಗಾಂಧಿ ನಮಗೆ ಬೇಕು

ಹುಸಿ–ದಿಟಗಳಗಳ ಗಡಿಗೆರೆಗಳನ್ನು ಮಾಧ್ಯಮಗಳು ಅಳಿಸಿಹಾಕಿರುವ, ನಂಬಿಕೆ–ಹೇಳಿಕೆ–ವರ್ತನೆಗಳ ಅಂತರವು ಮಿತಿ ಮೀರಿರುವ ನಮ್ಮ ಕಾಲದಲ್ಲಿ, ಲೋಕವಿರೋಧವಿರಲಿ, ಲೋಕಸಮ್ಮತಿಯಿರಲಿ ತನ್ನ ಅನಿಸಿಕೆಗಳಿಗೆ ಅಂಟಿಕೊಂಡ ಗಾಂಧಿ ವೈಯಕ್ತಿಕ ಆದರ್ಶವಾಗಿ ನನಗೆ ಮುಖ್ಯ. ತಾತ್ವಿಕಬದ್ಧತೆಯಿದ್ದರೂ ಅವರು ಯಾರನ್ನೂ ಶತ್ರುಗಳೆಂದು ಪರಿಗಣಿಸಲಿಲ್ಲ. ಇಂದು 'ನಾವು ಸರಿ. ನಮ್ಮನ್ನು ಒಪ್ಪದವರು ತಪ್ಪು,' ಎಂಬ ವಕೀಲೀ ಧೋರಣೆಯೇ ಆಳುತ್ತಿದೆ.

ಗಾಂಧಿಯೊಳಗಿದ್ದ ದಾರ್ಶನಿಕ, ಜನಹಿತಚಿಂತಕ ಮತ್ತು ಜಾಣ ರಾಜಕಾರಣಿಗಳಲ್ಲಿ ಬೇಕಾದುದನ್ನು ಆರಿಸಿಕೊಳ್ಳುವ ಬೇಡವಾದುದನ್ನು ಪ್ರಶ್ನಿಸುವ ವಿವೇಕ ಇಂದಿನ ಅಗತ್ಯ.

ಗಾಂಧಿಯವರನ್ನು ಸಂಪೂರ್ಣವಾಗಿ ಮರೆತಿರುವ ನಮ್ಮ ಸಮಾಜವು ಅದರ ಕಹಿ ಫಲಗಳನ್ನು ಉಣ್ಣುತ್ತಿದೆ. 'ಜಾಗತೀಕರಣ'ದ ಬದಲು 'ಸ್ವದೇಶಿ'ಯನ್ನು ಆಯ್ದುಕೊಂಡ ಗಾಂಧಿ ನಮಗೆ ಬೇಕು. ಇದು ಸಾಧ್ಯವಾಗಲು ಹೊರ ಜಗತ್ತಿನೊಡನೆಯ ನಮ್ಮ ದೇಶದ ಸಂಬಂಧದ ಸ್ವರೂಪವನ್ನು ಮರುಪರಿಶೀಲಿಸ ಬೇಕು.

ಒಳಗಿನ, ಹೊರಗಿನ ಬಂಡವಾಳಶಾಹಿಗಳ ಸಹಯೋಗದಿಂದ ಹುಟ್ಟಿಕೊಂಡಿರುವ ರಾಜಕೀಯ ವ್ಯವಸ್ಥೆಯಾಗಲೀ, ಭೋಗಜೀವನದ ರುಚಿ ಕಂಡಿರುವ ಮೇಲು/ಮಧ್ಯಮವರ್ಗಗಳಾಗಲೀ, ಇವರನ್ನು ಆದರ್ಶವಾಗಿ ಇಟ್ಟುಕೊಂಡಿರುವ ಕೆಳವರ್ಗದವರಾಗಲೀ ತಾವಾಗಿಯೇ ಇದನ್ನು ಮಾಡುವುದಿಲ್ಲ. ಆದ್ದರಿಂದ ಗಾಂಧೀವಾದವನ್ನು ಕುರಿತ ತಿಳಿವಳಿಕೆಯು ಶೋಷಿತ ಸಮುದಾಯಗಳ ಹೋರಾಟದ ಮೂಲಕವಾಗಿಯೇ ಮೂಡಿ ಬರಬೇಕಾಗಿದೆ.

ವೈಯಕ್ತಿಕವಾದ ಆಸ್ತಿಕತೆ, ನಾಸ್ತಿಕತೆಗಳನ್ನು ಬದಿಗಿಟ್ಟು ನೋಡಿದಾಗ, ಧರ್ಮ ಮತ್ತು ಜಾತಿಗಳ ಬಗ್ಗೆ ಗಾಂಧೀಜಿಯ ತಳೆದ ಪರಿಷ್ಕರಣವಾದದ ನಿಲುವನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಗುತ್ತದೆ. ಈ ಸಂದರ್ಭದಲ್ಲಿ ಸಾಂಸ್ಥಿಕವಾದ ಧರ್ಮ ಮತ್ತು ದೇವಾಲಯ ಪ್ರವೇಶವನ್ನು ಕಟುವಾಗಿ ವಿರೋಧಿಸಿದರೂ ತನ್ನ ಬದುಕಿಗೆ ಆಧ್ಯಾತ್ಮಿಕವಾದ 'ಕೋರ್' ಅನ್ನು ರೂಪಿಸಿಕೊಂಡಿದ್ದ ಕುವೆಂಪು ನನಗೆ ಸಮ್ಮತ. (ವೈಯಕ್ತಿಕವಾಗಿ ನಾನು ನಾಸ್ತಿಕನೇ ಆದರೂ.) ನೈತಿಕತೆಯ ನೆಲೆಗಟ್ಟು ಇಲ್ಲದ ಧರ್ಮ/ಭಕ್ತಿಗಳು ವಿಷವೆಂದೇ ನನ್ನ ಗ್ರಹಿಕೆ.

ಯಾವುದೋ ಕಾಲದಲ್ಲಿ ರೂಪಿತವಾದ ಎಲ್ಲ ವಾದಗಳಂತೆ ಗಾಂಧೀವಾದವೂ ಇಂದಿಗೆ ಅಗತ್ಯವಾದ ಹೊಂದಾಣಿಕಗಳನ್ನು ಮಾಡಿಕೊಳ್ಳಬೇಕು. ಗಾಂಧಿ, ಅಂಬೇಡ್ಕರ್, ಲೋಹಿಯಾ ಮತ್ತು ಮಾರ್ಕ್ಸ್‌ರ ಚಿಂತನೆಗಳ ಆರೋಗ್ಯಕರವಾದ ಸಂಯೋಜನೆಯು ಇಂದಿನ ಅಗತ್ಯ. ಈ ದಿಕ್ಕಿನಲ್ಲಿ ನಮ್ಮವರೇ ಆದ ಬಸವಣ್ಣ ಮತ್ತು ಕುವೆಂಪು ಸೂಕ್ತವಾದ ಚಿಂತನೆಗಳನ್ನು ಮಂಡಿಸಿದ್ದಾರೆ. ವಿಜ್ಞಾನ–ತಂತ್ರಜ್ಞಾನ, ಭಾಷೆ, ಆಧುನಿಕತೆ ಮುಂತಾದ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಕುವೆಂಪು ಗಾಂಧಿಯನ್ನು ಒಳಗೊಂಡೂ ಅವರನ್ನು ಮೀರಿದ್ದಾರೆ.

ಗ್ರಾಮಸ್ವರಾಜ್ಯದ ಮೂಲಕ ಗಾಂಧಿ ರೂಪಿಸಿದ ವಿಕೇಂದ್ರೀಕರಣ ಮತ್ತು ಮೇಲುಜಾತಿಗಳಿಂದ ನಡೆಯುವ ಶೋಷಣೆಯನ್ನು ತಪ್ಪಿಸಲು ಅಂಬೇಡ್ಕರ್/ ಸಂವಿಧಾನವು ರೂಪಿಸಿದ ಕೇಂದ್ರೀಕರಣ ಎರಡನ್ನೂ ಬಳಸಿಕೊಳ್ಳುವುದು ಇಂದಿನ ಅಗತ್ಯ. ಕಳೆದ ಕಾಲವನ್ನು ವೈಭವೀಕರಿಸಿ ಅದನ್ನು ಮರಳಿ ತರುವ ಯಾವುದೇ ಪ್ರಯತ್ನವು ನನಗೆ ಸಮ್ಮತವಲ್ಲ. 'ರಾಮರಾಜ್ಯ'ವು ಎಂದೂ ಇರಲಿಲ್ಲ, ಬರುವುದೂ ಇಲ್ಲ. ಸಮುದಾಯಗಳನ್ನು ಉದ್ದೇಶಿಸುವ ಯಾವುದೇ ಪ್ರಣಾಳಿಕೆಯು ಅವರ ಬದುಕನ್ನು, ಕನಸುಗಳನ್ನು, ಕೊರತೆಗಳನ್ನು ಅರ್ಥ ಮಾಡಿಕೊಳ್ಳಬೇಕು. ಗಾಂಧೀಜಿಯವರು ಸಮುದಾಯಗಳ ಸಂಗಡ ಇದ್ದರೇ ವಿನಾ ಅವುಗಳನ್ನು ಅಲ್ಲಗಳೆಯಲಿಲ್ಲ.



**–ಎಚ್.ಎಸ್. ರಾಘವೇಂದ್ರ ರಾವ್,**

ನಿವೃತ್ತ ಕನ್ನಡ ಆಧ್ಯಾಪಕರು ಮತ್ತು ಚಿಂತಕರು, ಬೆಂಗಳೂರು

## ಇಂದಿಗೆ ಬೇಕು ಸ್ವರಾಜ್ಯ ತತ್ವ

ಜಾಗತೀಕರಣ, ವ್ಯಾಪಾರೀಕರಣದ ಅಲೆಯೊಳಗೆ ನಿಂತಿರುವ ನಮಗೆ ಗಾಂಧೀಜಿಯೇ ಅಪ್ರಸ್ತುತವೇನೋ ಅನಿಸುತ್ತದೆ. ಆದರೂ ಜಾಗತೀಕರಣದ ದುಷ್ಪರಿಣಾಮವನ್ನು ನಿತ್ಯ ಕಾಣುತ್ತಿರುವ ನನಗಂತೂ ಪ್ರತಿ ಹೆಜ್ಜೆಯಲ್ಲೂ ಗಾಂಧಿ ನೆನಪಾಗುತ್ತಾರೆ. ಮಹಾತ್ಮಾ ಗಾಂಧೀಜಿಯವರ ವಿಚಾರವನ್ನು ಎತ್ತಿಕೊಂಡಾಗೆಲ್ಲ ನನಗೆ ಮನಸ್ಸಿಗೆ ಬರುವುದು ಅವರ ಸ್ವದೇಶೀ ಮತ್ತು ಸ್ವರಾಜ್ಯ ತತ್ವಗಳು.

ನಮ್ಮಿಂದ ದೂರವಿರುವುದನ್ನು ಬಿಟ್ಟು ಹತ್ತಿರದ ಸುತ್ತಮುತ್ತಲಿನ ವಸ್ತುಗಳನ್ನು, ರಾಜಕೀಯ ಕ್ಷೇತ್ರದಲ್ಲಿ ಸ್ವದೇಶೀ ಸಂಸ್ಥೆಗಳ ಉಪಯೋಗವನ್ನೇ, ಅವುಗಳಲ್ಲಿ ದೋಷಗಳಿದ್ದರೆ ಅವನ್ನು ಸರಿಪಡಿಸಿ ಬಳಸಬೇಕು, ಆರ್ಥಿಕ ರಂಗದಲ್ಲಿ ಹತ್ತಿರದ ನೆರೆಯವರು ಮಾಡಿದ ವಸ್ತುಗಳನ್ನೇ ಬಳಸಬೇಕು ಎಂದಿದ್ದರು ಗಾಂಧೀಜಿ. ಇವೊತ್ತಿನ ಮುಕ್ತ ಮಾರುಕಟ್ಟೆ ಮತ್ತು ಅಂತರರಾಷ್ಟ್ರೀಯ ವ್ಯಾಪಾರೀ ಸಂಸ್ಥೆಗಳ ನಿಯಂತ್ರಣದ ಸನ್ನಿವೇಶದಲ್ಲಿ ಈ ವಿಚಾರಗಳು ವಿಚಿತ್ರವೆನಿಸಿದರೂ, ಬಹುಕಾಲ ಇರಬಹುದಾದ ಬಾಹ್ಯಶಕ್ತಿಗಳ ನಿಯಂತ್ರಣದ ದುಷ್ಪರಿಣಾಮವನ್ನು ನೆನೆದುಕೊಂಡರೆ ಸುಸ್ಥಿರ ಅಭಿವೃದ್ಧಿಗಾಗಿ, ಮಾನವನ ಉಳಿವಿಗಾಗಿ ಮತ್ತೆ ಈ ಶಬ್ದದ್ವಯಗಳು (ಸ್ವದೇಶೀ, ಸ್ವರಾಜ್ಯ) ನನ್ನನ್ನು ಕಾಡುತ್ತವೆ.

ಇಂದು ಧಾರವಾಡವಿರಲಿ, ಕರಾವಳಿಯ ಚಿಕ್ಕ ಪಟ್ಟಣವಿರಲಿ, ಅಲ್ಲಿನ ನೀರು ಮತ್ತು ನೈರ್ಮಲ್ಯದ ವ್ಯವಸ್ಥೆಗಳ ಬಗ್ಗೆ ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಗಳು ನಿರ್ಧಾರ ಮಾಡುತ್ತವೆಂಬುದು ಸ್ವರಾಜ್ಯ ಎಂಬ ನೀತಿಯಿಂದ ಅದೆಷ್ಟು ದೂರ

ಸಾಗಿದ್ದೇವೆ ಎಂದು ತೋರಿಸುತ್ತದೆ. ಧಾರವಾಡದಲ್ಲಿ ನೀರು ನೈರ್ಮಲ್ಯದ ಸಮಸ್ಯೆ ಇದ್ದರೆ ಸಮಸ್ಯೆಗೆ ಪರಿಹಾರವೂ ಸ್ಥಳೀಯವಾಗಿಯೇ ಇರುತ್ತದೆ. ಧಾರವಾಡ ನದಿ ದಂಡೆಯ ಮೇಲೆ ಇರುವ ಪಟ್ಟಣವಲ್ಲದಿದ್ದರೂ, ಶಾಲ್ಮಲೆ, ಬೆಣ್ಣೆ ತೊರೆ, ಬೇಡ್ತಿ ಹಳ್ಳಗಳ ಬುಡ ಧಾರವಾಡದ ಸಮೀಪ ಇವೆ. ಅಸಂಖ್ಯಾತ ಕೆರೆಗಳು, ಲೆಕ್ಕವಿಲ್ಲದಷ್ಟು ಬಾವಿಗಳು ಇರುವ ಧಾರವಾಡದಲ್ಲಿ ಸ್ಥಳೀಯ ಹಿರಿಯರು, ನಾಗರಿಕರು, ಪ್ರಾಜ್ಞರನ್ನು ಕೂಡ್ರಿಸಿ ಚರ್ಚಿಸಿದ್ದರೆ ಈ ನದಿ ಮೂಲಗಳನ್ನು, ಕೆರೆ ತೊರೆಗಳನ್ನು ಸಂರಕ್ಷಿಸುವ ಚಿಂತನೆಗಳಾಗುತ್ತಿದ್ದುವೇನೋ, ಆದರೆ ನಮ್ಮ ಜನಪ್ರತಿನಿಧಿಗಳು ವಿದೇಶೀ ಸಾಲಕ್ಕೆ ಮೊರೆ ಇಟ್ಟರು. ಹಣದ ಥೈಲಿಯನ್ನು ಝಣಝಣಿಸಿದ ವಿದೇಶೀ ಬ್ಯಾಂಕುಗಳು ನೂರೊಂದು ಷರತ್ತುಗಳನ್ನಿಟ್ಟರು.! ಆಸ್ಟ್ರಿಯಾದ ಖಾಸಗಿ ಕಂಪನಿಯು ಸರ್ವೆ ಮಾಡಿತಂತೆ, ಜನರು 'ದುಡ್ಡುಕೊಟ್ಟರೂ ಪರವಾಗಿಲ್ಲ, ನಿರಂತರ ನೀರು ಬೇಕು' ಎಂದರಂತೆ! ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ನಿಯೋಜಿತವಾದ ಫ್ರೆಂಚ್ ಕಂಪನಿಯು ಧಾರವಾಡದಲ್ಲಿ ನಿರಂತರ ನೀರು ಹರಿಸಲು ನೆಲ ಅಗೆಯುತ್ತಲೇ ಇದೆ. ಹತ್ತು ವರ್ಷಗಳಿಂದ ಅಗೆಯುತ್ತಲೇ ಇದೆ ರಸ್ತೆಗಳನ್ನು, ಬೀದಿಗಳನ್ನು, ಗಟಾರುಗಳನ್ನು. ಆದರೆ ಧಾರವಾಡದ ಜನತೆ ಹಿಂದಿನಂತೆಯೇ ಇಂದಿಗೂ ೫ ದಿನಕ್ಕೊಮ್ಮೆ ನೀರಿನ ದಾರಿ ನೋಡುತ್ತಲೇ ಇರುತ್ತದೆ. ನಿತ್ಯ ಮೀಯಿಸುತ್ತಿರುವ ಧೂಳು ಮತ್ತೆ ಮತ್ತೆ ಧೂಳೀಪಟವಾಗಿರುವ ಗಾಂಧಿ ತತ್ವವನ್ನು ನೆನಪಿಗೆ ತರುತ್ತದೆ.



**–ಶಾರದಾ ಗೋಪಾಲ,** ಸಾಮಾಜಿಕ ಕಾರ್ಯಕರ್ತೆ, ಧಾರವಾಡ

## ಗಾಂಧಿ ಪುಸ್ತಕವಲ್ಲ; ಬದುಕು ಬೆಳಕಾಗಬಲ್ಲುದು

ಕೇರಳ–ಕೊಡುಗುಗಳ ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಅನೇಕರಿಗೆ ಗಾಂಧಿ ನೆನಪು ಕಾಡಲಾರಂಭಿಸಿದೆ. ಅವರು ಹೇಳಿದ್ದರು: ನಮ್ಮ ಹಳ್ಳಿಗಳನ್ನು ನಾವು ನಾಶಮಾಡಿದರೆ, ಭಾರತವನ್ನೇ ನಾವು ನಾಶಮಾಡಿದಂತೆ; ಹಳ್ಳಿಗಳ ಸತ್ವವನ್ನು ಹೀರಿ ಪಟ್ಟಣಗಳು ಬೆಳೆಯುತ್ತವೆ, ಇದೊಂದು ವ್ಯವಸ್ಥಿತ ಕ್ರೌರ್ಯ; ನಗರಗಳು ವಿದೇಶೀ ಪ್ರಾಬಲ್ಯದ ಫಲ. ಜನ ಶಾಂತಿಯಿಂದ ಅಹಿಂಸೆಯಿಂದ ಬದುಕಬೇಕಾದರೆ ಹಳ್ಳಿಗಳಲ್ಲಿ ಬದುಕಬೇಕು. ನಾವು ಅಹಿಂಸಾ ಪ್ರಧಾನವಾದ ಸ್ವರಾಜ್ಯ ಕಟ್ಟಬೇಕಾದರೆ ಹಳ್ಳಿಗಳಿಗೆ ಲಭಿಸಬೇಕಾದ ಸ್ಥಾನವನ್ನು ಅವುಗಳಿಗೆ ಕೊಡಬೇಕು.

ಈ ವಿಚಾರಗಳನ್ನೊಳಗೊಂಡ ಗಾಂಧೀಜಿಯ 'ಹಿಂದ್ ಸ್ವರಾಜ್ಯ'ವೂ ನಮ್ಮೆದುರಿಗೇ ಇದೆ. ಪ್ರಶ್ನೆ ಏನೆಂದರೆ ಐರೋಪ್ಯ ಅಭಿವೃದ್ಧಿ ಮಾದರಿಯ 'ಸ್ಮಾರ್ಟ್ ಸಿಟಿ' ಗಳು ನಮ್ಮ ದೇಶದ ಸರಾಸರಿ ಜನರ ಕನಸಾಗಿರುವಾಗ ಗಾಂಧಿ ಕಂಡುಕೊಂಡ ಈ ಆದ್ಯತೆಗಳಿಗೆ ಸ್ಥಾನವಿದೆಯೆ? ಮುಳ್ಳುಗಳು ಅದರ ಬಾಯಿಗೆ ಚುಚ್ಚಿ ರಕ್ತ ಒಸರುತ್ತಿದ್ದರೂ ಒಂಟೆಗಳಿಗೆ ಮುಳ್ಳೇ ಬಹು ಪ್ರಿಯವಾದ ಆಹಾರ ಎಂಬ ರಾಮಕೃಷ್ಣ ಪರಮಹಂಸರು ಹೇಳುತ್ತಿದ್ದ ಕಥೆಯಂತೆ ಅಭಿವೃದ್ಧಿಯ ಆಘಾತಗಳು ಜನರನ್ನು ಸರ್ವನಾಶದತ್ತ ಒಯ್ಯುತ್ತಿದ್ದರೂ ಮಿತಿ ಇಲ್ಲದ ಸುಖದ ಬದುಕಿನ ಬೆಂಬತ್ತಿ ಅಭಿವೃದ್ಧಿಯ ಜಪ ನಿಂತಿಲ್ಲ

ಈ ಹಿನ್ನೆಲೆಯಲ್ಲಿ ಯೋಚಿಸಿದಾಗ ಗಾಂಧಿ ಇಂದು ಹೆಚ್ಚು ಪ್ರಸ್ತುತವಾಗುತ್ತಿರುವುದು ತಿಳಿಯುತ್ತದೆ. ಕಾಯಕ ಪ್ರಧಾನ ಜೀವನ ಶೈಲಿಯಿಂದ ಯಂತ್ರಗಳ ಅವಲಂಬನೆಯನ್ನು ಕಡಿಮೆ ಮಾಡಿಕೊಂಡು ಸರಳ ಜೀವನದ ಸಾಧ್ಯತೆಗಳ ಪ್ರಯೋಗಕ್ಕೆ ನಾವು ಸಿದ್ಧರಾಗಬೇಕಿದೆ. ಇದು ಗಾಂಧೀ ಮಾರ್ಗದ ತಿರುಳು. ಇದನ್ನೊಳಗೊಂಡ 'ಹಿಂದ್ ಸ್ವರಾಜ್' ಪುಸ್ತಕದ ಅಂಶಗಳನ್ನು ಯಥಾವತ್ತಾಗಿ ಇಂದಿನ ಆಚರಣೆಯಾಗಿ ತರುವ ಕನಸು ಅಗತ್ಯವಿಲ್ಲ. ಏಕೆಂದರೆ, ಪುಸ್ತಕದ ವಸ್ತು–ವಿವರಗಳಷ್ಟೆ ಅದರ ಜೀವಾಳವಲ್ಲ. ಗಾಂಧೀಜಿಯ ಜೀವನ ಇದಕ್ಕೆ ಬೆನ್ನಾಗಿ ನಿಂತಿದೆ. ಗಾಂಧಿ ಬದುಕು ಮತ್ತು ಬರಹಗಳನ್ನು ಯಥಾವತ್ತಾಗಿ ಇಂದಿನ ಆಚರಣೆಗೆ ಇಳಿಸಲಾಗದ್ದರೂ ಅವುಗಳ ಆಶಯದ ದಿಕ್ಕಿನಲ್ಲಿ ಪ್ರಯೋಗಶೀಲರಾಗಿ ವರ್ತಮಾನದ ದುರಂತಗಳಿಗೆ ಸ್ಪಂದಿಸುವ ಜೀವಂತಿಕೆಯನ್ನಾದರೂ ಪ್ರದರ್ಶಿಸಬೇಕಿದೆ. "ಗಾಂಧೀಜಿ ನೀವು ನಿಮ್ಮ ಆ ಪುಟ್ಟ ಪುಸ್ತಕಕ್ಕಿಂತ ಎಷ್ಟೋ ದೊಡ್ಡವರು" ಎಂದು ಹೇಳುತ್ತ ಗಾಂಧಿ ಚಿಂತನೆಯಿಂದ ನುಣಿಚಿಕೊಂಡ ಜವಾಹರ್‌ಲಾಲ್‌ರ ಹಾಗೆ ನಾವಾಗುವುದು ಬೇಡ.



**–ಜಿ..ಎಸ್. ಜಯದೇವ,** ಚಿಂತಕರು, 'ದೀನಬಂಧು', ಚಾಮರಾಜನಗರ

## ನಿಜವಾದ ಧಾರ್ಮಿಕ ಬದುಕಿನ ಮಾದರಿ

ಮೊನ್ನೆ ಐದು ಜನ ಸಾಮಾಜಿಕ ಹೋರಾಟಗಾರರನ್ನು ಮಹಾರಾಷ್ಟ್ರ ಸರ್ಕಾರ ನಕ್ಸಲೀಯರಿಗೆ ಬೆಂಬಲ ನೀಡುತ್ತಿರುವರೆಂಬ ಆಪಾದನೆ ಮೇಲೆ ಬಂಧಿಸಿದಾಗ ಹಿರಿಯ ಹೋರಾಟಗಾರರೊಬ್ಬರು 'ಗಾಂಧಿ ಈಗ ಬದುಕಿದ್ದರೆ ಏನು ಮಾಡುತ್ತಿದ್ದರು?' ಎಂದು ಕೇಳಿದರು. ಬದುಕಿದ್ದರೆ ಗಾಂಧಿ ಎಲ್ಲರಿಗಿಂತ ಮೊದಲೇ ಜೈಲು ಪಾಲಾಗುತ್ತಿದ್ದರು ಎಂದು ಹೇಳಿದೆ. ಹೋರಾಟವನ್ನೇ ಬದುಕಾಗಿಸಿಕೊಂಡಿದ್ದ ಗಾಂಧಿ ಬೇರೇನು ತಾನೇ ಮಾಡಲು ಸಾಧ್ಯವಿತ್ತು?

ನಂತರ ಯೋಚಿಸಿದೆ, ಗಾಂಧಿ ಬದುಕಿದ್ದರೆ ಕೇವಲ ಜೈಲು ಪಾಲು ಮಾತ್ರವಾಗುತ್ತಿರಲಿಲ್ಲ, ಅದಕ್ಕೂ ಮೊದಲು ಸರ್ಕಾರದ ವಿರುದ್ಧ ಇಡೀ ದೇಶವನ್ನೇ ಎತ್ತಿ ನಿಲ್ಲಿಸುತ್ತಿದ್ದರು. ಯಾಕೆಂದರೆ ಸ್ವಾತಂತ್ರ್ಯಾನಂತರದ ಭಾರತದಲ್ಲಿ ಉಂಟಾದ ನೈತಿಕ ಅಧಃಪತನವನ್ನು ಅವರೆಂದೂ ಸಹಿಸುತ್ತಿರಲಿಲ್ಲ. ಸಾರ್ವಜನಿಕ ಜೀವನದಲ್ಲಿ ಸದಾ ನೈತಿಕ ಮೌಲ್ಯಗಳಿಗೆ ಆದ್ಯತೆ ಕೊಡುತ್ತಿದ್ದ ಗಾಂಧಿ ಇಂದಿನ ನಾಯಕರಲ್ಲಿ ಕಾಣಿಸದ ತೆರೆದಿಟ್ಟ ಪುಸ್ತಕದಂತಹ ಬದುಕಿನ ಮೂಲಕ ಜನ ಬೆಂಬಲ ಗಳಿಸುತ್ತಿದ್ದರು.

ಭಾರತದ ಇಂದಿನ ದೊಡ್ಡ ದುರಂತವೆಂದರೆ ಜನ ನಂಬುವ ನಾಯಕರ ಕೊರತೆ. ಆಧುನಿಕತೆಯ ಲೋಲುಪತೆಯಲ್ಲಿ ಕೊಚ್ಚಿಹೋಗುತ್ತಿರುವ ಜನ, ಬೇರೆ ಯಾವುದರ ಬಗ್ಗೆಯೂ ಯೋಚಿಸುತ್ತಿರುವಂತೆ ಕಾಣುತ್ತಿಲ್ಲ. ಭ್ರಷ್ಟಾಚಾರ, ಕೋಮುವಾದ, ನಿರುದ್ಯೋಗ, ಬಡವ–ಶ್ರೀಮಂತರ ನಡುವೆ ಹೆಚ್ಚುತ್ತಿರುವ ಅಂತರ ಈ ಯಾವುವೂ ಅವರಿಗೆ ತಟ್ಟುತ್ತಿಲ್ಲ.

ಗಾಂಧಿಯ ಪ್ರಸ್ತುತತೆ ಇರುವುದು ಇಲ್ಲಿಯೇ. ಸರಳ ಜೀವನ ಮತ್ತು ಉದಾತ್ತ ಬದುಕು ಗಾಂಧಿ ತೋರಿಸಿದ ಮಾರ್ಗ. ಭಾರತೀಯ ಸಮಾಜದ ನಾಡಿ ಮಿಡಿತ ಗಾಂಧಿಗೆ ಚೆನ್ನಾಗಿ ಅರಿವಿತ್ತು. ಒಬ್ಬ ಸನಾತನ ಹಿಂದೂ ಆಗಿದ್ದುಕೊಂಡೂ ಅಸ್ಪೃಶ್ಯತೆ ವಿರುದ್ಧ ಹೋರಾಡುವ ಶಕ್ತಿ ಅವರಿಗಿತ್ತು. ಮುಸ್ಲಿಮರನ್ನು ಭಾರತೀಯ ಸಂಸ್ಕೃತಿಯ ಭಾಗವಾಗಿಯೇ ಉಳಿಸಿಕೊಳ್ಳಲು ಪ್ರಯತ್ನಿಸಿದರು. ನಿಜವಾದ ಧಾರ್ಮಿಕರೆಂದರೆ ಹೇಗೆ ಬದುಕಿರಬೇಕೆಂಬುದನ್ನು ಅವರು ತೋರಿಸಿದರು. ಅತಿಯಾದ ಯಂತ್ರ ನಾಗರಿಕತೆವಿರೋಧಿಸುತ್ತಲೇ ಚರಕದಂತ ಜೀವನಾಡಿ ಕೈ ಯಂತ್ರದ ಅಗತ್ಯತೆಯನ್ನೂ ಅವರು ಸಾರಿ ಹೇಳುತ್ತಿದ್ದರು.

ಅಭಿವೃದ್ಧಿಯ ಹೆಸರಿನಲ್ಲಿ ಇಂದು ದೇಶದ ಸಂಪತ್ತನ್ನೆಲ್ಲ ಕೊಳ್ಳೆ ಹೊಡೆಯುತ್ತಿರುವ ರಾಜಕಾರಣಿಗಳು ಗಾಂಧಿಯನ್ನು ನಿಜವಾಗಿ ಅರ್ಥ ಮಾಡಿಕೊಂಡಿದ್ದರೆ ಈ ವರೆಗಿನ ಅಭಿವೃದ್ಧಿಯ ಪರಿಣಾಮವಾಗಿ ಅನುತ್ಪಾದಕ ಕೇಂದ್ರಗಳಾಗಿ ವಿನಾಶದ ಅಂಚಿಗೆ ತಲುಪಿರುವ ಗ್ರಾಮೀಣ ಆರ್ಥಿಕ ಬದುಕನ್ನು ವಿಕೇಂದ್ರೀಕರಣದ ಮೂಲಕ ಸುಸ್ಥಿರ ಸ್ವಾವಲಂಬನೆಯತ್ತ ತಿರುಗಿಸದಿದ್ದರೆ ಅದು ಭಾರತವನ್ನು ಮತ್ತೆ ಗುಲಾಮಗಿರಿಗೆ ತಳ್ಳುತ್ತದೆ ಎಂಬುದು ಗೊತ್ತಾಗುತ್ತಿತ್ತು.

ಗಾಂಧಿಯಂತೆ ಹೊಂದಾಣಿಕೆ, ಸಮನ್ವಯತೆ ನಡುವೆಯೂ ನ್ಯಾಯ ನಿಷ್ಠುರಿಯಾಗಿರುವುದು ಇಂದಿನ ಅಗತ್ಯ. ಸ್ವಲ್ಪ ಸಮಾಧಾನ ಚಿತ್ತದಿಂದ ಆಲೋಚಿಸಿದರೆ ಗಾಂಧಿ ವಿರೋಧಿಗಳಿಗೂ ಇದು ಅರ್ಥವಾಗುತ್ತದೆ.



**–ಇಂದೂಧರ ಹೊನ್ನಾಪುರ,** ದಲಿತ ಚಳುವಳಿಯ ಹಿರಿಯ ನಾಯಕರು ಮತ್ತು 'ಸಂವಾದ' ಪತ್ರಿಕೆಯ ಸಂಪಾದಕರು

## ಆತ್ಮಸಾಕ್ಷಿಯ ಏಕೈಕ ಒರೆಗಲ್ಲು

'ರಕ್ತಮಾಂಸಗಳಿಂದ ಕೂಡಿದ ಈ ಮಾದರಿಯ ಮನುಷ್ಯ ಜೀವವೊಂದು ಪ್ರಪಂಚದಲ್ಲಿ ಒಂದೊಮ್ಮೆ ಬಾಳಿ ಬದುಕಿತ್ತು ಎಂದು ಮುಂದಿನ ತಲೆಮಾರು ನಂಬಲಾರದು' ಎಂದು ಮಹಾತ್ಮ ಗಾಂಧಿಯವರ ಬಗ್ಗೆ ಪ್ರಸಿದ್ಧ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಹೇಳಿದ್ದರಂತೆ. ಗಾಂಧೀಜಿ ಒಂದು ಅದ್ಭುತ ಎಂದು ಸಾರುವುದರ ಜತೆಗೆ ಅವರು ಸಾರ್ವಕಾಲಿಕವಾಗಿ ಪ್ರಸ್ತುತ ಎನ್ನುವ ಅರ್ಥವನ್ನು ಈ ಹೇಳಿಕೆಯಲ್ಲಿ ಕಾಣಬಹುದು. ಎಲ್ಲಾ ಸಮಾಜಗಳ ಎಲ್ಲಾ ತಲೆಮಾರುಗಳಿಗೂ ತಮ್ಮನ್ನು ಹೋಲಿಸಿಕೊಳ್ಳಲು ಉನ್ನತಾದರ್ಶದ ಮಾಪನವೊಂದು ಬೇಕು. ಭೌತಿಕ ನೆಲೆಯಲ್ಲಿ, ಬೌದ್ಧಿಕ ನೆಲೆಯಲ್ಲಿ ಉತ್ತುಂಗ ಸಾಧನೆ ಮಾಡಿ "ನೀ ಏರಬಲ್ಲೆಯಾ ನಾನೇರಿದೆತ್ತರಕೆ" ಎಂದು ಎಲ್ಲ ತಲೆಮಾರುಗಳಿಗೆ ಸವಾಲೆಸೆದು ಸ್ಫೂರ್ತಿಯಾಗಬಲ್ಲ ವ್ಯಕ್ತಿಗಳು ಎಲ್ಲಾ ದೇಶಗಳಲ್ಲೂ ಎಲ್ಲಾ ಕಾಲಗಳಲ್ಲೂ ಆಗಿ ಹೋಗಿದ್ದಾರೆ. ಸದ್ಯ ಇದ್ದಾರೆ. ಆದರೆ ನೈತಿಕ ನೆಲೆಯಲ್ಲಿ ಉನ್ನತಾದರ್ಶದ ಅತ್ಯುತ್ಕೃಷ್ಟ ಮಾಪನವಾಗಿ ತಲೆತಲೆಮಾರುಗಳ ಮುಂದೆ ಇರುವುದು ಒಬ್ಬ ಗಾಂಧೀಜಿ ಮಾತ್ರ. ಇದು

ಗಾಂಧೀಜಿಯ ಪ್ರಸ್ತುತತೆ. ಇಡೀ ಪ್ರಪಂಚದಲ್ಲಿ ಎಲ್ಲಾ ಕಾಲದಲೂ ಎಲ್ಲಾ ತಲೆಮಾರುಗಳಿಗೂ ತಮ್ಮ ಆತ್ಮಸಾಕ್ಷಿಯನ್ನು ಪರೀಕ್ಷಿಸಿಕೊಳ್ಳಲು ಇರುವ ಏಕೈಕ ಒರೆಗಲ್ಲು ಎಂದರೆ ಅದು ಗಾಂಧೀಜಿ ಮಾತ್ರ. ಎಲ್ಲಾ ತಲೆಮಾರುಗಳು ಎಲ್ಲಾ ಸಮಾಜಗಳಲ್ಲೂ ತಮ್ಮ ತಮ್ಮ ಆತ್ಮ ಸಾಕ್ಷಿಯನ್ನು ಆಗಾಗ ಒರೆಗೆ ಹಚ್ಚಿಕೊಳ್ಳುವ ಅಗತ್ಯ ಇರುವುದರಿಂದ ಮತ್ತು ಆ ಅಗತ್ಯ ದಿನೇ ದಿನೇ ಹೆಚ್ಚುತ್ತಿರುವುದರಿಂದ ಗಾಂಧೀಜಿಯವರ ಪ್ರಸ್ತುತತೆಗೆ ಒಂದು ನಿರಂತರತೆ ಈ ತನಕ ಇದೆ. ಮುಂದೆ ಗಾಂಧೀಜಿಯವರಿಗಿಂತ ಮಿಗಿಲಾದ ಒಂದು ನೈತಿಕಾದರ್ಶದ ಮಾದರಿ ಪ್ರಪಂಚಮುಖದಲ್ಲಿ ಉದಯಿಸಬಹುದೇನೋ? ಈ ತನಕ ಗಾಂಧೀಜಿಗೆ ಗಾಂಧೀಜಿಯೇ ಸಾಟಿ. ಇದನ್ನು ಎಷ್ಟು ಮಂದಿ ಒಪ್ಪಿಕೊಳ್ಳುತ್ತಾರೆ ಅಥವಾ ಬಿಡುತ್ತಾರೆ ಎನ್ನುವುದು ತೀರಾ ಅಪ್ರಸ್ತುತ.

ಗಾಂಧೀಜಿಯವರ ಪ್ರಸ್ತುತತೆಗೆ ಸಂಬಂಧಿಸಿ ಇನ್ನೊಂದು ವಿಚಾರ. ಗಾಂಧೀಜಿ ಓರ್ವ ಮಹಾತ್ಮ ಅಂತ ಕಾಣಿಸುವುದು ಅವರು ಸಂತರಂತೆ ಬದುಕಿದರು ಎನ್ನುವ ಕಾರಣಕ್ಕಲ್ಲ. ಗಾಂಧೀಜಿ ಓರ್ವ ಮಹಾತ್ಮ ಅಂತ ಅನ್ನಿಸುವುದು ಅವರು ಈ ದೇಶದ ಸಾರ್ವಜನಿಕ ಜೀವನ ಕಂಡ ಮೊದಲ ಮತ್ತು ಕೊನೆಯ ಅಪ್ಪಟ ಮನುಷ್ಯರಾಗಿದ್ದರು ಎನ್ನುವ ಕಾರಣಕ್ಕಾಗಿ. ರಾಜಕೀಯದಲ್ಲಿ ತೊಡಗಿಯೂ ಮನುಷ್ಯನಾಗಿ ಉಳಿಯಲು ಸಾಧ್ಯ ಎನ್ನುವ, ಸಂತತ್ವ ಸ್ವೀಕರಿಸದೆಯೂ ನೈತಿಕವಾಗಿ ಬೆಳೆಯಲು ಸಾಧ್ಯ ಎನ್ನುವ, ತಪ್ಪೆಸಗಿದರೂ ಅಪ್ಪಟವಾಗಿರಲು ಸಾಧ್ಯ ಎನ್ನುವ ಮತ್ತು ಕತ್ತಿ ಹಿರಿಯದೆಯೂ, ರಕ್ತ–ಹರಿಸದೆಯೂ ಯುದ್ಧ ಗೆಲ್ಲಬಹುದು ಎನ್ನುವ ಸಂದೇಶಗಳಿಗೆ ಜೀವಂತ ಸಾಕ್ಷಿಯಾಗಿ ಇಂದಿನ, ಮುಂದಿನ ತಲೆಮಾರುಗಳ ಪಾಲಿಗೆ ನೂರೈವತ್ತು ವರ್ಷಗಳ ಹಿಂದೆ ಹುಟ್ಟಿ, ಎಪ್ಪತ್ತು ವರ್ಷಗಳ ಹಿಂದೆ ಕೊಲೆಯಾಗಿ ಕಾಲವಾದ ಗಾಂಧೀಜಿ ಪ್ರಸ್ತುತ.. ಗಾಂಧೀಜಿಯನ್ನು ಅಪ್ರಸ್ತುತಗೊಳಿಸಲು ಪ್ರಸ್ತುತ ನಡೆಯುತ್ತಿರುವ ಎಲ್ಲಾ ಪ್ರಯತ್ನಗಳೂ ಫಲಿಸದೆ ಇರುವುದು ಈ ಕಾರಣಕ್ಕಾಗಿ. ಮಾನವಕುಲಕ್ಕೆ ಆತ್ಮಸಾಕ್ಷಿ ಎಂಬುದು ಪ್ರಸ್ತುತವಾಗಿದ್ದಷ್ಟು ಕಾಲ ಗಾಂಧೀಜಿಯವರ ಪ್ರಸ್ತುತತೆ ಉಳಿಯುತ್ತದೆ.



**–ಎ. ನಾರಾಯಣ,** ಸಾರ್ವಜನಿಕ ನೀತಿ ಮತ್ತು ಅರ್ಥಶಾಸ್ತ್ರ ಪ್ರಾಧ್ಯಾಪಕರು ಹಾಗೂ ಅಂಕಣಕಾರರು, ಬೆಂಗಳೂರು

## ನಮ್ಮ ಬಿಡುಗಡೆಗೆ ಗಾಂಧಿಯೊಂದೇ ಬೆಳಕು

ಗಾಂಧಿ ಹುಟ್ಟಿದ ನೂರು ವರ್ಷದ ನಂತರ ಹುಟ್ಟಿದ ತಲೆಮಾರಿನವನು ನಾನು. ಆದರೆ ಈ ಮುದುಕ ನನ್ನನ್ನು ಕಾಡಿದಷ್ಟು/ ಕಾಡುತ್ತಿರುವಷ್ಟು ಬೇರೆ ಯಾರೂ ಕಾಡುತ್ತಿಲ್ಲ. ಒಂದು ಹಂತದಲ್ಲಿ ಈತನಿಂದ ಹೇಗಾದರೂ ತಪ್ಪಿಸಿಕೊಂಡು ಹೋಗಿ ಬಿಡಬೇಕು ಎಂದು ತೀವ್ರವಾಗಿ ಅನಿಸತೊಡಗಿತು. ಅದಕ್ಕಾಗಿ ಬಹಳ ಪ್ರಯತ್ನವನ್ನೂ ನಡೆಸಿದ್ದೇನೆ. ಅದು ಸಾಧ್ಯವಾಗದೇ ಗಾಂಧಿಗೆ ಶರಣು ಹೋಗಿದ್ದೇನೆ.

ನಾನು ಗಾಂಧಿಯಿಂದ ಬಿಡುಗಡೆ ಹೊಂದಲು ಪ್ರಯತ್ನಿಸುತ್ತಿದ್ದಾಗ ನನಗೆ ಕಂಡವನು ಫುಕುವೊಕಾ. ಫುಕುವೊಕಾ ಗಾಂಧಿಗಿಂತ ಭಿನ್ನವಾದುದನ್ನು ಹೇಳುತ್ತಿದ್ದಾನೆ, ಅವನ ವಿಚಾರಗಳನ್ನು ಅಳವಡಿಸಿಕೊಳ್ಳುವುದು ಸುಲಭ ಗಾಂಧಿಯಂತೆ ಸಮಾಜ ಮುಖಿಯಾಗಿ ಜನರೊಂದಿಗೆ ಬಡಿದಾಡುವ ಅಗತ್ಯವಿಲ್ಲ, ನನ್ನ ಪಾಡಿಗೆ ನಾನು ಪ್ರಕೃತಿಯೊಂದಿಗೆ ಇದ್ದು ಬಿಟ್ಟರಾಯಿತು ಎಂದು ನಾನು ಅರ್ಥಮಾಡಿಕೊಂಡಿದ್ದೆ. ಆದರೆ ಫುಕುವೊಕಾ 'ಒನ್ ಸ್ಟ್ರಾ ರೆವಲ್ಯೂಶನ್' ಪುಸ್ತಕದ ಕಡೆಯ ಭಾಗಕ್ಕೆ ಬಂದಾಗ ತಾನು ಮಾಡಲು ಪ್ರಯತ್ನಿಸುತ್ತಿರುವ ಕೃಷಿ 'ಗಾಂಧಿ ಕೃಷಿ' ಎಂದಾಗ ನನಗೊಮ್ಮೆ ಗರಬಡಿದಂತಾಯಿತು

ಆ ಮೊದಲು ನಾನು ಲಾರಿ ಬೇಕರ್ ಎಂಬ ವಾಸ್ತುವಿನ್ಯಾಸಕನ ಬದುಕಿನಿಂದ ಮಾರುಹೋಗಿದ್ದೆ. ಆತನೂ ನನ್ನ ಈ ಕೆಲಸಕ್ಕೆ ಗಾಂಧಿಯೇ ಸ್ಫೂರ್ತಿ ಎನ್ನುತ್ತಾನೆ. ಇದಕ್ಕೂ ಮೊದಲು ಹಲವು ವರ್ಷಗಳ ಕಾಲ ನನ್ನನ್ನು ಆವರಿಸಿಕೊಂಡಿದ್ದ ಅಮೇರಿಕಾದ ಆದರ್ಶ ದಂಪತಿಗಳಾದ ಸ್ಕಾಟ್‌ನಿಯರಿಂಗ್ ಮತ್ತು ಹೆಲನ್‌ನಿಯರಿಂಗ್‌ಗೆ ಅಚ್ಚು ಮೆಚ್ಚಿನ ವ್ಯಕ್ತಿ ಗಾಂಧಿ. ಪ್ರಪಂಚದ ಬೇರೆ ಬೇರೆ ಮೂಲೆಯಲ್ಲಿರುವ, ಬೇರೆ ಬೇರೆ ಕೆಲಸದಲ್ಲಿ ತೊಡಗಿಕೊಂಡಿರುವ ಈ ಎಲ್ಲರಿಗೂ ಗಾಂಧಿ ಎಂಬ ಒಬ್ಬನೇ ವ್ಯಕ್ತಿ ಪ್ರಭಾವ ಬೀರಲು ಹೇಗೆ ಸಾಧ್ಯ? ಯೋಚಿಸತೊಡಗಿದೆ. ಅದು ಸಾಧ್ಯವಾದದ್ದು ಅವರೆಲ್ಲರೂ ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ತಲ್ಲೀನರಾಗಿ ಅದರಲ್ಲಿ ಸತ್ಯವನ್ನು ಹುಡುಕಲು ಪ್ರಯತ್ನಿಸಿದ್ದರಿಂದ. ಅವರ ಆ ಹುಡುಕಾಟದ ಆಳದಲ್ಲಿ ಅವರಿಗೆ ಕಂಡದ್ದು ಗಾಂಧಿ.

ಇಂದು ನಮಗೆ ಗಾಂಧಿ ಏಕೆ ಕಾಣುತ್ತಿಲ್ಲ ಎಂದರೆ ನಾವು ನಮ್ಮ ಕೆಲಸವನ್ನಾಗಲೀ, ನಮ್ಮ ಬದುಕನ್ನಾಗಲೀ ಗಂಭೀರವಾಗಿ ಸ್ವೀಕರಿಸಿಲ್ಲ. ಗಾಂಧಿಯ ಬಗ್ಗೆ ಹಗುರವಾಗಿ ಮಾತನಾಡುವ ಜನರನ್ನು ನೋಡಿದಾಗೆಲ್ಲಾ ನನಗೆ ಅಯ್ಯೋ ಎನಿಸುತ್ತದೆ. ಅವರಿಗೆ ಬದುಕಿನ ಸೂಕ್ಷ್ಮಗಳು ಅರಿವಾಗುತ್ತಿಲ್ಲವಲ್ಲಾ ಎಂದು ಅನುಕಂಪ ಮೂಡುತ್ತದೆ. ಪ್ರಚಲಿತ ವಿದ್ಯಮಾನಕ್ಕೆ ಗಾಂಧಿ ಪ್ರಸ್ತುತನೋ ಅಲ್ಲವೋ ಎಂಬ ಪ್ರಶ್ನೆಯೇ ಅಪ್ರಸ್ತುತವಾದುದು. ಇಂದು ಪ್ರಪಂಚ ನೈತಿಕವಾಗಿ, ಮಾನಸಿಕವಾಗಿ, ಧಾರ್ಮಿಕವಾಗಿ, ಪ್ರಾಕೃತಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ದಿವಾಳಿ ಎದ್ದು ಹೋಗುತ್ತಿರುವ ಸಂದರ್ಭದಲ್ಲಿ ನಮ್ಮ ಬಿಡುಗಡೆಗೆ ಗಾಂಧಿ ಎಂಬ ಬೆಳಕನ್ನು ಬಿಟ್ಟು ಬೇರೆ ಯಾವುದಿದೆ? ಇಳಾ ಭಟ್ ಅವರು ಕೇಳುವ 'ಗಾಂಧಿ ನಿಮ್ಮೊಂದಿಗಿದ್ದಾನೆ. ನೀವು ಗಾಂಧಿ ಅವರೊಂದಿಗಿದ್ದೀರಾ?' ಎಂಬ ಪ್ರಶ್ನೆ ನನ್ನನ್ನು ಸದಾ ಕಾಡುತ್ತದೆ.



**–ಸಂತೋಷ ಕೌಲಗಿ,** ಜನಪದ ಟ್ರಸ್ಟ್‌ನ ಕಾರ್ಯದರ್ಶಿ, ಮೇಲುಕೋಟೆ

## ಅವರ ತಾತ್ವಿಕತೆಗೆ ಕಾಲದ ಹಂಗಿಲ್ಲ

ಗಾಂಧೀಜಿಯನ್ನು ಮರೆತ ಇಂದಿನ ನಮ್ಮ ಇಡೀ ಸಮಾಜದಲ್ಲಿ ಸಿನಿಕತನದ ಕಳ್ಳ ಉಸುಕು ತುಂಬಿ ಹೋಗಿದ್ದು, ಸರಳ ನೈತಿಕ ಕ್ರಿಯೆಯೇ ಅಸಾಧ್ಯವಾಗಿ ಬಿಟ್ಟಿದೆ. ಯಾವನು ಸರಿಯಿದ್ದಾನೆ ತೋರಿಸ್ರೀ...? ಎಂದು ಹೇಳುವ ವ್ಯಕ್ತಿ ಇಡೀ ವ್ಯವಸ್ಥೆಯನ್ನು ಹೊಲಬುಗೆಡಿಸಲು ಆತುರನಾಗಿರುತ್ತಾನೆ. ಸಿನಿಕತನ ತೀರಾ ಅಂತ್ಯಕ್ಕೆ ಹೋದಾಗ ಸಮಾಜ ಸಭ್ಯ ಕೊಲೆಗಡುಕರನ್ನು ಸೃಷ್ಟಿಸುತ್ತದೆ. ಯಾರು ಹಾಳಾದರೂ ಸರಿ. ತಾನು ತನ್ನ ಕುಟುಂಬ ಸುಖವಾಗಿದ್ದರೆ ಸಾಕು ಎಂಬ ಭಯಾನಕ ಸ್ವಾರ್ಥವನ್ನು ಸೃಷ್ಟಿಸುತ್ತದೆ. ಸಿನಿಕತನ ಬೆಳೆಯುತ್ತಾ ಹೋದಂತೆ ಅದು ಸಮಾಜದ ಹಂಗನ್ನೇ ತೊರೆಯುತ್ತದೆ. ಆಗಲೇ ಎಡಪಂಥೀಯ ರಾಜಕಾರಣಿ ರಾತ್ರೋರಾತ್ರಿ ಬಲಪಂಥೀಯನಾಗುವದು. ರಮಣರ ಭಕ್ತನಾದವನು ಬಾಬಾನ ಅನುಯಾಯಿಯಾಗುವುದು. ಪ್ರಾಮಾಣಿಕ ವ್ಯಾಪಾರಿ ಕಲಬೆರಕೆ ವ್ಯಾಪಾರಕ್ಕಿಳಿಯುವದು ಸಾಧ್ಯವಾಗುತ್ತದೆ. ಗಾಂಧಿಯ 'ಧರ್ಮ'ವನ್ನು ಮರೆತ ಇಂದಿನ ಭಾರತದ ಸ್ಥಿತಿ ಇದಕ್ಕಿಂತ ಬೇರೆಯಾಗಿಲ್ಲ.

ಆಧುನಿಕ ಶಿಕ್ಷಣ ಪಡೆದ ಹಾಗೂ ಸ್ವಸುಖದ ಬೆನ್ನು ಬಿದ್ದಿರುವ ಬಹುಪಾಲು ಭಾರತದ ಜನಸಮೂಹ ಭಾವಿಸಿರುವಂತೆ, ಗಾಂಧಿ ಪುರಾತನ ಸಂಪ್ರದಾಯಗಳನ್ನು ಕಣ್ಣು ಮುಚ್ಚಿ ಪ್ರತಿಪಾದಿಸುವ ಹಿಮ್ಮುಖ ಚಲನೆಯ ವ್ಯಕ್ತಿಯಾಗಿರಲಿಲ್ಲ. ಅವರು ಆಧುನಿಕ ಶಿಕ್ಷಣದ ತುದಿ ಮುಟ್ಟಿ ಅದರ ಮಿತಿಯನ್ನು ಅರಿತವರಾಗಿ ಜೊತೆಗೆ ಆದಿವಾಸಿ ಜನಾಂಗದ ಪೂಜಾರಿಯ ಪ್ರಕೃತಿ ಆಧಾರಿತ ವಿಸ್ಮಯಕರ ತಿಳುವಳಿಕೆ ಪಡೆದು ಬದುಕಿದವರಾಗಿದ್ದರು. ಆ ಕಾರಣ ಅವರ ತಾತ್ವಿಕತೆಗೆ ಕಾಲದ ಹಂಗಿಲ್ಲ.

ಮಾನವನ ಶರೀರ ರಚನೆ ಪ್ರಕೃತಿ ಆಧಾರಿತವಾಗಿದ್ದು, ಆ ಕಾರಣ ಗಾಂಧಿ ಅದರ ಜೊತೆ ಸಹಕರಿಸಿ, ಸಹ ಪ್ರಯಾಣಿಕನಾಗಿ ತನ್ನ ತಾತ್ವಿಕತೆಯನ್ನು ರೂಪಿಸಿದರು. ಈ ಪಥದಲ್ಲಿ ಸಾಗುವವರು ತಮ್ಮ ಮಿತಿಯಲ್ಲಿ ಹಂತಹಂತವಾಗಿ ಸಾಗಬಹುದೇ ಹೊರತು ಪ್ರಕೃತಿಯ ನಿಯಮಗಳನ್ನು ಮೀರಿ ಅದನ್ನು ಮಿತಿ ಹಾಕುವುದಾಗಲಿ ವಿಭಜಿಸುವುದಾಗಲಿ ಸಾಧ್ಯವಿಲ್ಲ. ಗಾಂಧಿಯವರ ಸರಳ ಜೀವನದ ಪರಿಕಲ್ಪನೆಗೆ ಈ ಆಧಾರವಿತ್ತು. ಅದು ಖಂಡಿತ ಬಡತನದ ಆರಾಧನೆಯಲ್ಲ. ಸರಳ ಜೀವನಕ್ಕೆ ಇಂದಿನ ಸಂದರ್ಭದ ಪರಿಕರಗಳನ್ನು ಬಳಸಿ ಸಾಗಬಹುದು.

ಇಂದು ಭಾರತದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಇರುವ ಬಹುಪಾಲು ಜನರು, ಆಡಳಿತಗಾರರು ಅಧಿಕಾರಸ್ಥರು ಗಾಂಧಿ ತಾತ್ವಿಕತೆ ಬೆಳಕಿಗೆ ಬೆನ್ನು ಮಾಡಿರುವ ಇವರು ಪಶ್ಚಿಮದ ಕೂಸಾದ ಅಭಿವೃದ್ಧಿ ಪಥದ ಯೋಜನೆಗಳನ್ನು ದೇಶದಲ್ಲಿ ಕ್ರಿಯೆಗಿಳಿಸುವ ಪೂರ್ವದಲ್ಲಿ ಇವರು ಗಾಂಧಿ ಸಮಾಧಿಗೆ, (ಹೆಣಕ್ಕೆ) ಪೂಜೆ ಸಲ್ಲಿಸುವದನ್ನು ಗಮನಿಸಿದಾಗ ಗಾಂಧಿ ಪಾದಗಳಿಗೆರಗಿ ಎದೆಗೆ ಗುಂಡಿಕ್ಕಿದವನ ಗೋಡ್ಸೆಯ ಕ್ರಿಯೆ ನೆನಪಾಗುತ್ತದಲ್ಲವೇ?



**– ಅಜ್ಜಪ್ಪ ಬಿರಡಿ,** ರೈತರು ಮತ್ತು ಚಿಂತಕರು, ಗೋಕಾಕ

ಹಿರಿಯ ಪತ್ರಕರ್ತ ಕುಲದೀಪ್ ನಯ್ಯಾರ್ ಅವರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ.–ಸಂ.



## ಗಾಂಧಿ ಕಥನ

—ಡಿ.ಎಸ್. ನಾಗಭೂಷಣ

ಗಾಂಧೀಜಿಯನ್ನು ಕುರಿತ ನಮ್ಮ ಸಾಮಾನ್ಯ ಓದು ಅವರನ್ನು ಅಹಿಂಸಾಮೂರ್ತಿ, ಗ್ರಾಮವಾದಿ, ಯಂತ್ರ ವಿರೋಧಿ, ಸನಾತನ ಹಿಂದೂ ಇತ್ಯಾದಿಯಾಗಿ ಸರಳೀಕೃತವಾಗಿ ಪರಿಚಯಿಸಿ, ಅವರ ವ್ಯಕ್ತಿತ್ವದ ಆಳಗಳನ್ನೂ, ಸಂಕೀರ್ಣತೆಗಳನ್ನೂ, ಒಳತೋಟಗಳನ್ನೂ ಹೇಳದೆ ಅವರದ್ದೊಂದು ರಟ್ಟಿನ ಚಿತ್ರವನ್ನಷ್ಟೇ ನೀಡುತ್ತದೆ. ಕನ್ನಡದಲ್ಲಂತೂ–ಗಾಂಧಿ ಕುರಿತ ಸಾವಿರಾರು ಪುಟಗಳು ಪ್ರಕಟವಾಗಿಯಾಗಿವೆಯಾದರೂ, ಅವರ ಬದುಕನ್ನು ಆಳವಾಗಿ ಶೋಧಿಸಿ ಪರಿಚಯಿಸುವ ಗಂಭೀರ ಪ್ರಯತ್ನಗಳು ನಡೆದಿಲ್ಲ ಎಂದೇ ಹೇಳಬೇಕು. ಹಾಗಾಗಿಯೇ ನಮ್ಮ ಮಧ್ಯೆ ಗಾಂಧಿ ಜೀವಂತವಾಗಿ ಪ್ರಕಟವಾಗುವ ಸಂದರ್ಭಗಳೇ ಅಪರೂಪವೆನ್ನಿಸಿ ಗಾಂಧಿ ಹಾರ–ಹೂಮಳೆಗಳಿಗೆ ಮಾತ್ರ ಅರ್ಹವಾಗುವ ಕೇವಲ ಮಾತಿನ ಮಂಟಪದ ಮೂರ್ತಿಯಾಗಿ ಮಾತ್ರ ನಮ್ಮ ಮುಂದೆ ನಿಲ್ಲುವಂತಾಗಿದೆ.

ಈ ಹಿನ್ನೆಲೆಯಲ್ಲಿ ವಿವಿಧ ಆಕರಗಳನ್ನು ಆದರಿಸಿ ಗಾಂಧೀಜಿಯ ಸಮಗ್ರ ಜೀವನ ಚರಿತ್ರೆಯನ್ನು 'ಗಾಂಧಿ ಕಥನ' ಎಂಬ ಶೀರ್ಷಿಕೆಯಡಿ ಒಂದು ಮಧ್ಯಮ ಪ್ರಮಾಣದ ಪುಸ್ತಕವಾಗಿ ಬರೆಯುವ ಒಂದು ಪ್ರಯತ್ನವನ್ನು ನಾನು ಮಾಡಿರುವೆ. ಇನ್ನೂ ಅಪೂರ್ಣವಾಗಿರುವ ಈ ಪುಸ್ತಕದ 'ದ.ಆಫ್ರಿಕಾದಲ್ಲಿ ಗಾಂಧಿ' ಭಾಗದ ಎರಡು ಅಧ್ಯಾಯಗಳನ್ನು 'ಹೊಸ ಮನುಷ್ಯ'ದ ಓದುಗರಿಗಾಗಿ ಇಲ್ಲಿ ನೀಡುತ್ತಿದ್ದೇನೆ. ಓದುಗರು ತಮ್ಮ ಅಭಿಪ್ರಾಯಗಳನ್ನು ಬರೆದು ತಿಳಿಸಬೇಕಾಗಿ ಕೋರುತ್ತೇನೆ –ಡಿಎಸ್ಸೆನ್

# ವರ್ಣಭೇದ ನೀತಿ: ಸತ್ಯಾಗ್ರಹದ ಉದಯ

ಫೀನಿಕ್ಸ್‌ನಲ್ಲಿ ತಮ್ಮ ಪರಿವಾರದೊಂದಿಗೆ ಕೆಲ ದಿನಗಳಿದ್ದು ಜೋಹಾನ್ಸ್‌ಬರ್ಗ್‌ಗೆ ಬಂದ ಗಾಂಧಿ ವಿಶಾಲವಾಗಿದ್ದ 'ವಿಲ್ಲಾ' ಮಾದರಿಯ ಮನೆಯನ್ನು ಬದಲಾಯಿಸಿ ಯಾವುದೇ ವಿಶೇಷ ಸೌಕರ್ಯಗಳಿಲ್ಲದ ಒಂದು ಸಣ್ಣ ಮನೆಯನ್ನು ವಾಸ ಮತ್ತು ವಕೀಲ ಕಛೇರಿಗಾಗಿ ಬಾಡಿಗೆಗೆ ಹಿಡಿದರು. ಅದು ಬ್ರಹ್ಮಚರ್ಯ ವ್ರತದೊಂದಿಗೆ ಅಗತ್ಯವಾಗಿದ್ದ ಸ್ವ ಇಚ್ಛೆಯ ಬಡತನದ ವ್ರತಕ್ಕೆ ಅನುಗುಣವಾಗಿತ್ತು. ಅಲ್ಲಿಗೆ ತಮಗೆ ವಕೀಲಿ ಕೆಲಸದಲ್ಲಿ ನೆರವಾಗಲು ಪೊಲಾಕ್ ಮತ್ತು ಅವರ ಪತ್ನಿಯನ್ನು ಕರೆಸಿಕೊಂಡರು. ಪೊಲಾಕ್‌ರ ಪತ್ನಿ ಇದ್ದುದರಲ್ಲಿ ಆ ಮನೆಯನ್ನು ಸುಧಾರಿಸಲು, ಸಿಂಗರಿಸಲು ಯತ್ನಿಸಿದಾಗ ಅದು ಅಗತ್ಯವಿಲ್ಲವೆಂದು ತಡೆದರು. ಮನೆಗೆಲಸಗಳಿಗೆ ಅಥವಾ ವೃತ್ತಿ ಸಂಬಂಧಿಯಾದ ಕೆಲಸಗಳಿಗೆ ಯಾವುದೇ ಸೇವಕನನ್ನು ನೇಮಿಸಿಕೊಳ್ಳಲು ಅವರು ನಿರಾಕರಿಸಿದರು. ಸಂಪೂರ್ಣ ಸ್ವಾವಲಂಬಿ ಸರಳ ಬದುಕಿನ ಮಾದರಿಗೆ ಸಜ್ಜಾದ ಅವರು, ಸರಳ ಜೀವನದ ಆದರ್ಶದ ಬಗ್ಗೆ ಅಷ್ಟೇನೂ ಒಲವಿಲ್ಲದಿದ್ದ ಪೊಲಾಕ್ ದಂಪತಿಗಳನ್ನೂ ಅದಕ್ಕೆ ಸಿದ್ಧಪಡಿಸಿದರು.

## ವರ್ಣಭೇದ ನೀತಿಯ ಅಧಿಕೃತ ಪ್ರಕಟಣೆ

ಈ ಮಧ್ಯೆ, ಟ್ರಾನ್ಸ್ವಾಲ್‌ನ ಆಡಳಿತ ಭಾರತೀಯರೂ ಸೇರಿದಂತೆ ಆ ಪ್ರಾಂತ್ಯದಲ್ಲಿದ್ದ ಏಷಿಯನ್ನರನ್ನು ಬಿಳಿಯ ಪ್ರಜಾವರ್ಗದಿಂದ ಬೇರ್ಪಡಿಸಿ ಅವರನ್ನು ಸೀಮಿತ ಹಕ್ಕುಗಳುಳ್ಳ ಕಡಿಮೆ ದರ್ಜೆಯ ಪ್ರಜೆಗಳನ್ನಾಗಿ ವಿಂಗಡಿಸಲು ಹೊಸ ಕಾಯಿದೆಯೊಂದನ್ನು ರೂಪಿಸತೊಡಗಿತ್ತು. ಮುಂದೆ 'ಕರಾಳ ಏಷಿಯಾಟಿಕ್ ಶಾಸನ'ವೆಂದೇ ಕುಪ್ರಸಿದ್ಧವಾದ ಈ ಕಾಯಿದೆ ಹೊಸದಾಗಿ ಯಾವ ಬಿಳಿಯೇತರನೂ ಟ್ರಾನ್ಸ್ವಾಲ್ ಪ್ರಾಂತ್ಯವನ್ನು ಪ್ರವೇಶಿಸದಂತೆ ತಡೆಯುವ ಅಧಿಕಾರವನ್ನೂ ಒಳಗೊಂಡಿತ್ತು. ಗಾಂಧಿ ಝುಲು ದಂಗೆಯ ಸಂಬಂಧದ ಶುಶ್ರೂಷಾ ದಳದ ಕೆಲಸಗಳ ಮೇಲಿದ್ದಾಗಲೇ ಅವರಿಗೆ ಸರ್ಕಾರದ ಈ ಪ್ರಯತ್ನದ ಸುದ್ದಿ ತಲುಪಿತ್ತು. ಇದರ ವಿರುದ್ಧ ಕಾರ್ಯಾಚರಣೆ ರೂಪಿಸಲು ಬೇಗನೆ ಜೋಹಾನ್ಸ್‌ಬರ್ಗ್‌ಗೆ ಬರಬೇಕೆಂಬ ಕರೆಯೂ ಬಂದಿತ್ತು. ಈ ಉದ್ದೇಶಿತ ಶಾಸನದ ವಿಧಿಗಳು ಹೀಗಿದ್ದವು: ಟ್ರಾನ್ಸ್‌ವಾಲ್‌ನಲ್ಲಿ ವಾಸಿಸುವ ಎಂಟು ವರ್ಷ ವಯಸ್ಸನ್ನು ಮೀರಿದ ಪ್ರತಿ ಭಾರತೀಯನೂ ಏಷಿಯಾಟಿಕ್ ನೋಂದಣಿ ಪುಸ್ತಕದಲ್ಲಿ ತಮ್ಮ ಸಕಲ ವಿವರಗಳನ್ನೂ, ಹೆಬ್ಬೆರಳೂ ಸೇರಿದಂತೆ ತಮ್ಮ ಎಲ್ಲ ಬೆರಳುಗಳ ಅಚ್ಚು ಮತ್ತು ಮೈಮೇಲಿನ ವಿಶಿಷ್ಟ ಗುರುತುಗಳ ವಿವರ ನೀಡಿ ನಿಗದಿತ ದಿನಾಂಕದೊಳಗಾಗಿ ನೋಂದಣಿ ಮಾಡಿಕೊಳ್ಳಬೇಕು. ರಹದಾರಿ ಪತ್ರಗಳೆಂದು ಕರೆಯಲಾಗುವ ಇಂತಹ ನೋಂದಣಿ ಪತ್ರಗಳನ್ನು ಭಾರತೀಯರು ಸದಾ ತಮ್ಮ ಜೊತೆಗೆ ಇರಿಸಿಕೊಂಡಿರಬೇಕು. ಪೋಲೀಸರು ಯಾವಾಗ ಕೇಳಿದರೂ–ಉದಾ: ಮನೆಗೆ ಬಂದು ಅಥವಾ ರಸ್ತೆಯ ಮೇಲೆ–ತೋರಿಸುವುದು ಅವರ ಕರ್ತವ್ಯವಾಗುತ್ತದೆ. ಹಾಗೆ ನೋಂದಣಿ ಮಾಡಿಸಿಕೊಳ್ಳದವರು ತಮ್ಮೆಲ್ಲ ಆಸ್ತಿಪಾಸ್ತಿಗಳನ್ನು ಬಿಟ್ಟು ಗಡೀಪಾರಾಗುವುದೂ ಸೇರಿದಂತೆ ಹಲವು ರೀತಿಯ ಕಾನೂನು ಕ್ರಮಕ್ಕೆ ಒಳಗಾಗುವರು..

ಜೊಹಾನ್ಸ್‌ಬರ್ಗ್‌ನ ತಮ್ಮ ಹೊಸ ಮನೆಯ ಕಛೇರಿಗೆ ಬಂದ ಸರ್ಕಾರದ ರಾಜಪತ್ರದಲ್ಲಿ ಈ ಪ್ರಕಟಣೆಯನ್ನು ನೋಡಿ ಗಾಂಧಿ ಗಾಬರಿಯಾದರು. ಅದನ್ನು 'ಇಂಡಿಯನ್ ಒಪಿನಿಯನ್'ಗಾಗಿ ಗುಜರಾತಿ ಭಾಷೆಗೆ ಅನುವಾದಿಸಿದರು. ಈ ಕರಡು ಮಸೂದೆ ಶಾಸನವಾದರೆ ಭಾರತೀಯರಾರೂ ಆ ನಾಡಿನಲ್ಲಿ ಕನಿಷ್ಠ ಘನತೆಯಿಂದ ಬಾಳಲಾಗದೆಂದೂ, ಅದು ಈ ಸಮುದಾಯದ ಏಳಿಗೆಗೆ ಕುಠಾರಪ್ರಾಯವಾಗಿದೆಯೆಂದೂ ಎಚ್ಚರಿಸಿದರು. ಅವರು ಕೂಡಲೇ ಭಾರತೀಯ ಮುಖಂಡರ ಒಂದು ಸಭೆ ಕರೆದರು. ಆ ಸಭೆಯಲ್ಲಿ ಗಾಂಧಿ ಸಭೆಗೆ ಕರಡು ಮಸೂದೆಯನ್ನು ಶಬ್ದಶಃ ವಿವರಿಸಿದರು. ಈ ಮಸೂದೆ ಶಾಸನವಾಗದಂತೆ ತಡೆಯದೇ ಹೋಗುವುದು ಟ್ರಾನ್ಸ್‌ವಾಲ್‌ನಲ್ಲಿರುವ ಹತ್ತು–ಹದಿನೈದು ಸಾವಿರ ಭಾರತೀಯರ ಮಾತ್ರವಲ್ಲ, ಇಡೀ ದ. ಆಫ್ರಿಕಾದಲ್ಲಿನ ವಿಶಾಲ ಭಾರತೀಯ ಜನಸ್ತೋಮದ ಭವಿಷ್ಯ ಕರಾಳವಾಗುತ್ತದಲ್ಲದೆ ಭಾರತ ದೇಶದ ಘನತೆಗೆ ಭಾರಿ ಕುಂದುಂಟಾಗುತ್ತದೆ ಎಂದು ಅವರು ವಿಶ್ಲೇಷಿದರು. ಆದುದರಿಂದ ಈ ಮಸೂದೆಯನ್ನು ಎದುರಿಸಲು ಎಲ್ಲ ಕಷ್ಟಗಳನ್ನೂ ಸಹಿಸಲು ಸಿದ್ಧರಾಗಬೇಕೆಂದೂ, ಆಗ ದೇವರು ನಮ್ಮೊಡನೆ ಇರುವುದು ಖಂಡಿತವೆಂದೂ ಗಾಂಧಿ ಮುಖಂಡರನ್ನು ಹೋರಾಟಕ್ಕೆ ಪ್ರೇರೇಪಿಸಿದರು. ಈ ಸಂಬಂಧವಾಗಿ ಒಂದು ಸಾರ್ವಜನಿಕ ಸಭೆ ಕರೆದು ಹೋರಾಟಕ್ಕೆ ಮಾರ್ಗದರ್ಶಿಯಾಗಬಹುದಾದಸ ದ ನಿರ್ಣಯಗಳನ್ನು ಅನುಮೋದಿಸಬೇಕೆಂದು ಈ ಸಭೆ ತೀರ್ಮಾನಿಸಿತು.

## ಹೋರಾಟಕ್ಕೆ ಆರಂಭ

ಇಂತಹ ಸಾರ್ವಜನಿಕ ಸಭೆ ೧೯೦೬ರ ಸೆಪ್ಟಂಬರ್ ೧೧ರಂದು ಜೊಹಾನ್ಸ್‌ಬರ್ಗ್‌ನ ಯಹೂದ್ಯರ ರಂಗಮಂದಿರವಾದ ಎಂಪೈರ್ ಕಟ್ಟಡದಲ್ಲಿ ಏರ್ಪಾಡಾಯಿತು. ಇದೊಂದು ಐತಿಹಾಸಿಕ ಸಭೆಯಾಗಿದ್ದು, ಇಲ್ಲಿಯೇ ಮುಂದೆ ಜಗತ್ತಿಗೆ ಗಾಂಧಿಯವರ ಕೊಡುಗೆ ಎಂದು ಸುಪ್ರಸಿದ್ಧವಾದ 'ಸತ್ಯಾಗ್ರಹ' ಪರಿಕಲ್ಪನೆಯ ಬೀಜ ಮೊಳೆತದ್ದು ಎಂದು ಹೇಳಬಹುದು. ಈ ಮಹಾನ್ ಸಭೆಗೆ ಟ್ರಾನ್ಸ್ವಾಲ್‌ನ ವಿವಿಧೆಡೆಗಳಿಂದ ಬಂದ ಸುಮಾರು ಮೂರು ಸಾವಿರ ಜನ ಭವನದ ಬಹುಮಹಡಿಗಳ ತುಂಬ ಕಿಕ್ಕಿರಿದಿದ್ದರು. ಇವರಲ್ಲಿ ಶ್ರೀಮಂತ ವರ್ತಕರು, ಸಾಮಾನ್ಯ ವರ್ತಕರು, ಬೀದಿ ವ್ಯಾಪಾರಿಗಳು, ವಕೀಲರು, ಕರಾರು ಕೂಲಿಗಳು, ಮನೆಗೆಲಸದವರು, ಹೆಂಗಸರು, ಹಿಂದೂಗಳು, ಮುಸ್ಲಿಮರು, ಪಾರ್ಸಿಗಳು, ಉತ್ತರ ಭಾರತೀಯರು, ತಮಿಳರು, ತೆಲುಗರು ಹೀಗೆ ಭಾರತೀಯ ಸಮುದಾಯದ ಸರ್ವ ವರ್ಗಗಳ ಜನರೂ ಅಲ್ಲಿ ನೆರೆದಿದ್ದರು. ಗಾಂಧಿಯವರ ಮಾತುಗಳಲ್ಲೇ ಹೇಳುವುದಾದರೆ, 'ಪ್ರತಿಯೊಬ್ಬರ ಮುಖದಲ್ಲಿಯೂ ಏನೋ ಮಹತ್ಕಾರ್ಯ ನಡೆಯುತ್ತದೆ ಅಥವಾ ಮಹಾ ಘಟನೆ ಸಂಭವಿಸುತ್ತದೆ ಎಂಬ ನಿರೀಕ್ಷೆ ಎದ್ದು ಕಾಣುತ್ತಿತ್ತು.'

ಟ್ರಾನ್ಸ್‌ವಾಲ್ ಬ್ರಿಟಿಷ್ ಭಾರತೀಯರ ಸಂಘದ ಅಧ್ಯಕ್ಷರಾದ ಸೇಠ್ ಅಬ್ದುಲ್ ಗನಿಯವರ ಅಧ್ಯಕ್ಷತೆ ವಹಿಸಿದ್ದ ಆ ಬೃಹತ್ ಸಭೆಯಲ್ಲಿ ಗಾಂಧಿ ತಾವು ಸಿದ್ಧಪಡಿಸಿದ್ದ ನಾಲ್ಕು ನಿರ್ಣಯಗಳನ್ನು ಓದಿದರು. ಅದರಲ್ಲಿ ಮುಖ್ಯವಾದುದೆಂದರೆ, ಪ್ರತಿರೋಧದ ಸರ್ವ ಪ್ರಯತ್ನಗಳ ಹೊರತಾಗಿಯೂ ಮಸೂದೆಯು ಶಾಸನವಾಗಿ ಮಾರ್ಪಟ್ಟರೆ ಅದಕ್ಕೆ ತಲೆಬಾಗದೆ, ಅದರ ವಿರುದ್ಧದ ಹೋರಾಟದಲ್ಲಿ ಎಂತಹ

ಕಷ್ಟ ಅಥವಾ ಶಿಕ್ಷೆ ಒದಗಿದರೂ ಅದನ್ನು ಅನುಭವಿಸಲು ಸಿದ್ಧವೆಂಬ ನಾಲ್ಕನೆಯ ನಿರ್ಣಯ. ಸಭೆಯ ಕಾರ್ಯಕಲಾಪಗಳು ಪ್ರಧಾನವಾಗಿ ಹಿಂದೂಸ್ಥಾನಿ ಮತ್ತು ಗುಜರಾತಿಗಳಲ್ಲಿ ನಡೆದುವಾದರೂ, ಮುಖ್ಯ ಅಂಶಗಳನ್ನು ತಮಿಳು ಮತ್ತು ತೆಲುಗು ಭಾಷೆಗಳಲ್ಲೂ ತರ್ಜುಮೆ ಮಾಡಿ ಹೇಳಲಾಯಿತು. ಅನೇಕರು ತಂತಮ್ಮ ಭಾಷೆಗಳಲ್ಲಿ ನಿರ್ಣಯಗಳನ್ನು ಸಮರ್ಥಿಸಿ ಮಾತನಾಡಿದರು. ಅವೆಲ್ಲವನ್ನೂ ತಾಳ್ಮೆಯಿಂದ ಕುಳಿತು ಕೇಳಿದ ಸಭೆ ಕೊನೆಯಲ್ಲಿ ಚಪ್ಪಾಳೆ ತಟ್ಟಿ ಅವನ್ನು ಸ್ವಾಗತಿಸಿತು. ಈ ಮಧ್ಯೆ ಸೇಠ್ ಹಾಜಿ ಹಬೀಬ್ ಎಂಬ ಹಳೆಯ ಹಿರಿಯ ವರ್ತಕರೊಬ್ಬರು ಎದ್ದು ನಿಂತು ಈ ನಿರ್ಣಯಗಳನ್ನು ಚಪ್ಪಾಳೆ ತಟ್ಟಿ ಸ್ವಾಗತಿಸದೆ ಮತಕ್ಕೆ ಹಾಕಿ ಅನುಮೋದಿಸಬೇಕೆಂದೂ, ಇದಕ್ಕೆ ನಾವೆಲ್ಲ ದೇವರನ್ನು ಸಾಕ್ಷಿಯಾಗಿಟ್ಟುಕೊಂಡು, ಶಾಸನಕ್ಕೆ ತಲೆಬಾಗುವುದಿಲ್ಲವೆಂದು ಪ್ರತಿಜ್ಞೆ ಮಾಡಬೇಕೆಂದೂ ಕರೆಕೊಟ್ಟರು.

### ಹೊಸ ಅರಿವಿನ ಮಿಂಚು : ಸತ್ಯಾಗ್ರಹದ ಆವಿರ್ಭಾವ

ಹಬೀಬರ ಈ ಮಾತುಗಳನ್ನು ಕೇಳಿ ಇದ್ದಕ್ಕಿದ್ದಂತೆ ಗಾಂಧಿಗೆ ಧಿಗ್ಗನೆ ಹೊಸ ಅರಿವಿನ ಮಿಂಚೊಂದು ಕಣ್ಮುಂದೆ ಹಾದು ಹೋದಂತಾಯಿತು. ಹೃದಯದಲ್ಲಿ ಹೊಸ ಬಾಗಿಲು ತೆರೆದಂತಾಯಿತು. ಅವರ ಕಣ್ಣುಗಳು ಹೊಸ ಕಾಂತಿಯಿಂದ ಹೊಳೆದವು. ದೇವರನ್ನೇ ಲೌಕಿಕ ನೆಲೆಯಲ್ಲಿ ಪರೀಕ್ಷೆಗೊಡ್ಡಿ ತಮ್ಮ ಸತ್ವ ಪರೀಕ್ಷೆ ಮಾಡಿಕೊಳ್ಳುವ, ಅಸತ್ಯವನ್ನು, ಹಿಂಸೆಯನ್ನು ನಿರ್ವಹಿಸುವ ಹೊಸದೊಂದು ಪ್ರತಿರೋಧ ಮಾರ್ಗದ ಹೊಳಹು ಅವರಿಗೆ ಈ ಕ್ಷಣದಲ್ಲಿ ದೊರಕಿದಂತಾಯಿತು. ತಕ್ಷಣವೇ ಅವರು ತಮ್ಮ ಮನಸ್ಸಿನಲ್ಲಿ ಮೂಡಿದ ಈ ದೈವಸಾಕ್ಷಿಯ ಪ್ರತಿರೋಧದ ಪರಿಕಲ್ಪನೆಯನ್ನು ಸಭೆಗೆ ಹೀಗೆ ವಿವರಿಸಿದರು :

> **'ಹಿಂದೂ ಮತ್ತು ಇಸ್ಲಾಂಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಿದ್ದರೂ ನಾವೆಲ್ಲರೂ ನಂಬಿರುವುದು ಒಬ್ಬನೇ ದೇವರನ್ನು. ಆ ದೇವರ ಹೆಸರಿನಲ್ಲಿ ಅಥವಾ ಆತನ ಸಾಕ್ಷಿಯಲ್ಲಿ ವಚನ ಕೊಡುವುದೆಂದರೆ ಅಥವಾ ಪ್ರತಿಜ್ಞೆ ಮಾಡುವುದೆಂದರೆ ಹುಡುಗಾಟವಲ್ಲ. ಪ್ರಮಾಣ ಮಾಡಿ ಅದನ್ನು ಮುರಿದರೆ ದೇವರ ಮತ್ತು ಮಾನವ ಧರ್ಮದ ಹೆಸರಿನಲ್ಲಿ ಅಪರಾಧ ಮಾಡಿದಂತಾಗುತ್ತದೆ. ಮನಃಪೂರ್ವಕವಾಗಿ ಅರಿತು ಪ್ರಮಾಣ ಮಾಡಿದ ನಂತರ ಭಾಷೆಗೆ ತಪ್ಪುವ ಮನುಷ್ಯ ತನ್ನ ಮಾನವತ್ವವನ್ನೇ ಕಳೆದುಕೊಳ್ಳುತ್ತಾನೆ ಎಂದು ನಾನು ಭಾವಿಸಿದ್ದೇನೆ... ಆದ್ದರಿಂದ ಇಲ್ಲಿ ಇರುವವರು ಯಾರೂ ಪ್ರಮಾಣವನ್ನು ತೆಗೆದುಕೊಂಡಾಗ ಏನು ಮಾಡುತ್ತಿದ್ದೇನೆಂಬುದು ಗೊತ್ತಾಗಲಿಲ್ಲವೆಂದು ತಪ್ಪಿಸಿಕೊಳ್ಳುವ ಸಂಭವ ಇರದಂತೆ ನೋಡಿಕೊಳ್ಳಿ. ಹೊರಗಿನವರ ಮೇಲೆ ಘನ ಪರಿಣಾಮವುಂಟು ಮಾಡಲೆಂದು ಈ ಪ್ರಮಾಣ ಮಾಡಬಾರದು... ಪ್ರತಿಯೊಬ್ಬರೂ ತಮ್ಮ ಹೃದಯವನ್ನು ಶೋಧಿಸಿ, ಬರುವ ಎಲ್ಲ ಸಾಧ್ಯ ಕಷ್ಟನಷ್ಟಗಳನ್ನು–ಕೊನೆಗೆ ಪ್ರಾಣ ತ್ಯಾಗವನ್ನೂ–ಎದುರಿಸಲು ಸಾಕಾದಷ್ಟು ಶಕ್ತಿ ಇದೆ ಎಂದು ಅಂತರಾತ್ಮ ಹೇಳಿದರೆ ಮಾತ್ರ ಪ್ರಮಾಣ ತೆಗೆದುಕೊಳ್ಳಬೇಕು ಮತ್ತು ಆಗ ಮಾತ್ರ ಪ್ರಮಾಣ ಫಲದಾಯಕವಾಗುವುದು... ... ನಿಮಗೆ ಅಗತ್ಯ ಮನೋಧೈರ್ಯವಿಲ್ಲದಿದ್ದರೆ, ಸಂಪೂರ್ಣವಾಗಿ ನಿಮ್ಮನ್ನು ಸಮೂಹದಿಂದ ಪ್ರತ್ಯೇಕಿಸಿದಾಗಲೂ ದೃಢಮನಸ್ಸಿನಿಂದ ನಿಲ್ಲಲು ನಿಮಗೆ ಸಾಧ್ಯವಾಗದೆಂದು ತೋರಿದರೆ, ಈ ಪ್ರತಿಜ್ಞೆಯನ್ನು ತೆಗೆದುಕೊಳ್ಳಬಾರದೆಂದಷ್ಟೇ ಅಲ್ಲ, ಈ ನಿರ್ಣಯದ ಬಗ್ಗೆ ಸಭೆ ಅಂತಿಮವಾಗಿ ತೀರ್ಮಾನಿಸುವ ಮೊದಲು ನೀವು ನಿರ್ಣಯವನ್ನು ವಿರೋಧಿಸಬೇಕು ಮತ್ತು ಇದರ ಅಂಗೀಕಾರಕ್ಕೆ ಸಮ್ಮತಿ ನೀಡಬಾರದು. ಇತರರ ಪ್ರಭಾವ ಅಥವಾ ಒತ್ತಾಯದಿಂದ ಪ್ರಮಾಣಕ್ಕೆ ಸಿದ್ಧರಾಗದೆ, ಮುಂದೆ ಇತರರ ಪ್ರತಿಜ್ಞಾ ಭಂಗದಿಂದ ಕಿಂಚಿತ್ತೂ ವಿಚಲಿತರಾಗದೆ, ಕೊನೆಗೆ ಒಬ್ಬನೇ ಉಳಿದರೂ ಪ್ರತಿಜ್ಞೆ ಪಾಲಿಸುವಷ್ಟು ಈ ಕರಾಳ ಶಾಸನದ ಕೆಡುಕಿನ ಆಳವನ್ನು ಮನಗಂಡವರು ಮಾತ್ರ ಪ್ರತಿಜ್ಞೆ ಸ್ವೀಕರಿಸಬೇಕು. ನನ್ನ ಮಟ್ಟಿಗೆ ಹೇಳುವುದಾದರೆ, ಎಲ್ಲರೂ ಪ್ರತಿಜ್ಞೆ ತಪ್ಪಿ ನಾನೊಬ್ಬನೇ ಉಳಿದರೂ ನಾನು ಒಂಟಿಯಾಗಿಯೇ ಪ್ರತಿಜ್ಞೆಯನ್ನು ಪಾಲಿಸಲು ಬದ್ಧನಿರುತ್ತೇನೆ ಎಂದು ಈ ಸಭೆಗೆ–ಗರ್ವದಿಂದಲ್ಲ–ವಿನಯದಿಂದ ತಿಳಿಸಲು ಇಚ್ಛಿಸುವೆ.'**

ಗಾಂಧಿಯ ಮಾತುಗಳನ್ನು ಸಭೆ ನಿಶ್ಶಬ್ದವಾಗಿ ಆಲಿಸಿತು. ಇತರ ಸಮುದಾಯ ನಾಯಕರೂ ಗಾಂಧಿಯ ಮಾತುಗಳ ಹಿನ್ನೆಲೆಯಲ್ಲಿ ಈ ಸಭೆಯ ನಿರ್ಣಯದ ಮಹತ್ವದ ಬಗ್ಗೆ ಮಾತನಾಡಿದರು. ಅಧ್ಯಕ್ಷರು ಎದ್ದು ನಿಂತು ಮತ್ತೊಮ್ಮೆ ಪ್ರತಿಜ್ಞೆಯ ಪರಿಣಾಮಗಳನ್ನು ವಿಷದೀಕರಿಸಿ ನಿರ್ಣಯಕ್ಕೆ ಅನುಮೋದನೆ ಕೇಳಿದರು. ಇಡೀ ಸಭೆ ಎದ್ದು ನಿಂತು ಕೈಗಳನ್ನೆತ್ತಿ ದೇವರ ಸಾಕ್ಷಿಯಲ್ಲಿ, ಈ ಶಾಸನ ಜಾರಿಗೆ ಬಂದರೆ ಅದಕ್ಕೆ ತಲೆಬಾಗುವುದಿಲ್ಲವೆಂದು ಪ್ರಮಾಣ ಸ್ವೀಕರಿಸಿದರು. ಸಭೆ ಮುಕ್ತಾಯವಾಯಿತು.

ಆಶ್ಚರ್ಯವೆಂದರೆ ಮಾರನೆಯ ದಿನವೇ ಈ ಸಭೆ ನಡೆದ ಎಂಪೈರ್ ಕಟ್ಟಡ ಬೆಂಕಿ ಅನಾಹುತಕ್ಕೆ ಸಿಕ್ಕಿ ಇಡಿಯಾಗಿ ಭಸ್ಮವಾಗಿ ಹೋಯಿತು! ಜನ ಇದು ಒಳ್ಳೆಯ ಶಕುನವೆಂದೂ, ಈ ಕಟ್ಟಡದಂತೆಯೇ ಸರ್ಕಾರದ ಕುಶಾಸನವೂ ಜನರ ಪ್ರತಿರೋಧದೆದುರು ಉರಿದು ಭಸ್ಮವಾಗುವುದೆಂದೂ ಮಾತಾಡಿಕೊಂಡರು.

**** **** ***

## ಥೋರೋನ ಪ್ರಭಾವ: ಮಗನಿಗೆ ಮಾರ್ಗದರ್ಶನ

ಹಿಂದಿನ ಸೆರೆಮನೆ ವಾಸಗಳಂತೆಯೇ ಗಾಂಧಿ ಇಲ್ಲಿ ಬಿಡುವಿನ ಕಾಲವನ್ನು ಪುಸ್ತಕಗಳ ಅಧ್ಯಯನಕ್ಕಾಗಿ ಬಳಸಿದರು. ಗುಜರಾತಿ, ಹಿಂದಿ, ಇಂಗ್ಲಿಷ್ ಪುಸ್ತಕಗಳಲ್ಲದೆ ಸಣ್ಣ ತಮಿಳು ಪುಸ್ತಕಗಳನ್ನೂ ಅವರು ಓದಿದರು. ಸೆರೆಮನೆಯಲ್ಲಿ ತಮ್ಮನ್ನು ರಕ್ಷಿಸಿದ್ದು ಪುಸ್ತಕಗಳೇ ಎನ್ನುವ ಗಾಂಧಿ ತಮ್ಮ ಹೋರಾಟದಲ್ಲಿ ಯಾವುದೇ ಅಪನಂಬಿಕೆ ಇಲ್ಲದೆ ನಿರಂತರ ಬೆಂಬಲ ನೀಡಿದ ತಮಿಳು ಸಮುದಾಯದ ಬಗೆಗಿನ ವಿಶೇಷ ಪ್ರೀತಿಯ ದ್ಯೋತಕವಾಗಿ ತಾವು ತಮಿಳು ಪುಸ್ತಕಗಳನ್ನು ವಿಶೇಷ ಆಸ್ಥೆಯಿಂದ ಓದಿದ್ದಾಗಿ ಹೇಳುತ್ತಾರೆ. ಅವರು ಉಪನಿಷತ್ತುಗಳು, ಪತಂಜಲಿಯ ಯೋಗ ದರ್ಶನ, ಮನುಸ್ಮೃತಿಗಳಲ್ಲದೆ ಕಾರ್ಲೈಲ್, ಮಜಿನಿ, ಸ್ಟೀವನ್ಸನ್, ರಸ್ಕಿನ್, ಥೋರೋ, ಟಾಲ್‌ಸ್ಟಾಯ್‌ರ ಸಾಹಿತ್ಯವನ್ನೂ ಓದಿದರು.

ಈ ಸೆರೆಮನೆಯ ಒಂಟಿ ಕೋಣೆಯಲ್ಲಿ ಅವರು ವಿಶೇಷ ತಾದಾತ್ಮ್ಯದೊಂದಿಗೆ ಓದಿದ ಸಾಹಿತ್ಯವೆಂದರೆ ಅಮೆರಿಕಾದ ಬಹುಪ್ರತಿಭೆಗಳ ಲೇಖಕ ಹೆನ್ರಿ ಡೇವಿಡ್ ಥೋರೋನದು. ಥೋರೋನಂತೆಯೇ ಸೆರೆಮನೆವಾಸವನ್ನು ಆದರ್ಶೀಕರಿಸುವ ಗಾಂಧಿ, ದಂಡ ಪಾವತಿ ಮಾಡಿ ಸೆರೆಮನೆವಾಸವನ್ನು ತಪ್ಪಿಸಿಕೊಳ್ಳುವವರು ಹೇಡಿಗಳು ಎನ್ನುತ್ತಾರೆ. ಹೊರ ಬದುಕಿನಲ್ಲಿ ಹಲವರ ಮಾತುಗಳನ್ನು ಕೇಳಬೇಕಾಗಿದ್ದರೆ ಇಲ್ಲಿ ಒಬ್ಬ ಮೇಲ್ವಿಚಾರಕನ ಮಾತನ್ನಷ್ಟೇ ಕೇಳಿ ನಡೆದರೆ ಸಾಕು, ಆಹಾರದ, ಸೂರಿನ ಚಿಂತೆಯಿಲ್ಲದೆ ದೇಶ, ಜನತೆಯ ಸೇವೆಯನ್ನು ಬದ್ಧತೆಯಿಂದ ಮಾಡಬಹುದು. ಇಲ್ಲಿ ದೇಹವನ್ನು ಸುಸ್ಥಿತಿಯಲ್ಲಿ ಇಡುವಂತಹ ದುಡಿಮೆಗೆ ಅವಕಾಶವಿದೆ, ದುಶ್ಚಟಗಳಿಂದ ದೂರವಿಡುವ ನಿರ್ಬಂಧವಿದೆ, ಪ್ರಾರ್ಥನೆ–ಅಧ್ಯಯನಗಳಿಗೆ ಸಾಕಷ್ಟು ಬಿಡುವು ಸಿಗುತ್ತದೆ, ಉಚಿತ ವೈದ್ಯಕೀಯ ನೆರವಿದೆ ಎಂದು ಸೆರೆಮನೆಯ ಜೀವನದ ಪ್ರಯೋಜನಗಳನ್ನು ಅವರು ಪಟ್ಟಿ ಮಾಡುತ್ತಾರೆ. ಅಕಸ್ಮಾತ್ ಕೆಟ್ಟದಾಗಿ ನಡೆಸಿಕೊಳ್ಳುವ ಮೇಲ್ವಿಚಾರಕ ಸಿಕ್ಕರೆ ತಾಳ್ಮೆಯ, ಮನೋನಿಗ್ರಹದ ಪಾಠಗಳನ್ನು ಇಲ್ಲಿ ಕಲಿಯಬಹುದಾಗಿದೆ ಎನ್ನುತ್ತಾರೆ. ಸೆರೆಮನೆ ವಾಸದ ನೆನಪುಗಳ ದಾಖಲೆಯಲ್ಲಿ ಅದರ ಗುಣಗಾನವನ್ನು ಅವರು ಮುಗಿಸುವುದು, 'ನಾಗರಿಕ ಅವಿಧೇಯತೆ' ಅಥವಾ ಸವಿನಯ ಕಾನೂನು ಭಂಗ ಎಂದು ಅನುವಾದಿಸಬಹುದಾದ ಥೋರೋನ 'ಸಿವಿಲ್ ಡಿಸೊಬಿಡಿಯನ್ಸ್' ಎಂಬ ಪ್ರಬಂಧವೊಂದರ ಈ ಮಾತುಗಳೊಂದಿಗೆ : 'ಊರ ಜನರು ನನ್ನ ಮತ್ತು ಅವರ ನಡುವೆ ಇರುವ ದಪ್ಪನೆಯ ಕಲ್ಲು ಗಾರೆಗಳ ಗೋಡೆಯನ್ನು ದಾಟಿ ಬಂದರೂ ನನ್ನಷ್ಟು ಸ್ವತಂತ್ರರಾಗಿರಲು ಇನ್ನೂ ದೊಡ್ಡ ಕಲ್ಲುಗೋಡೆಯನ್ನು ಒಡೆದು ಮತ್ತು ದಾಟಿ ಬರಬೇಕಾಗುತ್ತದೆ'.

ಚುನಾವಣಾ ತೆರಿಗೆಯನ್ನು ಪಾವತಿಸದೆ ಸರ್ಕಾರಕ್ಕೆ ಅವಿಧೇಯತೆ ತೋರಿ ಸೆರೆಮನೆ ಸೇರಿದ್ದ ಥೋರೋ(೧೮೧೭–೧೮೬೨) ಇಲ್ಲಿ ಹೇಳುವುದು, ಅನ್ಯಾಯದ ವಿರುದ್ಧ ಹೋರಾಟ ನಡೆಸಲು ಮಾನವತೆಯನ್ನು ಕುರಿತು ಬೇಕಾದ ಸಂಪೂರ್ಣ ಅರಿವನ್ನು ಗಳಿಸಲು ಅಡ್ಡಿಯಾಗಿರುವ ಅಜ್ಞಾನದ ಗೋಡೆಯ ಬಗ್ಗೆ. ಧಾರ್ಮಿಕ ಸಂಸ್ಥೆಗಳ ಗುಲಾಮಗಿರಿಯಿಂದ ಹಿಡಿದು ಸರ್ಕಾರದ ಗುಲಾಮಗಿರಿಯವರೆಗಿನ ಮನುಷ್ಯ ಚೇತನವನ್ನು ಬಗ್ಗು ಬಡಿಯುವ, ಭ್ರಷ್ಟಗೊಳಿಸುವ ಎಲ್ಲ ರೀತಿಯ ನೀತಿ–ನಿಯಮ, ನಂಬಿಕೆ–ರಿವಾಜು ಕಾನೂನುಗಳನ್ನು ವಿರೋಧಿಸುತ್ತಿದ್ದ ಥೋರೋ ಸೆರೆಮನೆಯೊಂದೇ ನ್ಯಾಯವಂತರ ನಿಜ ನಿವಾಸ ಎಂದು ಪ್ರತಿಪಾದಿಸಿದ ಸಂಪೂರ್ಣ ಬಂಡಾಯಗಾರ. ಕವಿಯೂ, ಅನುಭಾವಿಯೂ, ತತ್ವಜ್ಞಾನಿಯೂ, ಪ್ರಬಂಧಕಾರನೂ ಆಗಿದ್ದ ಈತ ಬಹುಸಂಖ್ಯಾತರ ಅಭಿಪ್ರಾಯದ ಆಧಾರದ ಮೇಲೆ ತೀರ್ಮಾನಗಳನ್ನು ತೆಗೆದುಕೊಳ್ಳುವ ಪ್ರಜಾಸತ್ತಾತ್ಮಕವೆಂದು ಹೇಳಲಾಗುವ ವಿಧಾನವನ್ನು ಸತ್ಯವನ್ನು ಸಂಖ್ಯಾಬಲದ ಮೂಲಕ ಅಳೆಯುವ ಅಜ್ಞಾನ ಎಂದು ಟೀಕಿಸುತ್ತಾನೆ. 'ಏಕೆ ಯಾವಾಗಲೂ ಕ್ರಿಸ್ತನನ್ನು ಶಿಲುಬೇಗೇರಿಸುತ್ತೀರಿ?' ಎಂದು ಕೇಳುವ ಅವನು ಸಮೂಹ ಸನ್ನಿಯನ್ನು ಅಧಾರ್ಮಿಕ ಎಂದು ಗುರುತಿಸಿದ್ದ. ಮನುಷ್ಯರು ಸರ್ಕಾರವನ್ನು ಮಾಡಿಕೊಂಡಿದ್ದಾರೆಯೇ ಹೊರತು ಸರ್ಕಾರ ಮನುಷ್ಯರನ್ನು ಮಾಡಿಲ್ಲ ಎಂದು ಎಚ್ಚರಿಸುತ್ತಿದ್ದ ಥೋರೋ, ಸರ್ಕಾರದ ಅನ್ಯಾಯಗಳನ್ನು ವಿರೋಧಿಸುವ ಏಕೈಕ ಮಾರ್ಗವೆಂದರೆ ತೆರಿಗೆಯನ್ನು

ಪಾವತಿಸದಿರುವುದು ಎನ್ನುತ್ತಿದ್ದ. ವಾಲ್ಡೆನ್ ಎಂಬ ಸರೋವರದ ಪಕ್ಕ ಒಂದು ಪುಟ್ಟ ಕುಟೀರ ಕಟ್ಟಿಕೊಂಡು ನಿಸರ್ಗದ ಅವಿಭಾಜ್ಯ ಅಂಗವೆಂಬಂತೆ ಸಹಜ ಬದುಕಿನ ಪ್ರಯೋಗವನ್ನು ನಡೆಸಿದ್ದ ಥೋರೋ ಆಧುನಿಕತೆಯ ಹೆಸರಿನಲ್ಲಿ ಚಾಲ್ತಿಗೆ ಬಂದ 'ಪ್ರಗತಿ' ಅಥವಾ 'ಅಭಿವೃದ್ಧಿ' ಎಂಬ ಪರಿಕಲ್ಪನೆಯನ್ನು ಅದು ಮನುಷ್ಯನನ್ನು ನಿಸರ್ಗದಿಂದ ದೂರ ಒಯ್ದು ಸ್ವಯಂವಿನಾಶಕನ್ನಾಗಿ ಮಾಡುತ್ತದೆ ಎಂದು ನಂಬಿದ್ದ. ಈ ಸಂಬಂಧ ಅವನು ಬರೆದ ಲೇಖನಗಳ ಸಂಗ್ರಹ 'ವಾಲ್ಡೆನ್'. ಅದು ಥೋರೋನ ವ್ಯಕ್ತಿತ್ವದ ವಿಶಿಷ್ಟ ಗುರುತಾಗಿದ್ದ ಪೂರ್ಣ ಮನುಷ್ಯತ್ವ ಎಂದರೆ ನುಡಿ-ನಡೆಗಳ ಐಕ್ಯತೆ ಎಂಬುದನ್ನು ಸಾರುವ ಜೀವಂತ ಕೃತಿಯಾಗಿತ್ತು.

ಗಾಂಧಿ ಥೋರೋನ ವಿಚಾರಗಳಲ್ಲಿ ತಮ್ಮ ಸತ್ಯಾಗ್ರಹ ಕಲ್ಪನೆಗೆ ಸಮರ್ಥನೆಯನ್ನು ಕಂಡುಕೊಂಡರು. ತಾವು ಥೋರೋನ ವಿಚಾರಗಳಿಂದ ತಮ್ಮ ಹೋರಾಟಕ್ಕೆ ಹೆಚ್ಚಿನ ಅರಿವಿನ ಬಲ ಗಳಿಸಿದ್ದಾಗಿ ಗಾಂಧಿ ಹೇಳುತ್ತಾರೆ. ಆದರೆ ಕೆಲವರು ಸತ್ಯಾಗ್ರಹ ಕಲ್ಪನೆಯನ್ನು ತಾವು ಆತನಿಂದ ಪಡೆದುಕೊಂಡಿದ್ದಾಗಿ ಹೇಳುವುದನ್ನು ಅವರು ನಿರಾಕರಿಸುತ್ತಾರೆ. ಥೋರೋನನ್ನು ಓದಿದ್ದು ತಾವು ಸತ್ಯಾಗ್ರಹವನ್ನು ಆರಂಭಿಸಿದ ಬಹು ದಿನಗಳ ನಂತರ ಎನ್ನುತ್ತಾರೆ. ಹೇಗೂ ಥೋರೋ ತನ್ನ ವಿಚಾರಗಳ ಬೇರುಗಳನ್ನು ಹೊಂದಿದ್ದುದು ಆತ ಓದಿದ್ದ ಉಪನಿಷತ್ತುಗಳು, ಗೀತೆ ಇತ್ಯಾದಿ ಭಾರತದ ಪ್ರಾಚೀನ ಗ್ರಂಥಗಳಲ್ಲೇ ಎಂಬುದು ಇಲ್ಲಿ ಗಮನಾರ್ಹ.

## ಜನಿವಾರ ಬೇಡ!

ಗಾಂಧಿ ಈ ಸೆರೆಮನೆವಾಸದಲ್ಲಿ ನಾವು ಗಮನಿಸಬೇಕಾದ ಇನ್ನೊಂದು ಮುಖ್ಯ ಸಂಗತಿ ಎಂದರೆ ಅವರು ಸೆರೆಮನೆಯ ನಿಯಮದ ಪ್ರಕಾರ ಬರೆಯಬಹುದಾಗಿದ್ದ ತಿಂಗಳಿಗೊಂದು ಬರೆದ ಪತ್ರಗಳಲ್ಲಿನ ಅವರ ವಿಚಾರಗಳ ವೈಶಿಷ್ಟ್ಯ. ಮಾರ್ಚ್ ಕೊನೆಯ ವಾರದಲ್ಲಿ ಬರೆದ ಒಂದು ಪತ್ರದಲ್ಲಿ ಅವರು ಕಸ್ತೂರಬಾ ಅವರ ಆರೋಗ್ಯದ ಬಗ್ಗೆ ವಿಚಾರಿಸುತ್ತಾ, 'ಆಕೆ ಮತ್ತು ನೀವೆಲ್ಲರೂ ಪ್ರತಿದಿನ ಬೆಳಿಗ್ಗೆ ಹಾಲಿನೊಂದಿಗೆ ಸಬ್ಬಕ್ಕಿ ತೆಗೆದುಕೊಳ್ಳುವುದನ್ನು ಮುಂದುವರೆಸಬೇಕು' ಸೂಚಿಸಿದ್ದರು. ಜೊತೆಗೇ, ಫೀನಿಕ್ಸ್‌ನ ತಮ್ಮ ಮನೆಗೆ ಬಂದು ಮಣಿಲಾಲನಿಗೆ ಜನಿವಾರ ಹಾಕಿಕೊಳ್ಳಲು ಆಗ್ರಹಿಸಿದ್ದ ಹಿಂದೂ ಆರ್ಯಸಮಾಜದ ಶಂಕರಾನಂದ ಸ್ವಾಮಿಯ ಮಾತನ್ನು ಕೇಳಬಾರದೆಂದು ಆಗ್ರಹಿಸಿದ್ದರು. ಭಾರತದಿಂದ ಬಂದಿದ್ದ ಆರ್ಯಸಮಾಜದ ಈ ಸ್ವಾಮಿ ದ.ಆಫ್ರಿಕಾದ ಹಿಂದೂ ಭಾರತೀಯರ ಮನೆಗಳಿಗೆ ಹೋಗಿ ಹಿಂದೂ ಕರ್ಮಾಚರಣೆಗಳನ್ನು ಮಾಡಿಸುತ್ತಾ ಗಾಂಧಿ ಪ್ರಚುರಪಡಿಸುತ್ತಿದ್ದ ಉದಾರವಾದಿ ಹಿಂದೂ ಧರ್ಮದ ತತ್ವಗಳನ್ನು ಖಂಡಿಸುತ್ತಿದ್ದ. ಈ ಕಾರಣದಿಂದಾಗಿ ಆತ ಆಡಳಿತಪರ ಬಿಳಿಯರ ಸಾಮಾಜಿಕ ವಲಯಗಳಲ್ಲಿ ಬಹು ಪ್ರಿಯನಾದ ವ್ಯಕ್ತಿಯಾಗಿದ್ದ. ಈ ಸಂಬಂಧವಾಗಿ ಗಾಂಧಿ, 'ಈಗಾಗಲೇ ಶೂದ್ರರು ಮತ್ತು ಇತರರ ನಡುವೆ ಸಾಕಷ್ಟು ಹುಸಿ ವಿಭಜನೆಗಳಿದ್ದು, ಈ ದಾರವು ಅವನ್ನು ಇನ್ನಷ್ಟು ಹೆಚ್ಚಿಸಿ ತೊಂದರೆ ಉಂಟುಮಾಡುತ್ತದೆ' ಎಂದು ಮಗನಿಗೆ ಎಚ್ಚರಿಸಿದ್ದರು. ಈ ಶಂಕರಾನಂದ ಸ್ವಾಮಿ ದ. ಆಫ್ರಿಕಾದಲ್ಲಿ ನಡೆಸುತ್ತಿದ್ದ ಧರ್ಮ ಪ್ರಚಾರ ಕಾರ್ಯಕ್ರಮವನ್ನು ಆರಂಭದಲ್ಲೇ ಗಮನಿಸಿದ್ದ ಗಾಂಧಿ, ಸೋದರ ಸಂಬಂಧಿ ಮಗನಲಾಲ್‌ಗೆ ಬರೆದ ಪತ್ರವೊಂದರಲ್ಲಿ 'ಈ ಸ್ವಾಮಿಯ ವಿಚಾರಗಳ ಬಗ್ಗೆ ನನ್ನ ಗೌರವಪೂರ್ವಕ ಭಿನ್ನಾಭಿಪ್ರಾಯವಿದೆ. ಇಂತಹ ವಿಷಾದನೀಯ ಬೆಳವಣಿಗೆಗಳಿಂದಾಗಿಯೇ ತಮ್ಮ ಗೆಳೆಯ-ಮಾರ್ಗದರ್ಶಿ ಕವಿ ರಾಯ್‌ಚಂದ್, ಆಧುನಿಕ ಕಾಲದಲ್ಲಿ ಧರ್ಮ ಬೋಧಕರ ಬಗ್ಗೆ ಎಚ್ಚರದಿಂದರಬೇಕೆಂದು ಹೇಳುತ್ತಿದ್ದುದು' ಎಂದು ಬರೆದಿದ್ದರು.

## ಕೌಟುಂಬಿಕ ತಲ್ಲಣ

ನಂತರ ತಮ್ಮ ಗೆಳೆಯ ಪೊಲಾಕ್‌ಗೆ ಬರೆದ ಪತ್ರದಲ್ಲಿ ಫೀನಿಕ್ಸ್‌ನಲ್ಲಿ ತಮ್ಮ ಕುಟುಂಬ ತಮ್ಮನ್ನು ಒಮ್ಮೆ ನೋಡಿ ಬರಬಲ್ಲ ಪ್ರಯಾಣದ ಖರ್ಚನ್ನೂ ನಿರ್ವಹಿಸಲಾಗದಷ್ಟು ಆರ್ಥಿಕವಾಗಿ ದುಃಸ್ಥಿತಿಯಲ್ಲಿದ್ದು ಸಾಲದ ಹೊರೆಗೆ ಸಿಕ್ಕಿರುವುದರ ಬಗ್ಗೆ ವಿಷಾದಿಸಿ, ಕುಟುಂಬದ ಚಿನ್ನಾಭರಣಗಳನ್ನೂ ಮತ್ತು ತಮ್ಮ ಕಾನೂನು ಪುಸ್ತಕಗಳನ್ನೂ ಮಾರಿ ಸಾಲ ತೀರಿಸಲು ದಯವಿಟ್ಟು ಮನೆಯವರಿಗೆಹೇಳಿ' ಎಂದು ಬರೆದಿದ್ದರು. ಆದರೆ ಗಾಂಧಿ ವ್ಯಕ್ತಿತ್ವ ಮೂಡುತ್ತಿದ್ದ ಬಗೆಯನ್ನು ಕುತೂಹಲಕಾರಿಯಾಗಿ ಬಿಚ್ಚಿಡುವ ಕಾರಣದಿಂದಾಗಿ ನಿಜವಾಗಿ ನಮ್ಮ ಗಮನವನ್ನು ಸೆಳೆಯುವ ಪತ್ರವೆಂದರೆ ಅವರು ಹದಿನೇಳು ವರ್ಷದ ವಯಸ್ಸಿನ ತಮ್ಮ ಎರಡನೇ ಮಗ ಮಣಿಲಾಲನಿಗೆ ಬರೆದ ಒಂದು ದೀರ್ಘ ಪತ್ರ. ಕುಟುಂಬದ ಲೌಕಿಕ ಯೋಗಕ್ಷೇಮದ ವಿಷಯಗಳಲ್ಲದೆ ಕುಟುಂಬ ಆಂತರಂಗಿಕ ಯೋಗಕ್ಷೇಮದ ಬಗ್ಗೆಯೂ ಅವರು ನೀಡುವ ಸೂಚನೆಗಳ ಸ್ವರೂಪ ಗಾಂಧಿಯಲ್ಲಿದ್ದ ತಾಯ್ತನದ ಜೊತೆಗೇ ತಂದೆತನದ ಪರಿಚಯವನ್ನೂ ಮಾಡಿಕೊಡುತ್ತಾ ಈ ಪತ್ರ ಒಟ್ಟಾರೆ ಅವರ ವ್ಯಕ್ತಿತ್ವದಲ್ಲಿ ಸಿದ್ಧವಾಗುತ್ತಿದ್ದ ಒಂದು ವಿಶಿಷ್ಟ ಹದದ ಸೂಚನೆಯನ್ನು ನೀಡುತ್ತದೆ. ಈ ಪತ್ರದಲ್ಲಿ ಮುಖ್ಯವಾಗಿ ಎದ್ದುಕಾಣುವುದು, ತಮ್ಮ ಮಕ್ಕಳಿಗೆ ಔಪಚಾರಿಕ ಶಿಕ್ಷಣದ ವ್ಯವಸ್ಥೆ ಮಾಡಿಲ್ಲವೆಂಬ ಅವರ ಗೆಳೆಯರ ಟೀಕೆ, ಪತ್ನಿಯ ಕೊರಗು ಮತ್ತು ಸ್ವತಃ ಮಕ್ಕಳ ಆತಂಕಗಳು ಅವರ ಮನಸ್ಸಿನಲ್ಲಿ ಸದಾ ಉಂಟು ಮಾಡತ್ತಿರಬಹುದಾದ ತುಮುಲ.

ಈ ಪತ್ರದಲ್ಲಿ ಗಾಂಧಿ, 'ಈಗ ಮನೆಯಲ್ಲಿರುವ ಹಿರಿಯ ಮಗನಾಗಿ ತಾಯಿ, ಅತ್ತಿಗೆ ಮತ್ತು ತಮ್ಮಂದಿರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ತನ್ನ ಕರ್ತವ್ಯವೆಂದು ಭಾವಿಸುವಂತೆ ಮನಸ್ಸನ್ನು ತರಬೇತುಗೊಳಿಸಿಕೊಳ್ಳುವುದೇ ನಿಜವಾದ ಶಿಕ್ಷಣವೇ ಹೊರತು ಅಕ್ಷರ ಜ್ಞಾನವಲ್ಲ. ಪ್ರತಿಯೊಬ್ಬನೂ ಹನ್ನೆರಡು ವರ್ಷ ವಯಸ್ಸಿನ ನಂತರ ತನ್ನ ಕರ್ತವ್ಯಗಳನ್ನು ಮನವರಿಕೆ ಮಾಡಿಕೊಳ್ಳುವಂತೆ ಆಲೋಚನೆ, ಮಾತು ಮತ್ತು ಕೆಲಸಗಳಲ್ಲಿ ಸಮಾಧಾನ, ಸತ್ಯವಂತಿಕೆಗಳನ್ನೂ ಜೀವಹಾನಿ ಮಾಡದಿರುವಂತಹ ಕಲಿಕೆ ಮತ್ತು ಆಚರಣೆಗಳನ್ನು ರೂಢಿಸಿಕೊಳ್ಳುವುದೇ ಶಿಕ್ಷಣ' ಎಂದು ಉಪನಿಷದ್ ಬಗೆಗಿನ ಒಂದು ಗುಜರಾತಿ ವ್ಯಾಖ್ಯಾನ ಪದ್ಯವೊಂದನ್ನು ಉಲ್ಲೇಖಿಸಿ ಹೇಳುತ್ತಾರೆ. ಮುಂದುವರೆದು ಅವರು, 'ಈ ಮೂರು ಗುಣಗಳನ್ನು ರೂಢಿಸಿಕೊಂಡವನು ಜಗತ್ತಿನ ಯಾವ ಭಾಗದಲ್ಲಾದರೂ ಅನ್ನಾಹಾರಗಳನ್ನು ಗಳಿಸಬಲ್ಲವನಲ್ಲದೆ ಸತ್ಯದ, ಆತ್ಮದ ಮತ್ತು ದೇವರ ಸಾಕ್ಷಾತ್ಕಾರವನ್ನೂ ಸಾಧಿಸಬಹುದು. ಆದರೆ ಅಕ್ಷರಜ್ಞಾನ ಬೇಡವೆಂದಲ್ಲ. ಅದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬೇಕಿಲ್ಲ. ಅದನ್ನು ಕಲಿಯಲು ಬೇಕಾದಷ್ಟು ಕಾಲಾವಕಾಶವಿದೆ. ಇನ್ನುಮುಂದೆ ನಾವು ಬಯಸಬೇಕಾದದ್ದು, ನಿರೀಕ್ಷಿಸಬೇಕಾದದ್ದು ಬಡತನವನ್ನು. ಅದರ ಬಗ್ಗೆ ಹೆಚ್ಚು ಯೋಚಿಸಿದಷ್ಟೂ ಅದೊಂದು ಆಶೀರ್ವಾದ ರೂಪವಾಗಿಯೇ ನನಗೆ ಕಾಣುತ್ತದೆ. ಬಡತನದ ಪ್ರಯೋಜನಗಳು ಶ್ರೀಮಂತಿಕೆಯವಕ್ಕಿಂತ ಹೆಚ್ಚು ಸವಿಯಾಗಿರುತ್ತವೆ.' ಎನ್ನುತ್ತಾರೆ. ಕೊನೆಯಲ್ಲಿ, 'ತೋಟಗಾರಿಕೆಯನ್ನು ಮರೆಯಬೇಡ. ನೀನು ಒಬ್ಬ ಒಳ್ಳೆಯ ತೋಟಗಾರನಾಗಬೇಕು. ಕೆಲಸದ ಉಪಕರಣಗಳನ್ನು ಸ್ವಚ್ಛ ಮಾಡಿ ಒಂದೆಡೆ ಇಡುವುದನ್ನು ಕಲಿ. ಗಣಿತ ಮತ್ತು ಸಂಸ್ಕೃತ ಕಲಿಯುವುದನ್ನು ಮರೆಯಬೇಡ. ಹಾಗೇ ಹಾಡುವುದನ್ನೂ. ಒಳ್ಳೆಯ ಪದ್ಯಗಳನ್ನು ಆರಿಸಿ ಪ್ರತ್ಯೇಕವಾಗಿ ಬರೆದಿಟ್ಟುಕೊಂಡು ಬಿಡುವುದಾಗ ಗುನುಗುವುದನ್ನು ರೂಢಿ ಮಾಡಿಕೋ. ಎಂದೂ ಉದ್ವಿಗ್ನ ಅಥವಾ ಕೋಪಗೊಳ್ಳಬೇಡ. ಸಹನೆಯನ್ನು ರೂಢಿಸಿಕೋ. ಮನೆಯ ಎಲ್ಲ ಖರ್ಚು ವೆಚ್ಚಗಳನ್ನು ಒಂದು ಪೈಸೆಯೂ ಬಿಡದತೆ ಲೆಕ್ಕವಿಟ್ಟಿದ್ದೀಯಾ ತಾನೆ?' ಎಂದು ವಿಚಾರಿಸುವ ಮೂಲಕ ತಮ್ಮ ಹಿರಿಯಮಗನನ್ನು ತಮ್ಮ ಮುಂದಿನ ಹೋರಾಟದ ಬದುಕಿಗೆ ಶೃತಿ ಮಾಡಲು ಪ್ರಯತ್ನಿಸುತ್ತಾರೆ.

## ಬೀಜಗಣಿತದ ಪುಸ್ತಕ ಕಳಿಸು!

ಇದೇ ಪತ್ರದಲ್ಲಿ ಗಾಂಧಿ ತಮ್ಮೊಡನೆ ದ.ಆಫ್ರಿಕಾಕ್ಕೆ ಕರೆತಂದಿದ್ದ ತಮ್ಮ ಸೋದರ ಸಂಬಂಧಿ ಹುಡುಗ ಮಗನಲಾಲ್‌ಗೆ ಮಾರುಕಟ್ಟೆಯಲ್ಲಿ ಈಗ ಸುಲಭ ಬೆಲೆಯ ಆವೃತ್ತಿಯಲ್ಲಿ ಲಭ್ಯವಿರುವ ಎಮರ್ಸನ್‌ನ ಪ್ರಬಂಧಗಳನ್ನು ಓದಲು ಹೇಳಬೇಕೆಂದೂ, ಅವು ಪೂರ್ವದ ವಿವೇಕವನ್ನು ಪಶ್ಚಿಮದ ನುಡಿಗಟ್ಟಿನಲ್ಲಿ ಹೇಳಿರುವ ಅಪೂರ್ವ ಬರಹಗಳೆಂದೂ, ಅವುಗಳ ಮುಖ್ಯ ಭಾಗಗಳನ್ನು ಕೆಳಗೆರೆ ಹಾಕಿ ಆಯ್ಕೆ ಮಾಡಿಕೊಂಡು ನಂತರ ಅವನ್ನು ಇನ್ನೊಂದು ಟಿಪ್ಪಣಿ ಪುಸ್ತಕಕ್ಕೆ ಪ್ರತಿ ಮಾಡಿಕೊಂಡು ದಿನವೂ ಮನನ ಮಾಡಿಕೊಳ್ಳಬೇಕೆಂದೂ ಸೂಚಿಸಿದ್ದರು. ಜೊತೆಗೆ ಸರಳ ಇಂಗ್ಲಿಷ್‌ನಲ್ಲಿ ಅನುವಾದಿತವಾಗಿರುವ ಟಾಲ್‌ಸ್ಟಾಯ್‌ನ 'ದೇವರ ಸಾಮ್ರಾಜ್ಯ ನಿನ್ನೊಳಗೇ ಇದೆ' ಎಂಬ ಪುಸ್ತಕವನ್ನು ಓದಲೇಬೇಕೆಂದು ಆಗ್ರಹಿಸಿದ್ದಾರೆ. ಕುತೂಹಲದ ಸಂಗತಿ ಎಂದರೆ ಈ ಪತ್ರದ ಕೊನೆಯಲ್ಲಿ ತಮಗೊಂದು 'ಬೀಜಗಣಿತ'ದ ಪುಸ್ತಕವೊಂದನ್ನು ಕಳಿಸಿಕೊಡಲು ಹೇಳುತ್ತಾರೆ!

ಈ ಪತ್ರವನ್ನು ತಮ್ಮ ಗಾಂಧಿ ಜೀವನ ಚರಿತ್ರೆ 'ಲೈಫ್ ಆಫ್ ಮಹಾತ್ಮ ಗಾಂಧಿ' ಪುಸ್ತಕದಲ್ಲಿ ಇಡಿಯಾಗಿ ಉಲ್ಲೇಖಿಸುವ ಲೂಯಿ ಫಿಶರ್, ಇದೊಂದು, ಹದಿಮೂರನೇ ವಯಸ್ಸಿಗೇ ಮದುವೆಯಾಗಿ ಬಾಲ್ಯವನ್ನೇ ಕಳೆದುಕೊಂಡಿದ್ದ ತಂದೆಯೊಬ್ಬ ಅದರ ಫಲವಾಗಿ ತನ್ನ ಮಗನನ್ನು ತನ್ನದೇ ವ್ಯಕ್ತಿತ್ವದ ಎರಕದಲ್ಲಿ ರೂಪಿಸಿಕೊಂಡು ತನ್ನ ಬದುಕಿನ ಮಹಾನ್ ಗುರಿಯನ್ನು ತಲುಪುವುದಕ್ಕೆ ಬೇಕಾದ ಒಳ್ಳೆಯ ಸಹಾಯಕನೊಬ್ಬನನ್ನು ತಯಾರು ಮಾಡಿಕೊಳ್ಳುವ ಪ್ರಯತ್ನದಂತೆ ಕಾಣುತ್ತದೆ. ಮಣಿಲಾಲ ವಕೀಲನೋ ವೈದ್ಯನೋ ಆಗಬಯಸಿದ್ದರೆ, ಗಾಂಧಿ ಆತನನ್ನು ಒಬ್ಬ ಸಣ್ಣ ಸಂತನನ್ನಾಗಿ ಮಾಡಲು ಪ್ರಯತ್ನಿಸಿದರು. ದಿಗಂತದಲ್ಲಿ ನೆಟ್ಟಿದ್ದ ಗಾಂಧಿಯವರ ದೂರದೃಷ್ಟಿಗೆ ತನ್ನ ಹತ್ತಿರದವರ ಕಾಳಜಿಗಳನ್ನು ಸೂಕ್ಷ್ಮವಾಗಿ ಗಮನಿಸಲಾಗಲಿಲ್ಲವೇನೋ!' ಎಂದು ಬರೆಯುತ್ತಾರೆ. ***

ಧರ್ಮ ವಿಚಾರ ಪುಟ

# ಗಾಂಧಿ ಧರ್ಮ



**ಗಾಂಧಿ ಬದುಕಿನಿಂದ ಆಯ್ದ ನಿಜ ಘಟನೆಗಳಲ್ಲಿನ ಮಿಂಚುಗಳನ್ನು ಹಿಡಿದು ಇಲ್ಲಿ ಗಾಂಧಿ ನಂಬಿದ್ದ ಧರ್ಮದ ಪರಿಚಯ ಮಾಡಿಕೊಡುವ ಮೂಲಕ ನಿಜವಾಗಿ ಧರ್ಮವೆಂದರೇನು ಎಂಬುದನ್ನೂ ಇಲ್ಲಿ ನಿರೂಪಿಸುವ ಪ್ರಯತ್ನ ಮಾಡಲಾಗಿದೆ**-ಸಂ.

**ಹಾಸ್ಯ ಪ್ರಜ್ಞೆ**

'ಬದುಕಿನಲ್ಲಿ ಹಾಸ್ಯ ಪ್ರಜ್ಞೆ ಅಗತ್ಯ ಎಂದು ನಿಮಗೆ ಅನಿಸುತ್ತದೆಯೇ?' ಆಶ್ರಮಕ್ಕೆ ಬಂದಿದ್ದ ಅತಿಥಿಯೊಬ್ಬರು ಕೇಳಿದರು. 'ನನ್ನಲ್ಲಿ ಹಾಸ್ಯ ಪ್ರಜ್ಞೆ ಇರದಿದ್ದರೆ ಬಲು ಹಿಂದೆಯೇ ಆತ್ಮಹತ್ಯೆ ಮಾಡಿಕೊಂಡಿರುತಿದ್ದೆ' ಅನ್ನುವುದು ಗಾಂಧಿ ನೀಡಿದ ಉತ್ತರ.

**ನಿಜವಾದ ಯೋಗಿ!**

ಕೊಂಕಣ ಸೀಮೆಯ ಯಾತ್ರೆಯ ಸಮಯದಲ್ಲಿ ಗಾಂಧಿ ಒಂದು ಹಳ್ಳಿಯನ್ನು ತಲುಪಲು ತಡ ರಾತ್ರಿಯಾಯಿತು. ಆದರೂ ಜನ ಗಾಂಧೀಜಿಯ ದರ್ಶನಕ್ಕಾಗಿ ಉತ್ಸಾಹದಿಂದ ಕಾಯುತ್ತಿತ್ತು.. ಇದನ್ನು ಕಂಡ ಗಾಂಧಿ ಹೇಳಿದರು,' ನೀವು ಯೋಗಿಗಳೇ ಸರಿ. ಏಕೆಂದರೆ ಗೀತೆಯ ಯೋಗಸೂತ್ರದ ಪ್ರಕಾರ ಲೋಕ ಮಲಗಿದ್ದಾಗ ಯೋಗಿ ಎದ್ದಿರುತ್ತಾನೆ! ಆದರೆ ನೀವು ನಿಜವಾಗಿ ಎದ್ದಿರುವ ಯೋಗಿಗಳು ಎಂಬುದು ನನಗೆ ಸ್ಪಷ್ಟವಾಗಲು ನೀವೆಲ್ಲ ನಾನು ತಂದಿರುವ ಖಾದಿ ಬಟ್ಟೆಯನ್ನು ಕೊಳ್ಳಬೇಕು!' ಜನ ಹರ್ಷೋದ್ಗಾರ ಮಾಡಿ ಬಟ್ಟೆಯನ್ನು ಕೊಂಡರು.

**ನಂಬಿಕೆ ಮತ್ತು ಸಾಕ್ಷಿ**

' ಈ ಜಗತ್ತು ಹಾಳಾಗುತ್ತಿದೆಯೋ ಚೆನ್ನಾಗುತ್ತಿದೆಯೋ? ಸಂದರ್ಶಕರೊಬ್ಬರು ಕೇಳಿದರು. ಅದಕ್ಕೆ, ಗಾಂಧಿ ಉತ್ತರಿಸಿದ್ದು ಹೀಗೆ : 'ದಯಾಮಯನಾದ ದೇವರಲ್ಲಿ ನನಗೆ ನಂಬಿಕೆ ಇರುವವರೆಗೆ ಜಗತ್ತು ಚೆನ್ನಾಗುತ್ತಿದೆ ಎಂದೇ ನಂಬಬೇಕು, ನಾನು ಪ್ರತಿಕೂಲವಾದ ಸಾಕ್ಷ್ಯಗಳನ್ನು ನೋಡುತ್ತಿರುವಾಗಲೂ...'

**ಪ್ರಾರ್ಥನೆಯ ಪೋಷಕಾಂಶ**

೧೯೨೪ರ ಸೆಪ್ಟಂಬರ್‌ನಲ್ಲಿ ಹಿಂದೂ-ಮುಸ್ಲಿಂ ಶಾಂತಿ-ಸೌಹಾರ್ದಕ್ಕಾಗಿ ಗಾಂಧಿ ೨೧ ದಿನಗಳ ಉಪವಾಸ ಮಾಡಿದಾಗ ೧೧ನೇ ದಿನದಂದು ಅವರನ್ನು ಪರೀಕ್ಷಿಸಿದ ವೈದ್ಯರು 'ಇನ್ನು ನೀವು ಉಪವಾಸ ಮುಂದುವರೆಸಬಾರದು. ನಿಮ್ಮ ದೇಹ ಪೋಷಣೆಯಿಲ್ಲದೆ ಕುಸಿದುಬೀಳುವ ಹಂತ ತಲುಪಿದೆ' ಎಂದು ಆತಂಕ ವ್ಯಕ್ತಪಡಿಸಿದರು. ಆದರೆ ಗಾಂಧಿ ಕಣ್ಣಿನಲ್ಲಿ ಕಾಂತಿಯನ್ನು ತುಳುಕಿಸುತ್ತಾ ಹೇಳಿದರು, 'ನೀವು ಪ್ರಾರ್ಥನೆಯ ಪೋಷಣೆಯನ್ನು ಪರಿಗಣಿಸಿದಂತೆ ಕಾಣುವುದಿಲ್ಲ.' ಗಾಂಧೀಜಿ ಹೇಳಿದ್ದು ನಿಜ, ಅವರು ಪ್ರಾರ್ಥನೆಯ ಪೋಷಣೆಯಿಂದಲೇ ೨೧ ದಿನಗಳ ಉಪವಾಸವನ್ನು ಯಶಸ್ವಿಯಾಗಿ ಪೂರೈಸಿದರು.

**ದೇಶಸೇವೆಯ ಕೆಲಸ**

ದೊಡ್ಡ ಶ್ರೀಮಂತ, ಬಲು ದೊಡ್ಡ ವ್ಯವಹಾರದ ಮುಖ್ಯಸ್ಥ, ಗಾಂಧಿಯನ್ನೊಮ್ಮೆ ಕೇಳಿದರು: 'ದೇಶದ ಸೇವೆಗೆ ನೀವು ನನ್ನನ್ನು ಬಯಸುತ್ತೀರೋ, ನನ್ನ ಹಣವನ್ನೋ?' 'ನನಗೆ ನೀವು ಬೇಕು,' ಗಾಂಧಿ ನೇರವಾಗಿ ಹೇಳಿದರು. ಆಗ ಆ ಉದ್ಯಮಿ ಕೇಳಿದ, 'ನನ್ನ ವ್ಯವಹಾರವನ್ನೆಲ್ಲ ಬಿಟ್ಟು ನಿಮ್ಮಲ್ಲಿಗೆ ಬಂದರೆ ನನಗೆ ಯಾವ ಕೆಲಸ ಕೊಡುತ್ತೀರಿ?' ಚರಕ ತಿರುಗಿಸುತ್ತ ಗಾಂಧಿ ಹೇಳಿದರು: 'ಚರಕದಲ್ಲಿ ನೂಲುವ ಕೆಲಸ.'

**ಗಾಂಧಿ ಟೋಪಿಯ ರಹಸ್ಯ!**

ಗಾಂಧಿ ದಕ್ಷಿಣ ಆಫ್ರಿಕದಲ್ಲಿದ್ದಾಗ ಅವರ ಸಹವರ್ತಿಯಾಗಿದ್ದ ಹೆನ್ರಿ ಪೊಲಾಕ್ ಪ್ರಕಾರ ಇಂದು ಗಾಂಧಿ ಟೋಪಿಯೆಂದು ಹೆಸರಾಗಿರುವುದು ಗಾಂಧಿ ದ. ಆಫ್ರಿಕಾದಲ್ಲಿ ಸೆರೆಮನೆಯಲ್ಲಿದ್ದಾಗ ಅವರನ್ನು ಬಿಳಿಯ ಕೈದಿಗಳಿಂದ ಪ್ರತ್ಯೇಕಿಸಲು ಅವರಿಗೆ ಹಾಕಿಕೊಳ್ಳಲು ನೀಡಲಾಗಿದ್ದ ತಲೆವಸ್ತ್ರ! ಗಾಂಧಿ ಭಾರತಕ್ಕೆ ಬಂದು ೧೯೨೦-೨೧ರಲ್ಲಿ ಖಿಲಾಫತ್-ಅಸಹಕಾರ ಚಳುವಳಿಗಳನ್ನು ಆರಂಭಿಸಿದಾಗ ಈ ಟೋಪಿ ಅವರ ಭಾರತೀಯ ಅನುಯಾಯಿಗಳ ತಲೆಯನ್ನು ಅಲಂಕರಿಸಿತು!

**ಮೋಟು ಪೆನ್ಸಿಲಿನ ಮಹತ್ವ!**

೧೯೧೫ರಲ್ಲಿಮುಂಬೈಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಿತ್ತು. ಒಂದು ದಿನ ಗಾಂಧಿ ತೀರ ಧಾವಂತಪಡುತ್ತಾ ಏನನ್ನೋ ಹುಡುಕುತಿದ್ದರು. 'ಬಾಪೂ, ಏನು ಹುಡುಕುತಿದ್ದೀರಿ?' ಎಂದು ಅವರೊಡನಿದ್ದ ಕಾಕಾ ಕಾಲೇಕರ್ ಕೇಳಿದರು. 'ಪೆನ್ಸಿಲು,' ಅಂದರು ಬಾಪು. ಕಾಕಾ ತಮ್ಮದೇ ಕೈ ಪೆಟ್ಟಿಗೆಯಿಂದ ಒಂದು ಪೆನ್ಸಿಲು ತೆಗೆದು ಅವರಿಗೆ ಕೊಟ್ಟರು.'ಬೇಡ, ಬೇಡ. ನಾನು ಹುಡುಕುತ್ತಿರುವ ಚಿಕ್ಕ ಪೆನ್ಸಿಲೇ ಬೇಕು' ಎಂದರು ಬಾಪು! 'ಸದ್ಯಕ್ಕೆ ಇದನ್ನು ಬಳಸಿ, ಬಾಪೂ. ಆಮೇಲೆ ನಾನು ನಿಮ್ಮ ಪೆನ್ಸಿಲು ಹುಡುಕುತ್ತೇನೆ,' ಎಂದರು ಕಾಕಾ. 'ನಿಮಗೆ ಅರ್ಥವಾಗುವುದಿಲ್ಲ, ಕಾಕಾ. ನಾನು ಆ ಪೆನ್ಸಿಲು ಕಳಕೊಳ್ಳಬಾರದು. ಮದ್ರಾಸಿನಲ್ಲಿ ಜಿ.ಎ. ನಟೇಶನ್ ಅವರ ಪುಟ್ಟ ಮಗ ಎಷ್ಟೊಂದು ಪ್ರೀತಿಯಿಂದ ನನ್ನ ಹತ್ತಿರಕ್ಕೆ ಓಡಿ ಬಂದು ಆ ಪೆನ್ಸಿಲು ಕೊಟ್ಟಿದ್ದ. ನಾನು ಅದನ್ನು ಕಳಕೊಳ್ಳುವುದೇ! ಉಹುಂ...' ಎಂದರು ಬಾಪೂಜಿ.

ಇಬ್ಬರೂ ಸೇರಿ ಕಳ್ಳತಪ್ಪಿಸಿಕೊಂಡಿದ್ದ ಪೆನ್ಸಿಲನ್ನು ಹುಡುಕಿದರು. ಅದು ಸಿಕ್ಕಮೇಲಷ್ಟೇ ಬಾಪೂಗೆ ಸಮಾಧಾನ!. ಆ ಪೆನ್ಸಿಲು ಒಂದು ಇಂಚು ಕೂಡ ಉದ್ದ ಇರಲಿಲ್ಲ!

**ಹೆಚ್ಚಿನ ಹರಿಜನ ಸೇವೆ!**

ವಾರ್ಧಾದಲ್ಲಿ ಹರಿಜನಸೇವಕ ಸಂಘದ ಸಭೆಯನ್ನು ಉದ್ದೇಶಿಸಿ ಗಾಂಧಿ ಮಾತಾಡುತ್ತಿದ್ದರು. ಗಾಂಧೀಜಿಯ ಭಾಷಣದ ನಂತರ ಹರಿಜನ ಸೇವೆಯಲ್ಲಿ ಬಹು ಶ್ರದ್ಧೆಯಿಂದ ತೊಡಗಿದ್ದ ಬ್ರಾಹ್ಮಣ ಕಾರ್ಯಕರ್ತರೊಬ್ಬರು ಕೇಳಿದರು : 'ಈಗ ಮಾಡುತ್ತಿರುವ ಸೇವೆಗಿಂತ ಹೆಚ್ಚಿನ ಸೇವೆಯನ್ನು ನಾನು ಹರಿಜನರಿಗೆ ಏನು ಮಾಡಬಹುದು, ದಯವಿಟ್ಟು ಹೇಳಿ' ಗಾಂಧಿ ತಕ್ಷಣ ಕೇಳಿದರು" 'ನಿಮಗೆ ಮದುವೆಯಾಗಿದೆಯೇ?' ಹೌದೆಂದರು ಆ ಬ್ರಾಹ್ಮಣ ಕಾರ್ಯಕರ್ತರು. ಗಾಂಧಿ ಹೇಳಿದರು:'ನಿಮ್ಮ ಮಗನನ್ನು ಓರ್ವ ಹರಿಜನ ಹುಡುಗಿಗೆ ಕೊಟ್ಟು ಮದುವೆ ಮಾಡಿರಿ'

**'ಸಂದೇಶಕ್ಕೆ ಸಾಧನ!**

ಜಾಗತಿಕ ಧರ್ಮ ಸಂಸತ್‌ನ ಸಂಘಟಕರು ಗಾಂಧೀಜಿಯ ಹುಟ್ಟು ಹಬ್ಬದಂದು (೧೯೩೩ರ ಅಕ್ಟೋಬರ್ ಎರಡರಂದು) ಒಂದು ಸಂದೇಶ ಕೇಳಿದಾಗ ಅವರು ನೀಡಿದ ಸಂದೇಶ ಹೀಗಿತ್ತು: 'ನನ್ನ ಬದುಕಿನ ಮೂಲಕ ಕೊಡಲಾಗದ ಸಂದೇಶವನ್ನು ಲೇಖನಿಯ ಮೂಲಕ ಕೊಡಲಾದೀತೇ?'

**ಹೇಡಿತನ ಮತ್ತು ಹಿಂಸೆ**

೧೯೦೮ರಲ್ಲಿ ದ.ಆಫ್ರಿಕಾದಲ್ಲಿನ ಸತ್ಯಾಗ್ರಹದ ಆರಂಭದ ದಿನಗಳಲ್ಲಿ ಪಠಾಣರ ಗುಂಪೊಂದರಿಂದ ಗಾಂಧಿಯ ಮೇಲೆ ಪ್ರಾಣಾಂತಿಕ ಹಲ್ಲೆ ನಡೆದದ್ದರ ಸಂಬಂಧವಾಗಿ ಗಾಂಧೀಜಿಯ ಹಿರಿಯ ಮಗ ಹರಿಲಾಲ, ತಾನು ಆ ಸಂದರ್ಭದಲ್ಲಿ ಅಲ್ಲಿದ್ದಿದ್ದರೆ ಏನು ಮಾಡಬಹುದಿತ್ತು ಎಂದು ನಂತರ ಕೇಳಿದಾಗ ಗಾಂಧಿ ಹೇಳಿದ್ದು : 'ನೀನು ನಿನ್ನ ಬಲವನ್ನು ಬಳಸಿ ನನ್ನನ್ನು ರಕ್ಷಿಸಲು ಪ್ರಯತ್ನಿಸುವುದು ಯೋಗ್ಯವಾಗಿರುತ್ತಿತ್ತು.'

**ಕಾಯುವುದು ರಾಜಕಾರಣಿಗಳ ಕೆಲಸ!**

ಗಾಂಧಿ ದುಂಡು ಮೇಜಿನ ಪರಿಷತ್ತಿನ ಸಂದರ್ಭದಲ್ಲಿ ಲಂಡನ್‌ನಲ್ಲಿದ್ದಾಗ ಅವರೊಂದಿಗೆ ತುರ್ತಾಗಿ ಮಾತಾಡಲು ಬ್ರಿಟನ್‌ನ ಪ್ರಧಾನಿ ಮೆಕ್‌ಡೊನಾಲ್ಡ್ ಬಂದರು. ಆದರೆ ಅದೇ ಹೊತ್ತಿಗೆ ದೂರದ ಊರಿನಿಂದ ಅವರ ದರ್ಶನಾಕಾಂಕ್ಷಿಯಾಗಿ ಒಬ್ಬ ಅಂಚೆ ಅಣ್ಣ ಬಂದ. ಗಾಂಧಿ ಆ ಅಂಚೆಯಣ್ಣನನ್ನು ಮೊದಲು ಮಾತಾಡಿಸಿ ಕಳಿಸಿ ನಂತರ ಪ್ರಧಾನಿಯನ್ನು ಬರಮಾಡಿಕೊಳ್ಳುತ್ತಾ ಹೇಳಿದರು ಊರಿಗೆಲ್ಲ ಅಂಚೆ ಕೊಡಬೇಕಾದ ಅಂಚೆಯಣ್ಣನಿಗೆ ಪ್ರತಿ ಕ್ಷಣವೂ ಅಮೂಲ್ಯ! ಆದರೆ ರಾಜಕಾರಣಿಗಳಿಗೆ ಕಾಯುವುದು ಕರ್ತವ್ಯವಿದ್ದಂತೆ, ಅವಕಾಶಕ್ಕಾಗಿ ಕಾಯ್ದು ಸರಿಯಾದ ಸಮಯದಲ್ಲಿ ಕಾರ್ಯಶೀಲರಾಗುವುದೇ ಅವರ ಗುಣವಲ್ಲವೇ?'

**ಸ್ವರಾಜ್ಯಕ್ಕೆ ಅನರ್ಹತೆ!**

ದಂಡಿ ಯಾತ್ರೆಯ ಸಂದರ್ಭದಲ್ಲಿ ರಾತ್ರಿಯಲ್ಲಿ ಬೆಳಕಿನ ವ್ಯವಸ್ಥೆಗಾಗಿ ಸಂಘಟಕರು ಒಬ್ಬ ಬಡಪಾಯಿಯ ಹೆಗಲ ಮೇಲೆ ದೊಡ್ಡ ದೀಪ ಮತ್ತು ಅದನ್ನಿಡಲು ಒಂದು ಚಿಕ್ಕ ಮೇಜನ್ನು ಹೊರಿಸಿ ಎಲ್ಲರಿಗಿಂತ ಮುಂದೆ ನಡೆಯಲು ಸೂಚಿಸಿದ್ದರು. ಗಾಂಧಿಯ ನಡಿಗೆಯ ವೇಗಕ್ಕೆ ಹೆಜ್ಜೆ ಹಾಕಲಾಗದ ಆ ಬಡಪಾಯಿ ಏದುಸಿರುಬಿಡುತ್ತಾ ಗಾಂಧಿಯನ್ನು ದಾಟಿ ಓಡತೊಡಗಿದ. ಇದನ್ನು ಕಂಡ ಗಾಂಧಿ, 'ಇದಕ್ಕಿಂತ ನಾಚಿಕೆಗೇಡಿನ ಸಂಗತಿ ಇನ್ನೊಂದಿಲ್ಲ, ಇಂತಹ ವರ್ತನೆಗಳೇ ನಮ್ಮನ್ನು ಸ್ವರಾಜ್ಯಕ್ಕೆ ಅನರ್ಹವಾಗಿಸಿರುವುದು' ಎಂದು ಹೇಳಿ ಆ ಹೊರೆಯನ್ನು ಆತನಿಂದ ಇಳಿಸಲು ಸೂಚಿಸಿದರು.

(ಆಧಾರ : **'ಅನೆಕ್ಡೋಟ್ಸ್ ಆಫ್ ಗಾಂಧಿ'** ನವಜೀವನ ಪ್ರಕಾಶನ, ಅಹ್ಮದಾಬಾದ್, ಆಯ್ಕೆ ಮತ್ತು ಅನುವಾದ : **ಓಎಲ್ಲೆನ್/ ಡಿಎಸ್ಸೆನ್**)

ಕಥೆ

# ಮುಗಿಲ ಜಾಡು ಹಿಡಿದು



-ಸುನಂದಾ ಕಡಮೆ

ಚಿತ್ರ : ವಿಜಯಶ್ರೀ ಹಾಲಾಡಿ

**ನಾ**ಯಕ ಮಾಸ್ತರ್‍ರು ತಮ್ಮ ಮನೆಯಂಗಳದಲ್ಲಿ ಹಾಕಿಕೊಂಡ ಆರಾಮ ಕುರ್ಚಿಯಲ್ಲಿ ಕೂತು, ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ಮುಖಕ್ಕೆ ಮರೆಮಾಡಿಕೊಂಡು ಏನನ್ನೋ ಓದುತ್ತಿದ್ದರು. ತೆರೆದ ಅಂಗಳದಲ್ಲಿ ಮೇಲೆ ಮುಗಿಲು ಇನ್ನೇನು ಮಳೆ ಬರುವ ಲಕ್ಷಣ ಹೊತ್ತು ಮೋಡ ಕಟ್ಟಿಕೊಳ್ಳುತ್ತಿತ್ತು. ದೂರದ ರಸ್ತೆಯಿಂದಲೇ ಅದನ್ನು ಗಮನಿಸಿದ ಅವರ ಅತ್ಯಂತ ಮೆಚ್ಚಿನ ಹಳೆಯ ಶಿಷ್ಯ ರಮಾನಂದ, ತನ್ನ ಕಿವಿಯ ಮೇಲೆ ಬಿದ್ದ ಸುಮೇದನೆಂಬ ವಿದ್ಯಾರ್ಥಿಯ ಆಕಸ್ಮಿಕ ಸಾವಿನ ಸುದ್ದಿಗೆ ವ್ಯತಿರಿಕ್ತವಾಗಿ ಊರಿನ ತುಂಬ ಹರಿದಾಡುತ್ತಿದ್ದ ಸಂಶಯಾಸ್ಪದ ಸಂಗತಿಯೊಂದನ್ನು ಮಾಸ್ತರ್‍ರ ಬಳಿ ಹೋಗಿ ಹೇಳಲೋ ಬೇಡವೋ ಎಂಬ ಸಂದಿಗ್ಧದಲ್ಲಿ ಅಲ್ಲೇ ಕೆಲ ಸಮಯ ದಿಗಿಲಿನಿಂದ ನಿಂತು ಬಿಟ್ಟಿದ್ದ. ಏನನ್ನೂ ಹೇಳಿ ಕೇಳುವ ಧೈರ್ಯವಾಗದೇ ತಲೆಯಾಡಿಸುತ್ತ ಹಾಗೇ ಅಲ್ಲಿಂದಲೇ ಮನೆಗೆ ಮರಳಿದ್ದ. ಆದರೆ ರಮಾನಂದ ಹಾಗೆ ಅನುಮಾನಿಸುತ್ತ ರಸ್ತೆಯಲ್ಲೇ ನಿಂತು, ಅಲ್ಲಿಂದಲೇ ಹಿಂತಿರುಗಿ ಹೊರಟು ಹೋದದ್ದನ್ನು ನಾಯಕ ಮಾಸ್ತರ್‍ರು ತಮ್ಮ ಚಾಳೀಸಿನೊಳಗಿನ ಓರೆನೋಟದಿಂದಲೇ ಪತ್ರಿಕೆಯ ಅಂಚಿನಿಂದ ತೀಕ್ಷ್ಣವಾಗಿ ಗಮನಿಸಿ ತುಸು ಕಂಗಾಲಾಗಿದ್ದರು.

ರಮಾನಂದ ಬಂದು ಕೂತು ತನಗೇನಾದರೂ ಒಂದಿಷ್ಟು ಮನಸ್ಸು ಅರಳುವ ಮಾತಾಡುತ್ತಾನೆ ಅಂತ ಕಾದಿದ್ದ ಮಾಸ್ತರ್‍ರಿಗೆ ಒಂದು ಕ್ಷಣ ಗೊಂದಲವೇ ಅನ್ನಿಸಿತು. ಆ ಕ್ಷಣ ಪತ್ರಿಕೆ ಮಡಚಿಟ್ಟು ಎದ್ದು ಸಡಿಲಗೊಂಡ ಲುಂಗಿ ಬಿಗಿ ಮಾಡಿಕೊಂಡರು. ಶಿಷ್ಯ ರಮಾನಂದನ ತಿರಸ್ಕಾರದ ಕುರಿತೇ ಯೋಚಿಸುತ್ತ ಅಂಗಳದಲ್ಲಿಯೇ ಅತ್ತಿತ್ತ ಒಂದೆರಡು ಹೆಜ್ಜೆ ಹಾಕಿ ಒಳಬಂದ ನಾಯಕ ಮಾಸ್ತರ್‍ರು ಹೆಂಡತಿಯನ್ನು ಒಮ್ಮೆ ದಿಟ್ಟಿಸಿ, ತಮ್ಮ ಮಲುಗುವ ಕೋಣೆಯತ್ತ ಹೆಜ್ಜೆ ಹಾಕಿದರು. ಅವರ ಮ್ಲಾನವದನವನ್ನು ಕಿಂಚಿತ್ತೇ ಗಮನಿಸಿದ ಅವರ ಪತ್ನಿ ಮೀನಾಕ್ಷಿಗೆ ಎನೋ ಹೊಳೆದಂತಾಗಿ, ಹೊರ ಇಣುಕಿ, ಯಾರಾದರೂ ಬಂದು ಕೂತು ಇಲ್ಲದ ಸಂಗತಿ ಹೇಳಿ, ತಿಳಿಯಾಗಿದ್ದ ನಾಯಕ ಮಾಸ್ತರ್‍ರ ಮಾನಸಿಕ ಸ್ಥಿತಿಯನ್ನು ಕಲಕಿಬಿಟ್ಟರೇ ಎಂಬ ಅನುಮಾನದ ದೃಷ್ಟಿಯಿಂದ ಸುತ್ತ ಕಣ್ಣಾಡಿಸಿದರು.

ದಿನದಂತೆ ಪತ್ರಿಕೆಯನ್ನು ನೀಟಾಗಿ ಪುಟಗಳ ತುದಿಯನ್ನು ಹೊಂದಿಸಿ ಆಯತಾಕಾರಕ್ಕೆ ಸೇರುವಂತೆ ಮಡಚದೇ, ಹಾಗೇ ಅವಸರದಲ್ಲಿ ಬಿಸಾಕಿದಂತೆ ಕಾಣುವ ಪತ್ರಿಕೆ ಬಿದ್ದ ಆ ಶೈಲಿಯಲ್ಲೇ ನಾಯಕ ಮಾಸ್ತರ್‍ರ ದುಗುಡಗೊಂಡ ಮನಸ್ಥಿತಿಯು ಮೀನಾಕ್ಷಿಯ ಅನುಭವಕ್ಕೆ ಬಂದಿತ್ತು.

ಹಾಸಿಗೆಯಲ್ಲಿ ಸುಮ್ಮನೇ ಒರಗಿಕೊಂಡು ಮಲಗಿದಂತೆ ಕಂಡರೂ ನಾಯಕ ಮಾಸ್ತರ್‍ರಿಗೆ ನಿದ್ದೆ ಬಂದಿರಲಾರದು ಎಂಬುದನ್ನು ಅರಿತುಕೊಂಡ ಮೀನಾಕ್ಷಿ ಮೆಲ್ಲಗೆ ಅವರತ್ತ ನಡೆದು ಸುಮ್ಮನೇ ಅವರ ಬೆನ್ನಿನ ಬದಿಯಲ್ಲಿ ಕೂತರು. ಯಾವ ಮಾತನ್ನು ಮೊದಲಿಗೆ ಆಡಬೇಕೆಂದೇ ತಿಳಿಯದೇ ಅವರು ಮಗಳ ವಿಷಯ ತೆಗೆದು 'ಆಶಾಗೆ ಡ್ರಾಯಿಂಗ್ ಪರೀಕ್ಷೆಯ ಫೀಸನ್ನು ಇವತ್ತೇ ಕೊಟ್ಟು ಕಳಿಸಿದೆ, ನಾಳೆಯೇ ಕೊನೇ ತಾರೀಖು ಉಂಟಂತೆ' ಎಂದು ತೇಲಿಸಿ ತೇಲಿಸಿ ನುಡಿದದ್ದು ಬೇರೆ ಯಾವುದೋ ಮಾತಿಗೆ ಪೀಠಿಕೆಯಾಗಿದ್ದಂತೆ ನಾಯಕ ಮಾಸ್ತರ್‍ರಿಗೆ ಅನ್ನಿಸಿತು.

ಅವರು ಹೆಂಡತಿಯತ್ತ ಹೊರಳಿ ಮಲಗುತ್ತ 'ಆಯ್ತು' ಎಂದರು. ಮೀನಾಕ್ಷಿ ಗಂಡನ ನೆತ್ತಿಯ ಮೇಲಿನ ತಲೆಗೂದಲನ್ನು ನಿಧಾನ ಸವರುತ್ತ 'ಯಾಕೆ ಹೊತ್ತಿಲ್ಲದ ಹೊತ್ತಿನಲ್ಲಿ ಹೀಗೆ ಮಲಗಿಬಿಟ್ಟಿರಿ?' ಎಂದು ವಿಚಾರಿಸಲೋ ಬೇಡವೋ ಎಂಬ ದ್ವಂದದಲ್ಲೇ ಕೇಳಿದರು. ತಮ್ಮ ತಲೆಗೂದಲಿನಿಂದ ಹೆಂಡತಿಯ ಕೈಯನ್ನು ಬಿಡಿಸುತ್ತ ಮಾಸ್ತರ್‍ರು 'ಏನಿಲ್ಲ, ಹೊರಗೆ ಕೂತಿದ್ದಾಗ, ರಸ್ತೆಯಲ್ಲಿ ಹೋಗುತ್ತಿದ್ದ ರಮಾನಂದ ನನ್ನತ್ತ ಬರಲೋ ಬೇಡವೊ ಎಂಬ ಅನುಮಾನದಲ್ಲಿ ತುಸು ಹೊತ್ತು ಅಲ್ಲೇ ಮುರ್ಕಿಗೆ ನಿಂತು ವಾಪಸ್ಸು ಹೋಗಿಬಿಟ್ಟ, ಹೀಗೆ ನಂಬಿಕಸ್ಥ ವಿದ್ಯಾರ್ಥಿಗಳೆಲ್ಲ ನನ್ನನ್ನು ಬೇರೆ ತರಹದಲ್ಲಿ ತಪ್ಪಿತಸ್ಥನಂತೆ ನೋಡುವುದೆಂದರೆ ' ಎನ್ನುತ್ತ ಮಾಸ್ತರ್‍ರು ಮುಖವನ್ನು ಇನ್ನಷ್ಟು ಚಿಕ್ಕದು ಮಾಡಿದರು. ಮೀನಾಕ್ಷಿ ಅದಕ್ಕೆ ಏನು ಹೇಳಬೇಕೆಂದೇ ತಿಳಿಯದೇ 'ಅವನು ಯಾವುದೋ ಅರ್ಜಂಟ್ ಕೆಲಸವನ್ನು ನೆನಪಿಸಿಕೊಂಡು ವಾಪಸ್ಸು ಹೋಗಿರಬೇಕು, ಮೊದಲೇ ಊರಿಗೆಲ್ಲ ಒಬ್ಬನೇ ಬಾಡಿಗೆ ವಾಹನ ನಿರ್ವಹಿಸುತ್ತಿರುವವ, ಯಾರಿಂದ ಕರೆ ಬಂತೋ ಏನೋ, ಆ ವಿಷಯವನ್ನೇ ನಿಮ್ಮ ಬಳಿ ಮಾತಾಡಲು ಮನಸ್ಸಾಗದೇ ಹೋದ ಅಂತ ಯಾಕೆ ತಪ್ಪು ಅರ್ಥೈಸುತ್ತೀರಿ? ಒಂದು ವಾರವಾಯ್ತು ಈ ಘಟನೆ ನಡೆದು, ಹಾಗೇನಾದರೂ ಆಗಿದ್ದರೆ ಇಷ್ಟು ದಿನವೇ ಸುಮೇದನ ಪಾಲಕರಿಂದ ಕಂಪ್ಲೆಂಟು ಬರ್ತಿತಲ್ವೇ?' ಅಂತೇನೋ ಮೀನಾಕ್ಷಿ ಹೇಳಲು ಹೊರಟರು.

ಮಾಸ್ತರ್‍ರು ಅದಕ್ಕೆ ಏನನ್ನೂ ಪ್ರತಿಕ್ರಿಯಿಸದೇ ಸುಮ್ಮನೇ ಕಣ್ಣು ಮುಚ್ಚಿ ಮಲಗಿ ನಿದ್ದೆ ಹೋದಂತೆ ನಟಿಸಿದರು. ಅದನ್ನು ಕಂಡ ಮೀನಾಕ್ಷಿಯೂ ಎದ್ದು ಅಡಿಗೆ ಮನೆಯತ್ತ ಹೆಜ್ಜೆ ಹಾಕಿದರು. ಹೆಂಡತಿ ಅತ್ತ ಹೋದದ್ದೇ ಮಾಸ್ತರ್‍ರು ಕಣ್ಣು ತೆರೆದು ಪುನಃ ಯೋಚಿಸತೊಡಗಿದರು.

ಇದು ಹೀಗೇಕಾಯಿತು, ಎಸ್ಸೆಎಲ್ಸಿ ಕಲಿವ ಸುಮೇದನ ಕನ್ನೆಗೆ ಅದ್ಯಾವ ಘಳಿಗೆಯಲ್ಲಿ ನನ್ನಿಂದ ಚಟೀರನೆ ಆ ಒಂದು ಕಠೋರ ಏಟು ಬಿತ್ತು? ಅವನು ಕೆಳಕ್ಕೆ ಬಿದ್ದು ಚಡಪಡಿಸುತ್ತಿರುವಾಗಲೂ ನನ್ನ ಸಂಶಯ ಪಿಶಾಚಿಯ ಮನಸ್ಸಿನಲ್ಲಿ ಅವನು ನಾಟಕ ಮಾಡುತ್ತಿದ್ದಾನೆ ಅಂತಲೇ ಯಾಕೆ ಅನ್ನಿಸುತ್ತಾ ಹೋಯಿತು? ಹದಿನಾರರ ಪೋರ ಸುಮೇದ ಹ್ಯಾಗೆ ಅವತ್ತು ನನ್ನ ಕಣ್ಣೆದುರೇ ನೆಲಕ್ಕುರುಳಿ ಒದ್ದಾಡಿಬಿಟ್ಟ. ಆ ಹುಡುಗನ ಸಾವಿಗೆ ನಾನೇ ಕಾರಣನಾದೆನೇ ? ಕ್ಲಾಸಿನಲ್ಲಿದ್ದ ಉಳಿದ ವಿದ್ಯಾರ್ಥಿಗಳೆಲ್ಲ ಸೇರಿ ಎತ್ತಿ ಕೂಡಿಸಿದರೂ ಸುಮೇದ ಆಗಲೇ ಅಡ್ಡಗೋಣು ಚೆಲ್ಲಿಬಿಟ್ಟಿದ್ದನಲ್ಲವೇ? ಆಗಲೇ ಅವನ ಉಸಿರೂ ನಿಂತುಬಿಟ್ಟಿತ್ತೇ? ಇಲ್ಲ ಇಲ್ಲ, ಅವನು ಆಸ್ಪತ್ರೆಯಲ್ಲಿ ಕಣ್ಣು ತೆರೆದು ಅವನ ತಾಯಿಯನ್ನು ನೋಡಿ ಏನೋ ಹೇಳಿದನಂತೆ, ಅಂದು ಆ ಅವಸರದ ದಿಗಿಲಿನಲ್ಲಿ ಯಾರೋ ಬಂದು ಹೆಡ್ ಮಾಸ್ಟರೊಂದಿಗೆ ಹೇಳುವುದು ಹೌದೋ ಅಲ್ಲವೋ ಅನ್ನುವಂತೆ ಮಾಸ್ತರ್‍ರಿಗೆ ಕೇಳಿತ್ತು.

ಸುಮೇದ ಏನನ್ನು ಹೇಳಿರಬಹುದು? ಛೆ, ಇದೇ, ಇದೇ ಹಸ್ತದಿಂದ, ಛೇ ಇದೇ ಪಾಪಿ ಹಸ್ತದಿಂದ, ಹ್ಯಾಗೆ ಏಟು ಬಿತ್ತದು, ಇಪ್ಪತ್ತೆಂಟು ವರ್ಷಗಳ ನನ್ನ ಸರ್ವೀಸ್ಸಿನಲ್ಲಿ ಎಷ್ಟೋ ಸಾವಿರ ಮಕ್ಕಳನ್ನು ಹೀಗೇ ಹೊಡೆದು ಬೈದು ಸರೀ ದಾರಿಗೆ ಹಚ್ಚಿದ್ದೇನೆ ಎಂಬ ನನ್ನ ಗರ್ವವೇ ನನಗೆ ಮುಳುವಾಯಿತೇ? ತರಗತಿಗೇ ಮೊದಲ ನಂಬರು ಬರುತ್ತಿದ್ದ, ಎಷ್ಟು ಪ್ರಾಮಾಣಿಕನಾಗಿ ಓದಿಕೊಳ್ಳುತ್ತಿದ್ದ, ಬಹಳ ಬುದ್ಧಿವಂತ ಹುಡುಗ, ಅವನ ಕಣ್ಣಿನಲ್ಲಿ ನನ್ನ ಬಗ್ಗೆ ಅದೆಂಥ ಗೌರವದ ಛಾಯೆ ಕಾಣಿಸುತ್ತಿತ್ತು, ಪಠ್ಯದಲ್ಲಿ ಏನಾದರೂ ಕಠಿಣವಾಗಿದ್ದನ್ನು ಕೇಳುವಾಗ ಅದೆಂಥ ತುಂಬು ವಿನಯ ಅವನ ಮುಖಭಾವದಲ್ಲಿರುತ್ತಿತ್ತು!

ಅಪರೂಪಕ್ಕೊಮ್ಮೆ ಎಂದಾದರೂ ತಪ್ಪು ಉತ್ತರ ನೀಡಿದ ದಿನ ಮುಖದಲ್ಲಿ ಹೇಗೆ ಸಂಕೋಚ ಉಕ್ಕುತ್ತಿತ್ತು. ಅಂದೂ ಸಹ ಅಂಥದೊಂದು ಮುಜುಗರ ಅವನ ಮುಖಭಾವದಲ್ಲಿ ತೆರೆದುಕೊಳ್ಳುತ್ತಿರುವಾಗಲೇ ನಾನು ಅವನ ಕೆನ್ನೆಗೊಂದು ಛಟೀರನೆ ಬಿಟ್ಟಿದ್ದೆ, ಅಂಥ ಎಷ್ಟು ಹೊಡೆತಗಳನ್ನು ಎಷ್ಟೋ ವಿದ್ಯಾರ್ಥಿಗಳಿಗೆ ನಾನು ಈವರೆಗೆ ಹೊಡೆದಿಲ್ಲ ? ಅದೊಂದು ಏಟು ಯಾಕೆ ಸುಮೇದನ; ಅದೂ ನನ್ನ ಅಚ್ಚುಮೆಚ್ಚಿನ ಶಿಷ್ಯನ ಪ್ರಾಣಕ್ಕೇ ಕುತ್ತಾಗಿಹೋಯಿತು? ಸಹಿಸಲಸಾಧ್ಯವಾಗಿ ಜಾರಿ ಹೋದ ಆ ಕಠಿಣ ಕ್ಷಣಗಳನ್ನು ನೆನಪಿಸಿ ಪಶ್ಚಾತ್ತಾಪ ಪಡುತ್ತಲೇ ನಾಯಕ

ಮಾಸ್ತರ್ರು, ಅತ್ತಿತ್ತ ಹೊರಳಾಡಿ ತಮ್ಮನ್ನೇ ತಾವು ಮತ್ತೆ ಮತ್ತೆ ಪ್ರಶ್ನಿಸಿಕೊಂಡರು.

ಒಬ್ಬನೇ ಕೂತು ಎಲ್ಲವನ್ನೂ ಹೊಸದಾಗಿ ಯೋಚಿಸಬೇಕೆನಿಸುತ್ತಿತ್ತು, ಇದರಲ್ಲಿ ನನ್ನ ತಪ್ಪೇನಿದೆ? ಅಥವಾ ಎಲ್ಲವೂ ನನ್ನದೇ ದೌರ್ಬಲ್ಯವೇ? ಇದಕ್ಕೆ ನಾನೇ ಪೂರ್ತಿ ಹೊಣೆಗಾರನೇ? ಎಂದೆಲ್ಲ ತಲೆ ತಿನ್ನುತ್ತಿದ್ದ ನಾನಾ ಬಗೆಯ ಆತಂಕಗಳು ಮಾಸ್ತರ್ರನ್ನು ನಿದ್ದೆಗೆಡಿಸಿ ಅಲ್ಲಾಡಿಸುತ್ತಿತ್ತು. ಈ ಪ್ರಕರಣ ಎಲ್ಲಿಗೆ ಹೋಗಿ ಮುಟ್ಟುತ್ತದೋ ಎಂಬ ಚಿಂತೆ ಅವರನ್ನು ಒಳಗೆಲ್ಲೋ ತೀಕ್ಷ್ಣ ಸುಡಲಾರಂಭಿಸಿತ್ತು. ಯಾವುದೇ ಘಳಿಗೆಯಲ್ಲೂ ನನ್ನ ಮೇಲೆ ಆರೆಸ್ಟ್ ವಾರಂಟ್ ಹಿಡಿದು ಪೋಲೀಸರು ಮನೆ ಬಾಗಿಲಿಗೆ ಬಂದು ನಿಲ್ಲಬಹುದಲ್ಲ ಅಂದೆನಿಸುತ್ತ ಹೋದಹಾಗೇ, ಮರುಕ್ಷಣದಲ್ಲೇ ಥಟ್ಟನೆ ಎದ್ದು ಕೂತ ಅವರು, ಹಾಗೇನಾದರೂ ಆಗಿಯೇ ಬಿಟ್ಟರೆ ಹೆಂಡತಿಗೆ ಹೇಳಿ ಹೋಗಬೇಕಾದ ಉದ್ದ ಪಟ್ಟಿಯನ್ನು ತಮ್ಮ ಮನಸ್ಸಿನೊಳಗೇ ತಯಾರು ಮಾಡಿಕೊಳ್ಳತೊಡಗಿದರು.

ಬ್ಯಾಂಕಿನ ಪಾಸ್ ಬುಕ್ಕು ತೆಗೆದು, ಮೀನಾಕ್ಷಿ ತಿಂಗಳ ಮನೆ ಖರ್ಚಿನ ಹಣ ಇರಿಸುವ ಡಬ್ಬದಲ್ಲಿ ಹಾಕಿಟ್ಟರು. ಮತ್ತು ಚೆಕ್ ಬುಕ್ಕಿನ ಎಂಟ್ಹತ್ತು ಚೆಕ್‌ಗಳಿಗೆ ಒಮ್ಮೆಲೇ ನಡುಗುವ ಕೈಗಳಿಂದಲೇ ಸಹಿ ಗೀಚಿಟ್ಟರು. ಸಹಿ ಮಾಡುವಾಗ ಮಾತ್ರ ಅವರ ಕಣ್ಣು ಮಂಜಾದಂತಾಗಿ ತಮ್ಮ ಹೆಸರಿನ ಮೊದಲಕ್ಷರ ಮಾತ್ರ ಅವರಿಗೆ ಕಂಡಿತು. ಹಾಲು ತರಕಾರಿ ಮೀನು ಹೀಗೆ ಮನೆಗೆ ಬೇಕಾಗುವ ರೇಶನ್ನನ್ನು ತಂದು ಕೊಡಲು ಆ ರಮಾನಂದನೇ ಸರಿ. ಇಷ್ಟು ದಿನ ಅವನೇ ಅಲ್ಲವೇ ಅದಕ್ಕೆಲ್ಲ ಸಹಾಯ ಮಾಡುತ್ತಿದ್ದವ. ನಾನಿಲ್ಲದೇ ಈ ಮನೆಯಲ್ಲಿ ಒಂಟಿಯಾಗಿರುವ ಬದಲು ತನ್ನದೆಲ್ಲ ಕೇಸು ಮುಗಿವತನಕ ಮಗು ಆಶಾಳನ್ನು ಕರಕೊಂಡು ತಾಯಿಯ ಮನೆಗಾದರೂ ಹೋಗಿರು ಅಂತೆಲ್ಲ ಇವಳಿಗೆ ಹೇಳಿಯಾದರೂ ಇಡಬೇಕಲ್ಲ ಎಂಬ ಆತಂಕದೊಂದಿಗೆ ಅವರು ಮೆಲ್ಲಗೆ ಅಡಿಗೆ ಮನೆಯತ್ತ ಹೆಜ್ಜೆ ಹಾಕಿದರು.

ಅಲ್ಲಿ ಮೀನಾಕ್ಷಿ ಇಲ್ಲದ್ದು ಕಂಡು ತುಸು ಅಚ್ಚರಿಯಿಂದಲೇ ಹೊರಬಂದರು. ಹೊರಗೆ ಗೇಟಿನಲ್ಲಿ ಯಾರೊಂದಿಗೋ ಮಾತಾಡುತ್ತ ನಿಂತ ಅವಳನ್ನು ಕಂಡದ್ದೇ ಮಾಸ್ತರ್ರಿಗೆ ಇನ್ನಷ್ಟು ಗಲಿಬಿಲಿಯೆನ್ನಿಸಿತು. ಒಮ್ಮೆಲೇ ಅವಳನ್ನು ಕರೆಯುವ ಹಾಗೂ ಇಲ್ಲ, ಅಥವಾ ತಾನಾದರೂ ಮೊದಲಿನಂತೆ ಅವರಿದ್ದಲ್ಲಿಯೇ ಹೋಗಿ ನಿಂತು ಏನಾದರೂ ಮಾತನಾಡುವ ಮುಖವೂ ನನಗಿಲ್ಲದೇ ಹೋಯಿತಲ್ಲ, ಛೇ, ತಿರುಗಿ ಆ ಮಾತಿನ ಬಾಣ ಸುಮೇದನ ವಿಷಯಕ್ಕೇ ಬಂದು ನನ್ನನ್ನು ಎಲ್ಲ ಖಾಲಿಯಾಗಿಸಿ ಬಿಡುತ್ತದೋ ಅಂತ ಹೆದರಿದ ಮಾಸ್ತರ್ರು, ಹೊರ ಕೋಣೆಯ ಕುರ್ಚಿಯಲ್ಲಿ ದೆಣಪೆಯಲ್ಲಿ ನಿಂತ ಅವರಿಬ್ಬರೂ ಕಾಣುವಂತೆ, ತಮ್ಮ ದೇಹವನ್ನೆಲ್ಲ ಒಂದು ಹಿಡಿಯಲ್ಲಿ ಬಂಧಿಸಿಟ್ಟಂತೆ ಕೂತರು. ತನ್ನ ಮನಸ್ಸಿನ ತುಮುಲವನ್ನೆಲ್ಲ ಯಾರೊಂದಿಗಾದರೂ ಹೇಳಿಕೊಂಡುಬಿಡಬೇಕು ಅನ್ನಿಸುತ್ತಿತ್ತು ಆದರೆ ಮೀನಾಕ್ಷಿಯೊಂದಿಗೆ ಬೇಡ ಅಂತಲೇ ಅನ್ನಿಸುತ್ತಿತ್ತು. ಆಶಾ ಇನ್ನೂ ಚಿಕ್ಕವಳು, ಇದನ್ನು ಹೇಗೆ ಭರಿಸೀತು ಅವಳ ಮನಸ್ಸು?

ಮೀನಾಕ್ಷಿಯೊಂದಿಗೆ ಹೇಳಿದರೆ ಅವಳ ಮನಸ್ಸಿನಲ್ಲಿ ಇನ್ನಷ್ಟು ಗೊಂದಲ ಏರ್ಪಟ್ಟು ನಾಳೆಯ ಚಿಂತೆಯಿಂದ ಅವಳು ಇನ್ನಷ್ಟು ಕುಗ್ಗಿಹೋಗಬಹುದು, ಅವಳಿಗೆ ಸಮಾಧಾನವಾಗುವ ವಿಷಯವಷ್ಟನ್ನೇ ಅವಳೊಂದಿಗೆ ಮಾತಾಡುವುದು ಒಳಿತು. ಅವಳೊಂದಿಗಿನ ಇಂಥ ಸಮಾಧಾನದ ಮಾತಿಗೂ ಕೂಡ ಆ ರಮಾನಂದನೇ ಯೋಗ್ಯವಾಗಿದ್ದ. ಆದರೆ ಇಂದು ಆತನೂ ನನಗೆ ಬೆನ್ನು ಹಾಕಿ ಹೋಗಿಬಿಟ್ಟ, 'ನಿಮ್ಮ ಹೊಡೆತದಿಂದಲೇ ನಾನಿಷ್ಟು ಗಟ್ಟಿಯಾಗಿದ್ದು, ಎಲ್ಲ ಶಿಷ್ಯರೂ ಅವರವರ ದಾರಿಯಲ್ಲಿ ಉದ್ಧಾರ ಅಂತ ಆದದ್ದೇ ಆಗಿದ್ದರೆ, ಅದು ನಾಯಕ ಮಾಸ್ತರ್ರ ಗಣಿತ ಮತ್ತು ವಿಜ್ಞಾನ ಕಲಿಸುವ ವೈಖರಿಯಿಂದ ಮತ್ತು ಅವರು ಕೊಡುವ ಹೊಡೆತಗಳಿಂದ ಅಂತ ಹೇಳುತ್ತಿದ್ದ ರಮಾನಂದ, ಎಷ್ಟು ಬೇಗ ಬದಲಾಗಿಬಿಟ್ಟ!' ಅಲ್ಪ ಸ್ವಲ್ಪ ಜಾಗ್ರತವಾಗಿದ್ದ ಮಾಸ್ತರ್ರ ಆತ್ಮವಿಶ್ವಾಸ ಇದ್ದಲ್ಲೇ ಉಡುಗಿದಂತಾಯಿತು. ಮಾತು ಮರೆತಂತಾಯಿತು.

ಆಗಸದಲ್ಲಿ ಕಪ್ಪು ಮೋಡಗಳು ಖಟ್ ಕಟ್ ಕಟಲ್ ಎಂದು ಗುಡುಗು ಹಾಕುತ್ತಿದ್ದವು. ರಸ್ತೆಯಿಂದ ಅವಸರದಲ್ಲಿ ಬಂದು ಗೇಟು ಹೊಕ್ಕ ನಾಲ್ಕಾರು ಜನ ಕೊಂಚ ನಿಂತು ಮೀನಾಕ್ಷಿಯಲ್ಲಿ ಏನನ್ನೋ ವಿಚಾರಿಸಿದವರೇ ದೊಡ್ಡ ಹೆಜ್ಜೆಯಲ್ಲೇ ತಮ್ಮ ಮನೆಯ ಬದಿ ಬಂದದ್ದನ್ನು ಮಾಸ್ತರ್ರು ಕೂತಲ್ಲಿಂದಲೇ ಗಮನಿಸಿದರು. ಅವರೆಲ್ಲ ಸುಮೇದನ ಮನೆಯವರೇ ಅಂತ ಅವರಿಗೆ ಪಕ್ಕನೆ ಅನಿಸಿಹೋಯಿತು. ತಾನು ಹಾಗೇ ಕುಳಿತಿರಲೋ ಅಥವಾ ಒಳಗೆದ್ದು ಹೋಗಲೋ ತಿಳಿಯದೇ ಅವರು ಚಡಪಡಿಸಿಹೋದರು. ಮುಂದೊದಗುವ ಅನಾಹುತಗಳನ್ನೆಲ್ಲ ಬಂದಂತೆ ಸ್ವೀಕರಿಸುವ ಹಂತಕ್ಕೆ ಮಾಸ್ತರ್ರ ಮನಸ್ಸು ಜಡವಾಗಿತ್ತು. ಅತ್ತಿತ್ತ ನೋಡುವುದರೊಳಗೆ ಅವರೆಲ್ಲ ಬಂದು ತಮ್ಮ ಸುತ್ತಲೂ ಕೂತೇ ಬಿಟ್ಟದ್ದು ಮಾಸ್ತರ್ರಿಗೆ ಉಸಿರುಕಟ್ಟಿಸುವಂತಾದರೂ ತಗ್ಗಿದ ತಲೆಯನ್ನು ಮೇಲೆತ್ತಲು ಅವರಿಗೆ ಸಾಧ್ಯವಾಗಲಿಲ್ಲ. ಕ್ಷಮಿಸಿ ಅಂತಲಾದರೂ ಯಾವ ಬಾಯಲ್ಲಿ ಕೇಳಿಕೊಳ್ಳುವುದು? ಇದು ಯಾರೂ ಸಹಜವಾಗಿ ಕ್ಷಮಿಸುವಂಥ ಸಂಗತಿಯೇ ಅಲ್ಲ, ನಾನು ಎಲ್ಲದಕ್ಕೂ ತಯಾರಿರಬೇಕು, ಇನ್ನೊಬ್ಬರ ಮನೆಯ ಹಸುಗೂಸನ್ನು ಹೀಗೆ ವಿನಾಕಾರಣ ತಿಂದುಕೂತಂತೆಯೇ ಅಲ್ಲವೇ ಇದು? ಪಶ್ಚಾತ್ತಾಪದ ನಿತಾಂತ ಯಾತನೆಯೊಂದು ಅವರ ಪಾಲಿಗೆ ಗಂಟಲಿನಲ್ಲಿ ಕೂತ ವಿಷವಾಗಿ ಪರಿಣಮಿಸಿತ್ತು.

ಎದುರು ಕೂತ ಸುಮೇದನ ಚಿಕ್ಕಪ್ಪ ಮೆಲ್ಲಗೆ ಬಾಯಿಬಿಟ್ಟಿದ್ದ 'ಮಾಸ್ತರ್ರೇ, ಇಷ್ಟು ಬೇಸರ ಮಾಡ್ಕೊಬ್ಯಾಡಿ, ರಮಾನಂದ ಹೇಳಿದ ಮೂರು ದಿನದಿಂದ ನೀವು ಶಾಲೆಗೂ ಹೋಗಿಲ್ಲಂತೆ, ಎಷ್ಟೊಳ್ಳೆ ಮಾಸ್ತರ್ರು ನೀವು, ನಿಮ್ಮ ತರಬೇತಿ ಮಕ್ಕಳಿಗೆ ಅಗತ್ಯ, ಎಸ್ಸೆಸೆಲ್ಸಿ ಮಕ್ಕಳ ಪರೀಕ್ಷೆಗಳು ಹತ್ತಿರ ಬಂತು, ಏಳಿ ಸರ್ ನೀವು ಹೀಗೆ ಕೂತಿದ್ದು ನಮ್ಮಿಂದ ನೋಡಲಾಗುತ್ತಿಲ್ಲ' ಎಂದೆಲ್ಲ ಆತ ಸಣ್ಣ ಸ್ವರದಲ್ಲಿ ಮುಂದುವರೆಸಿದ್ದ. ತಕ್ಷಣ ಮಾಸ್ತರ್ರೊಳಗೆ ತುಂಬಿದ ಮೋಡವೊಂದು ಕಳಚಿಬಿದ್ದಂತಾಗಿ, ಒಮ್ಮೆಲೇ ದುಃಖದ ಕಟ್ಟೆಯೊಡೆದು ಕೂತಲ್ಲೇ ಎರಡೂ ಹಸ್ತಗಳಿಂದ ಮುಖ ಮುಚ್ಚಿ ಬಿಕ್ಕಳಿಸಿದರು. ಅದನ್ನು ನೋಡಲಾಗದೇ ಅವರೆಲ್ಲ ಥಟ್ಟನೆ ಎದ್ದು ನಿಂತರು. ಸ್ಥಿತಪ್ರಜ್ಞರಾಗಿ ಕೂತ ಸುಮೇದನ ತಂದೆ ತುಸುವೇ ಮುಂದಕ್ಕೆ ಜರುಗಿ 'ನಾಳೆಯೇ ಶಾಲೆಗೆ ಹೊರಡಿ ಮಾಸ್ತರ್ರೇ, ಏನೂ ಯೋಚನೆ ಮಾಡಬೇಡಿ, ಶಾಲೆಯಲ್ಲಿ ಮಕ್ಕಳು ಕಾಯ್ತಿವೆ' ಎನ್ನುತ್ತ ಒಮ್ಮೆ ಮಾಸ್ತರ್ರ ಹೆಗಲು ಸವರಿ ತುಂಬಿಬರುತ್ತಿದ್ದ ಕಣ್ಣಿನೊಂದಿಗೆ ಗೇಟಿನೆಡೆ ನಡೆದಿದ್ದರು.

ಹರೆಯದ ಮಗನನ್ನು ಕಳಕೊಂಡ ಒಬ್ಬ ತಂದೆಯ ಭಾವನಾತ್ಮಕ ನೋವಿಗಿಂತ ಹೆಚ್ಚಾಗಿ ಉಳಿದ ವಿದ್ಯಾರ್ಥಿಗಳನ್ನು ಬೆಳೆಸುವ ಮಾಸ್ತರ್ರ ಮಹತ್ವವೇ ಹೆಚ್ಚೆಂದು ಸಾರುವ ಆ ಪ್ರಕರಣ ಮೀನಾಕ್ಷಿಯಲ್ಲಿ ಒಂದು ರೀತಿಯ ಅಲೌಕಿಕ ಅನುಭೂತಿಯನ್ನು ಉಕ್ಕಿಸಿತ್ತು. ಮನುಷ್ಯ ಮಾತ್ರರಿಂದ ಇದು ಸಾದ್ಯವೇ? ಎಂಬ ಬೆರಗು ಅವಳನ್ನು ತಟ್ಟಿ ಅಲ್ಲಾಡಿಸಿತ್ತು. ಎಲ್ಲ ಒಳ್ಳೆಯತನಗಳನ್ನೂ ಮೀರಿದ ಗಂಡನ ವ್ಯಕ್ತಿತ್ವ ಅವಳ ಚಿತ್ತದಲ್ಲಿ ಇನ್ನಷ್ಟು ಎತ್ತರಕ್ಕೆ ಏರಿತ್ತು. ಹೊರಗೆ ಮಳೆ ಸುರಿಸಿದ ಮುಗಿಲು ಪರಿಶುಭ್ರಗೊಂಡಿತ್ತು. ಆರ್ದ್ರಗೊಂಡ ಕಣ್ಣಿನಿಂದ ಮಾಸ್ತರ್ರು ಆ ಮುಗಿಲನ್ನೇ ತದೇಕ ದಿಟ್ಟಿಸಿದರು. ಸುಮೇದ ಅಂಥದೊಂದು ಎತ್ತರದ ಜಾಡು ಹಿಡಿದು ನಡೆದಿದ್ದ.



**(ಧಾರವಾಡದಲ್ಲಿ ನೆಲೆಸಿರುವ, ಮೂಲತಃ ಉ.ಕ. ದವರಾದ ಸುನಂದಾ ಕಡಮೆ ಕನ್ನಡದ ಪ್ರಮುಖ ಕವಿ–ಕಥೆಗಾತಿ–ಪ್ರಬಂಧಕಾರರಾಗಿದ್ದಾರೆ)**

## ಕುಪ್ಪಳ್ಳಿಯಲ್ಲಿ ಸಮಾಜವಾದಿ ಅಧ್ಯಯನ ಶಿಬಿರ

**ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಪ್ರತಿ ವರ್ಷದಂತೆ ಈ ವರ್ಷವೂ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದೊಂದಿಗೆ ಈ ಅಕ್ಟೋಬರ್ ೨೭ ಹಾಗೂ ೨೮ರಂದು) ಕುಪ್ಪಳ್ಳಿಯಲ್ಲಿ ತನ್ನ ವಾರ್ಷಿಕ ಆಧ್ಯಯನ ಶಿಬಿರವನ್ನು ಏರ್ಪಡಿಸಿದೆ. ಈ ಶಿಬಿರದ ವಿಷಯ : 'ರಾಷ್ಟ್ರೀಯತೆಯ ಅರ್ಥ–ಅಪಾರ್ಥಗಳು'.**

**ಈ ಶಿಬಿರದಲ್ಲಿ ನಾಡಿನ ಹಿರಿಯ ಚಿಂತಕರು ಉಪನ್ಯಾಸಗಳನ್ನು ನೀಡಿ ಚರ್ಚೆಗಳನ್ನು ನಡೆಸಿಕೊಡುವರು. ಎರಡೂ ದಿನಗಳ ಕಾಲ ಶಿಬಿರದಲ್ಲಿ ಪೂರ್ತಿ ಭಾಗವಹಿಸುವ ಸಮಯಾವಕಾಶವಿರುವವರು ಮಾತ್ರ ಶಿಬಿರಾರ್ಥಿಗಳಾಗಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು.**

**೨೬ರ ರಾತ್ರಿಯ ಊಟದಿಂದ ಹಿಡಿದು ೨೮ರ ಸಂಜೆಯ ಚಹಾದವರೆಗೆ ಸಾಮೂಹಿಕ ವಸತಿ ಮತ್ತು ಊಟೋಪಹಾರಗಳ ವ್ಯವಸ್ಥೆ ಮಾಡಲಾಗುವುದು. ಶಿಬಿರ ಶುಲ್ಕ ಒಬ್ಬರಿಗೆ : ರೂ. ೩೦೦/– ವಿದ್ಯಾರ್ಥಿಗಳಿಗೆ: ರೂ ೨೦೦/– ವಸತಿ ಸೀಮಿತವಾಗಿರುವುದರಿಂದ ಆಸಕ್ತರು ಕೂಡಲೇ ಹೆಸರು ನೋಂದಾವಣೆ ಮಾಡಿಕೊಳ್ಳಬೇಕು. ಮುಂಚಿತವಾಗಿ ಹೆಸರು ನೋಂದಾಯಿಸಿಕೊಳ್ಳದವರಿಗೆ ಶಿಬಿರಕ್ಕೆ ಪ್ರವೇಶವಿಲ್ಲ**

**ಹೆಸರು ನೋಂದಾವಣೆಗಾಗಿಸಂಪರ್ಕ ದೂರವಾಣಿ ಸಂಖ್ಯೆಗಳು:**

**೯೭೩೧೯೨೯೭೩೧ / ೯೪೮೦೧೪೧೯೮೪ / ೯೪೮೧೩೫೧೦೭೯.**

**ಡಿ.ಎಸ್. ನಾಗಭೂಷಣ**

**ಅಧ್ಯಕ್ಷರು : ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ**

# ನವಿಲುಗರಿ



## ಗಾಂಧಿ ಸಾವಿನಲ್ಲೂ ನಕ್ಕವರು



ನನ್ನ ಕೊಲ್ಲಲೆಂದು ಮಸೆದ ಖಡ್ಗ ನನ್ನ ಕೈಗೆ ತಂದುಕೊಡಿ
ನಾನೇ ತಿವಿದುಕೊಳ್ಳುತ್ತೇನೆ ನಿಮ್ಮ ಹೆಜ್ಜೆ ಗುರುತು ಸಿಗದ್ದಾಗೆ
ಏಕೆಂದರೆ ನೀವು ದೇಶ ಭಕ್ತರು ಗಾಂಧಿ ಸಾವಿನಲ್ಲೂ ನಕ್ಕವರು

ಯಾಕೆ ವಿಷದ ಬಾಟಲಿ ಹಿಡಿದುಕೊಂಡು ತಿರುಗುತ್ತಿರುವಿರಿ
ನನ್ನ ಕೈಗೆ ತಂದುಕೊಡಿ ನಾನೇ ಕುಡಿದು ಮಲಗಿಬಿಡುತ್ತೇನೆ
ನಿಮ್ಮ ಬೆರಳ ಗುರುತು ಯಾವ ಪುರಾವೆಗೆ ಸಿಗದ್ದಾಗೆ
ಏಕೆಂದರೆ ನೀವು ಸಾಧ್ವಿಗಳು ಕೊಲ್ಲುವುದೇ ನಿಮ್ಮ ಧರ್ಮಪಾಠವಂತೆ

ಒಂದು ತುಂಡು ರೊಟ್ಟಿಗಾಗಿ ಹಸಿದವರ ಲೋಕ ದೊಡ್ಡದಾಗಿದೆ
ನೀವು ದೇವರ ಹೆಸರಿನಲ್ಲಿ ಚರಂಡಿ ತುಂಬುವಷ್ಟು ಅನ್ನ ಚೆಲ್ಲಿದ್ದೀರಿ
ತಲೆಗೆ ಎಣ್ಣೆ ಕಾಣದ ಬಡವರ ಮುಂದೆ ತುಪ್ಪ ಸುಟ್ಟಿದ್ದೀರಿ
ಆದರೂ ದೇಶಭಕ್ತರು ನೀವು ನಿಮ್ಮ ಯಜ್ಞದ ಕುಂಡ
-ದಲ್ಲಿ ಕುದ್ದು ಹೋದವರು ನಾವು

ಇಲಿ ತಿಂದು ಬಿಟ್ಟ ಪಂಚಾಂಗ ಹಿಡಿದುಕೊಂಡು
ನಿಮ್ಮ ಹಣೆಬರಹ ತಿದ್ದಿಕೊಳ್ಳದೆ ಕಂಡವರ ಭವಿಷ್ಯ
-ಕ್ಕೆ ಕೈ ಹಿಡಿದುಕೊಂಡು ಕಾಲ ಮರೆತವರು ನೀವು



ಸುಮ್ಮನೆ ಇರಲಾರದೆ ತುಕ್ಕು ಹಿಡಿದ ತಲ್ವಾರ್ ಗಳಿಗೆ
ಸಾಣೆ ಹಿಡಿಯುವ ಕೆಟ್ಟ ಯೋಚನೆ ಬಿಟ್ಟು ಬಿಡಿ
ನಾಳೆ ನೀವೇ ಮಸೆದ ಖಡ್ಗ ತಲ್ವಾರ್ ಚೂರಿ ಹಸಿದ
ಮಬ್ಬಿನಲ್ಲಿ ನಿಮ್ಮ ರಕ್ತ ಕೇಳುವ ಕಾಲ ಬರಬಹುದು

ಏಕೆಂದರೆ ನೀವು ದೇಶಭಕ್ತರು ಗಾಂಧಿ ಸಾವಿನಲ್ಲೂ ನಕ್ಕವರು

**-ಸಿ.ಬಿ. ಚಿಲ್ಕರಾಗಿ**

## ವಿಳಾಸ



ಗುರುತೇ ಮೂಡದ
ಹೆಜ್ಜೆಗಳ
ಗುರುತಿಡುವುದು ಹೇಗೆ
ಲೆಕ್ಕವಿಡುವುದಾದರೂ
ಹೇಗೆ...!

ಮೈಲಿಗೊಂದು ಕಲ್ಲನಿಟ್ಟು
ಆಚೆಗೊಂದು ಕಂಬನೆಟ್ಟು
ಬಾವುಟ ಹಾರಿಸುವುದಾದರೂ
ಹೇಗೆ...!

ನೆನಪೇ ಇರದ ತಿರುವುಗಳಿಗೆ
ಎಂದೂ ತೋಚದ ದಿಕ್ಕುಗಳಿಗೆ
ಹೆಸರನಿಡುವುದಾದರೂ
ಹೇಗೆ...!

ಮೂಡಿಯೇ ಇಲ್ಲದ ಗುರುತಗಳ
ಅಳೆಯುವುದು ಹೇಗೆ
ಅಳಿಸುವುದಾದರೂ
ಹೇಗೆ...!



ನಿಂತ ನೆಲ
ಹೊರಟ ದಾರಿ
ಗಮ್ಯವೂ ಅಗೋಚರ
ಗುರುತಿಡುವುದು ಹೇಗೆ
ವಿಳಾಸವಿರುವುದಾದರೂ
ಹೇಗೆ...!

**-ಕಾವ್ಯಶ್ರೀ ಹೆಚ್.**

## ಬದುಕಿಯೂ ಸತ್ತಂತೆ...

ಹಾಲಿಗೆ ನೀರು ಬೆರೆತರೆ
ಅರಿಯಬಹುದಲ್ಲದೆ
ನೀರಿಗೆ ನೀರು ಬೆರೆತರೆ
ಅರಿಯಬಹುದೇ ಅಯ್ಯ!

ಮುಖದಲಿ ನಗುವ ಧರಿಸಿದರೆ
ನೋಡಬಹುದಲ್ಲದೆ ಮನದಲ್ಲಿನ
ನಗುವನರಸಬಹುದೇ ಅಯ್ಯಾ!

ಒಡಲಬೇನೆಯದು ಮುಖದಲ್ಲಿ ಒಡಮೂಡೆ
ಕಣ್ಣಲ್ಲಿ ಕಾಣಬಹುದಲ್ಲದೆ
ಕಿವಿಯಾರೆ ಕೇಳಬಹುದೇ ಅಯ್ಯಾ!

ಕೃಪಣರ ಕೈಗಿತ್ತ
ಕೃಪಾಣದ ಅರಿವನೆತ್ತ
ಅರಿಯಬಲ್ಲರಯ್ಯಾ!



ಬದುಕಿನೆದೆರು ನಿಂತರೂ
ಸಾವ ನೆನೆದು ಸಾಯುವಂತೆ
ನಾವಿದ್ದೇವಯ್ಯಾ!

**-ಬಾ.ಹ. ರಮಾಕುಮಾರಿ**



ರೇಖಾ ಚಿತ್ರಗಳು: **ವಿಜಯಶ್ರೀ ಹಾಲಾಡಿ**

## ಜಡತೆ



ಜಡಗೊಂಡಿದೆ
ಮಿಸುಕಾಡುವುದೂ ಕಷ್ಟ

ಮಾತಿಗೆ ಬಗ್ಗದ
ಚಾಟಿಗೆ ಹೆದರದ
ಚಾವಟಿಗೆಯ ವ್ಯಾಪಾರ

ಲಾಭದ ಲೆಕ್ಕದಲ್ಲಿ
ಲೋಕವ ಮರೆತು
ಮೆರೆಯುತ್ತಾರೆ.
ಚಾಟಿ ಹಿಡಿದವರೇ
ಸೋತು ಹುಚ್ಚರಾಗುತ್ತಾರೆ



ಸದಾ ಅನಸ್ತೇಶಿಯ ಮದ್ದನ್ನ
ಚುಚ್ಚಿಕೊಂಡು
ನಿಸ್ತೇಜವಾಗಿರುತ್ತದೆ
ಕಲ್ಲು ಗುಂಡಾಗಿರುತ್ತದೆ
ಅವರ ಒಡಲು
ಹೃದಯದ ಗೊಡವೆ ಇಲ್ಲದೆ.

**-ಪ್ರಕಾಶ್ ಮರ್ಗನಳ್ಳಿ**

# ಸಾಹಿತ್ಯ, ಸಹಿಷ್ಣುತೆ, ಸನ್ಮಾನ ಇತ್ಯಾದಿ ಕೆಲವು ಬಿಡಿ ಟಿಪ್ಪಣಿಗಳು

## ಪ್ರಸನ್ನರ ಹೇ ರಾಮ್ !



ಈಗ ಬೆಂಗಳೂರಿನ 'ಗ್ರಾಮಸೇವಕ ಸಂಘ'ದ ಪ್ರಸನ್ನರಾಗಿರುವ ನಮ್ಮ ಹೆಗ್ಗೋಡಿನ ಪ್ರಸನ್ನರ ಇತ್ತೀಚಿನ ಖಯಾಲಿ ಎಂದರೆ, 'ಹೇ ರಾಮ್!' ದೇಶದಲ್ಲಿ ಬೆಳೆಯುತ್ತಿರುವ ಅಸಹಿಷ್ಣುತೆ ಈಗ ಅವರನ್ನು ಬಹುವಾಗಿ ಕಾಡಿದೆ. ಮೊನ್ನೆ ತಾನೆ 'ಕೈಉತ್ಪನ್ನಗಳ ಮೇಲಿನ ತೆರಿಗೆ ಇಳಿಸಿ' ಹೋರಾಟ ಮಾಡುತ್ತಿದ್ದರಲ್ಲ ಈ ಪ್ರಸನ್ನ? ಎಂದು ಯಾರಾದರೂ ಕೇಳಿದರೆ, ಅದರ ವಿಸ್ತರಣೆಯೇ ಈ 'ಹೇ ರಾಮ್!' ಎಂದಾರು ಅವರು! ಏನಾದರೂ ಮಾಡುತ್ತಾ ಸದಾ ಸುದ್ದಿಯಲ್ಲಿರಬಯಸುವ ಕರ್ನಾಟಕದ 'ಜನಪರ'ವೆಂದು ಹೇಳಲಾಗುವ ಹೋರಾಟ ಕ್ಷೇತ್ರದ ಈ ಹಳೆಯ ಕುದುರೆಯ ಓಟದ ಗಮ್ಯ ಯಾವುದೆಂಬುದು ಯಾರಿಗೂ–ಬಹುಶಃ ಅವರಿಗೂ ತಿಳಿಯದು! ಏಕೆಂದರೆ ಒಮ್ಮೆ ನೋಡಿದಾಗ ಇದ್ದ ಅವರ ವೇಷ, ಘೋಷಣೆ, ಗುರಿ, ಸುತ್ತಲಿನ ಜನ ಇನ್ನೊಮ್ಮೆ ನೋಡಿದಾಗ ಇರುವುದಿಲ್ಲ. ನೇಕಾರರ ಸಂಘಟನೆ, ಬದನವಾಳು ಸತ್ಯಾಗ್ರಹ, ಸುಸ್ಥಿರ ಅಭಿವೃದ್ಧಿ, ಗ್ರಾಮಸ್ವರಾಜ್ಯದಿಂದ ಹಿಡಿದು ಈಗ 'ಹೇರಾಮ್' ತಲುಪಿ ನಾವೂ ಅವರನ್ನು ನೋಡಿ ; 'ಹೇ ರಾಂ!' ಎನ್ನುವಂತಾಗಿದೆ!. ಆದರೆ ಅವರನ್ನು ಕೇಳಿ. ಇವೆಲ್ಲ ಒಂದೇ ಗುರಿಯೆಡೆಗೆ ಪಯಣ ಎನ್ನುತ್ತಾರೆ. ಒಂದೇ ಗುರಿಯಾದರೆ ಈ ನೆಗೆತ–ಜಿಗಿತಗಳೇಕೆ? ಬೇರೆ ಬೇರೆ ಬ್ಯಾನರ್‌ಗಳೇಕೆ? ಹಾಗೆಂದೇ, ಮೇಲೆ ಅವರ ಬಗ್ಗೆ ನಾನು 'ಖಯಾಲಿ' ಎಂಬ ಶಬ್ದ ಬಳಸಿದ್ದು. ಸ್ವಲ್ಪ ಕಾಲ ಅವರ ಜೊತೆಯಲ್ಲಿದ್ದ ನಾನಂತೂ ಸುಸ್ತಾಗಿದ್ದೇನೆ. ಸುಸ್ತಾಗಿರುವ ಇತರ ಹಲವರನ್ನೂ ಕಂಡಿದ್ದೇನೆ. ಜೊತೆಯವರು ಸುಸ್ತಾದಷ್ಟೂ ಪ್ರಸನ್ನರ ಉತ್ಸಾಹ ಹೆಚ್ಚುತ್ತಾ ಹೋಗುವಂತೆ ಕಾಣುತ್ತದೆ.

ಇತ್ತೀಚೆಗೆ ಪ್ರಸನ್ನರ 'ಗ್ರಾಮಮಸೇವಕ ಸಂಘ' ಮತ್ತು ಗಣೇಶ್‌ದೇವಿಯವರ 'ದಕ್ಷಿಣಾಯನ' ಸೇರಿ ಬೆಂಗಳೂರಿನಲ್ಲಿ ದೇಶದಲ್ಲಿ ಹೆಚ್ಚುತ್ತಿರುವ 'ಅಸಹನೆ' ಕುರಿತು ಅಖಿಲ ಭಾರತ ಸಾಹಿತ್ಯ ಸಮ್ಮೇಳನವೊಂದನ್ನು ಏರ್ಪಡಿಸಿದ್ದವು, (ಪ್ರಸನ್ನ ಇದ್ದೆಡೆ 'ಅಖಿಲ ಭಾರತ'ದ ಬೋರ್ಡು ಇರಲೇಬೇಕು!) ನನಗೂ ಆಹ್ವಾನವಿತ್ತು. ಅಂದೇ ನನಗೆ ಬೆಂಗಳೂರಿನಲ್ಲಿ ಬೇರೆ ಪೂರ್ವನಿಯೋಜಿತ ಕೆಲಸವಿದ್ದುದರಿಂದ ಈ ಸಮ್ಮೇಳನವನ್ನೂ ಒಮ್ಮೆ ನೋಡಿ ಬರೋಣವೆಂದು ಅಲ್ಲಿಗೆ ಹೋದೆ. ಸಭೆಯಲ್ಲಿ ನನ್ನನ್ನು ಕಂಡೊಡನೆ ಸಭೆಯ ನಿರ್ವಾಹಕರಾಗಿದ್ದ ಮಿತ್ರ ಚೆನ್ನಿವರು, 'ನೀವು ಮಾತಾಡಬೇಕು' ಎಂದು ಒತ್ತಾಯಿಸಿ ನನ್ನ ಹೆಸರನ್ನು ಪ್ರಕಟಿಸಿಯೇಬಿಟ್ಟರು. ಯಾವುದೇ ಸಿದ್ಧತೆಯಿಲ್ಲದ ನಾನು ನಿರ್ವಾಹವಿಲ್ಲದೆ ಎರಡು ನಿಮಿಷ ಮಾತಾಡಬೇಕಾಯಿತು. ಅಲ್ಲಿ ನಾನು ಹೇಳಿದ್ದಿಷ್ಟೇ: 'ಬಲಪಂಥೀಯರ ಅಸಹನೆಯ ಬಗ್ಗೆ ಚಿಂತಿತರಾದವರು ಇಲ್ಲಿ ಸೇರಿದ್ದೇವೆ. ನಾನು ೪೦ ವರ್ಷಗಳಿಂದ ಎಡಪಂಥೀಯರ ಸಹವಾಸದಲ್ಲಿದ್ದೇನೆ. ಈ ಸಹವಾಸ ನನ್ನನ್ನು ನಿಜವಾಗಿಯೂ ಸುಸ್ತು ಮಾಡಿದೆ. ಕಾರಣ. ಇವರ ಅಸಹನೆಯೇನೂ ಕಡಿಮೆಯಲ್ಲ. ಆದ್ದರಿಂದ ಎಲ್ಲಿಯವರೆಗೆ ನಮ್ಮ ಎಡಪಂಥೀಯರು ಗಾಂಧಿಯನ್ನು ನಮ್ಮ ನಡುವಿನ ನಿಜವಾದ ಎಡಪಂಥೀಯ ಎಂದು ಮನವರಿಕೆ ಮಾಡಿಕೊಂಡು ಇಂದಿಗೆ ಬೇಕಾದ ಆ ಗಾಂಧಿಯನ್ನು ಕಂಡುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಯಾವುದೇ ಅಸಹಿಷ್ಣುತೆಯನ್ನು ಎದುರಿಸಲು ಸಾಧ್ಯವಿಲ್ಲ.'

ಇದರೊಂದಿಗೆ ನನಗೆ ಹೇಳಬೇಕೆನಿಸಿದ; ಆದರೆ ಹೇಳಲಾಗದಿದ್ದ ಮಾತುಗಳು ಅಂದು ಪ್ರಸನ್ನ ಮತ್ತು ನಮ್ಮ ಚೆನ್ನಿ ಸೇರಿದಂತೆ ಇತರ ಕೆಲವರು ಗಾಂಧಿ ಟೋಪಿ ಧರಿಸಿ ಓಡಾಡುತ್ತಿದ್ದುದನ್ನು ಕಂಡು ಅನ್ನಿಸಿದ ತಮಾಷೆಗೆ ಸಂಬಂಧಿಸಿದ್ದು. ನಮ್ಮಂಥವರು ಇಂದು ಸಾರ್ವಜನಿಕವಾಗಿ ಗಾಂಧಿ ಟೋಪಿ ಧರಿಸಲು ನಿಜವಾಗಿ ತುಂಬ 'ಧೈರ್ಯ' ಬೇಕಾಗುತ್ತದೆ; ಎರಡು–ಮೂರು ಬಾರಿ ಯೋಚಿಸಬೇಕಾಗುತ್ತದೆ. ನಮ್ಮೊಳಗೇ ಹಲವು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾಗುತ್ತದೆ. ಇವರೆಲ್ಲ ಆ ಪ್ರಶ್ನೆಗಳನ್ನು ಕೇಳಿಕೊಂಡೇ ಆ ಟೋಪಿ ಧರಿಸಿದ್ದರೆ? ಇವರ ಮುಂದಿನ ದಿನಗಳ ಹೆಜ್ಜೆಗಳಷ್ಟೇ ಈ ಪ್ರಶ್ನೆಗೆ ಉತ್ತರ ಹೇಳಿಯಾವು.

ಪ್ರಸನ್ನರ ಸಂಪರ್ಕ ಜಾಲ ತುಂಬ ದೊಡ್ಡದು; ಅವರು ಇಂತಹ ಸಭೆಗಳನ್ನು ಸಂಘಟಿಸುವಲ್ಲಿ ನಿಷ್ಣಾತರು. ಅವರ ಜೊತೆಗೀಗ ಮುಗ್ಧ ಯುವ 'ಗಾಂಧಿವಾದಿ'ಗಳೊಂದಿಗೆ ಎಲ್ಲ ಛಾಯೆಗಳ ಎಡಪಂಥೀಯರೂ ಸೇರಿಕೊಂಡಿದ್ದಾರೆ. ಕಾರ್ನಾಡರಂತಹ 'ನವ ಎಡಪಂಥೀಯ'ರೂ ಸೇರಿದಂತೆ! ಮೋದಿ ಅಥವಾ ಸಂಘ ಪರಿವಾರ ಎಂಬ ಸಾಮಾನ್ಯ ಶತ್ರು ಸ್ಪಷ್ಟವಾಗಿ ಕಣ್ಣಿಗೆ ಬೀಳುತ್ತಿರುವವರೆಗೆ ಎಲ್ಲ ಸರಿಯಿದ್ದೀತು. ಆ ಚಿತ್ರ ಸ್ವಲ್ಪ ಅಸ್ಪಷ್ಟವಾಗತೊಡಗಿದೊಡನೆ ಪ್ರಸನ್ನ ಇನ್ನೊಂದು ಘೋಷಣೆ, ಇನ್ನೊಂದು ವೇಷ ಕಂಡುಕೊಳ್ಳಬೇಕಾದೀತು! ಇದೇ ಅವರ ಜೊತೆ ಹೆಜ್ಜೆ ಹಾಕಿದವರ, ಹಾಕುತ್ತಿರುವವರ, ಹಾಕಬಯಸುವವರ ಸಮಸ್ಯೆ. ನಿಜ ಹೇಳಬೇಕೆಂದರೆ, ನನಗೆ ಕಂಡಂತೆ ಇದು ಪ್ರಸನ್ನರ ವ್ಯಕ್ತಿತ್ವದ ಸಮಸ್ಯೆ. ಅದು ನೀಗುವವರೆಗೆ ಅವರ ಈ ಯಾತ್ರೆ ನಡೆದೇ ಇರುತ್ತದೆ. ಇಂತಹ ಯಾತ್ರೆಯ ಭಾಗವಾಗಿ ಪ್ರಸನ್ನರದ್ದೂ ಸೇರಿ ಎಲ್ಲರ ಅಸಹಿಷ್ಣುತೆ ನೀಗುವಂತಾದರೆ ಅದೊಂದು ದೊಡ್ಡ ಸಾಧನೆಯೇ. ಅದರೆಲ್ಲ ಕೀರ್ತಿಯನ್ನೂ ಪ್ರಸನ್ನರಿಗೇ ಕೊಡೋಣ.

## 'ಪ್ರಗತಿಪರ'ರ ಅಸಹಿಷ್ಣುತೆ



ಬೆಂಗಳೂರಿನ ಈ ಸಮ್ಮೇಳನದ ಒಂದು ವಾರದ ನಂತರ ಮೈಸೂರಿನಲ್ಲಿ ಅಭಿರುಚಿ ಪ್ರಕಾಶನದವರು ಆಯೋಜಿಸಿದ್ದ 'ತೇಜಸ್ವಿ–೮೦' ಕಾರ್ಯಕ್ರಮ. ಅದರಲ್ಲಿ 'ತೇಜಸ್ವಿಯವರ ಹೊಸ ವಿಚಾರಗಳು' ಕುರಿತು ನಾನು ಮಾತನಾಡಿದ ಗೋಷ್ಠಿಯ ನಂತರ ಕಾರ್ಯಕ್ರಮದ ಸಮಾರೋಪದ ನುಡಿಗಳನ್ನಾಡಲು ಅನಿರೀಕ್ಷಿತವಾಗಿ ಬಂದವರು ಗೆಳೆಯ ಮತ್ತು ಮಾಜಿ ಅಡ್ವೊಕೇಟ್ ಜನರಲ್ ಪ್ರೊ. ರವಿವರ್ಮ ಕುಮಾರ್. ಅವರು ತಮ್ಮ 'ನುಡಿ'ಗಳನ್ನು ತೇಜಸ್ವಿಯವರೊಡನೆಯ ತಮ್ಮ ಒಡನಾಟದ ಎರಡು ಲಘು ಪ್ರಸಂಗಗಳನ್ನು ಹೇಳಿ, ತಮ್ಮ ರಾಜಕೀಯ ಭಾಷಣ ಆರಂಭಿಸಿದರು. ಇಂದು ಅಘೋಷಿತ ತುರ್ತು ಪರಿಸ್ಥಿತಿಯ ವಾತಾವರಣವಿದ್ದು ಹೇಗೆ ತೇಜಸ್ವಿಯವರು ೭೦ರ ದಶಕದ ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಡಿದರೋ(?) ಹಾಗೆ ಇಂದು ಜನ ಮೋದಿ ಆಡಳಿತದ ವಿರುದ್ಧ ಹೋರಾಡಿ ಮುಂದಿನ ಚುನಾವಣೆಗಳಲ್ಲಿ ಅವರನ್ನು ಸೋಲಿಸುವಂತೆ ಕರೆ ಕೊಡಲಾರಂಭಿಸಿದರು. ಸಭೆಯಲ್ಲಿದ್ದ ಕೆಲವರಿಗೆ ಇದು ಇಷ್ಟವಾಗದೆ ಗದ್ದಲ ಎಬ್ಬಿಸಿದರು. ಇದರಿಂದ ಸುಧಾರಿಸಿಕೊಂಡ ರವಿವರ್ಮ ತಮ್ಮ ಭಾಷಣವನ್ನು ಮತ್ತಷ್ಟು ವಿಪರೀತಕ್ಕೊಯ್ದಾಗ ಸ್ವತಃ ನಾನೇ ಅವರಿಗೆ 'ಇದು ಅತಿಯಾಯಿತು' ಎಂದು ಕೂಗಿ ಹೇಳಿದೆ. ಅವರು ಅಸಮಧಾನದಿಂದಲೇ ಭಾಷಣ ಮುಗಿಸಿ ಸಭೆಯಿಂದ ನಿರ್ಗಮಿಸಿದರು. ಅವರ ಜೊತೆಯಲ್ಲಿ ಹೋದ ನನ್ನ ಗೆಳೆಯರೊಂದಿಗೆ ಅವರು 'ನಾಗಭೂಷಣ ಮೋದಿ ಪರವಾಗಿಬಿಟ್ಟಿದ್ದಾನೆ!' ಎಂದರಂತೆ!

ಹೇಳಿ, ಈ ನಮ್ಮ ಪ್ರಗತಿಪರರೆನಿಸಿಕೊಂಡವರ ಅಸಹಿಷ್ಣುತೆ ಯಾವ ರೀತಿಯಲ್ಲಿ ಕಡಿಮೆ ಇದೆ? ಎಲ್ಲ ರೀತಿಯ ರಾಜಕೀಯ ಒಲವುಗಳುಳ್ಳ ಜನರಿರುವ ಒಂದು ಸಾಹಿತ್ಯಿಕ ಸಭೆಗೆ ಬಂದು ರಾಜಕೀಯ ಪ್ರಚಾರ ಭಾಷಣ ಮಾಡುವುದು ಅಸಭ್ಯತೆ ಎಂಬ ಸೂಕ್ಷ್ಮವೂ ಗೊತ್ತಿಲ್ಲದ ಇವರು ಈ ಅಸೂಕ್ಷ್ಮತೆಯನ್ನು ಸೂಚಿಸಿದವರೆಲ್ಲರೂ ತಮ್ಮ ರಾಜಕೀಯ ವಿರೋಧಿಗಳು, ಮೋದಿ ಪರವಾಗಿಬಿಟ್ಟಿರುವವರು ಎಂದು ಅನುಮಾನಿಸುವಷ್ಟು ದುರ್ಬಲರೂ ಆಗಿಹೋಗಿಬಿಟ್ಟಿರುವುದು ಸಹಜವೇ ಆಗಿದೆ. ಈ ದೌರ್ಬಲ್ಯವೇ ಇವರ ಈ ಅಸಹಿಷ್ಣುತೆಗೂ ಕಾರಣ. ಇಂತಹವರ ಇಂತಹ ವರ್ತನೆಗಳಿಂದ ಸಾಮಾನ್ಯ ಜನರ ದೃಷ್ಟಿಯಲ್ಲಿ ಮೋದಿಯ ಬಿಂಬ ಮತ್ತಷ್ಟು ಬಲಗೊಂಡರೆ ಆಶ್ಚರ್ಯವಿಲ್ಲ.

## ಸುರಕೋಡರಿಗೆ ಸನ್ಮಾನ



ನಮ್ಮ ಹಸನ್ ನಯೀಂ ಸುರಕೋಡರನ್ನು ಇತ್ತೀಚೆಗೆ ಧಾರವಾಡದಲ್ಲಿ ಸಹಮನಸ್ಕ ಗೆಳೆಯರೆಲ್ಲ ಸೇರಿ ಸಾರ್ವಜನಿಕವಾಗಿ ಸನ್ಮಾನಿಸಿದ್ದಾರೆ. ಅವರ ಒಡನಾಟ ಮತ್ತು ಕೃತಿಗಳ ಅವಲೋಕನ ಕಾರ್ಯಕ್ರಮದಲ್ಲಿ ಅವರಿಗೆ ನಿಧಿಯೊಂದನ್ನು ಅರ್ಪಿಸಲಾಗಿದೆ. ಈ ನಿಧಿಗೆ ನಮ್ಮ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ ಮತ್ತು 'ಹೊಸ ಮನುಷ್ಯ' ಪತ್ರಿಕೆ ಸಾಂಕೇತಿಕ ದೇಣಿಗೆ ನೀಡಿದೆ.

ಸುರಕೋಡರು ಉರ್ದು–ಹಿಂದಿ ಮತ್ತು ಇಂಗ್ಲಿಷ್‌ನಿಂದ ಹಲವು ಸಾಹಿತ್ಯಿಕ ಮತ್ತು ವೈಚಾರಿಕ ಕೃತಿಗಳನ್ನು ಕನ್ನಡಕ್ಕೆ ತಂದು ಸ್ಮರಣಾರ್ಹ ಕೆಲಸ ಮಾಡಿದ್ದಾರೆ. ಇವುಗಳಲ್ಲಿ ಹಲವು ಲೋಹಿಯಾ ಕೃತಿಗಳೂ ಇವೆ. ನಮ್ಮ ನಡುವಿನ ೮೯ ವರ್ಷಗಳ ಈ ಸಜ್ಜನ ಆದಷ್ಟು ಬೇಗ ಸದ್ಯದ ತಮ್ಮ ಅನಾರೋಗ್ಯದಿಂದ ಪಾರಾಗಿ ಇನ್ನಷ್ಟು ಕನ್ನಡದ ಸೇವೆ ಮಾಡುವಂತಾಗಲಿ ಎಂದು 'ಹೊಸ ಮನುಷ್ಯ' ಹಾರೈಸುತ್ತದೆ.

–ಡಿ.ಎಸ್. ನಾಗಭೂಷಣ

## ಪುಸ್ತಕಾವಲೋಕನ

ಪು: **ಪ್ರಾಕೃತ ಜಗದ್ವಲಯ** (ಪ್ರಾಕೃತ–ಕನ್ನಡ–ಸಂಸ್ಕೃತ ಭಾಷೆಗಳ ಅನುಸಂಧಾನ)
ಲೇ: **ಷ. ಶೆಟ್ಟರ್** ಪ್ರ: **ಅಭಿನವ**, ಬೆಂಗಳೂರು ಪು: **೨೪೮** ಬೆ: **ರೂ. ೨೫೦/–**

# ಬರಹ ಸಂಸ್ಕೃತಿಯ ಶೋಧ




**ಹೆ**ಸರಾಂತ ಚಿಂತಕರಾದ ಪ್ರೊ. ಷ. ಶೆಟ್ಟರ್ ಅವರ ಇತ್ತೀಚಿನ (೨೦೧೮) ಈ ಹೊತ್ತಿಗೆ . ಹಲವು ಕಾರಣಗಳಿಗಾಗಿ ಮಹತ್ವವನ್ನು ಪಡದುಕೊಂಡಿದೆ. ಚಾರಿತ್ರಿಕ ಪ್ರಾಕ್ತನಶಾಸ್ತ್ರದ ನೆಲೆಯಿಂದ ಕರ್ನಾಟಕದ ಚರಿತ್ರೆ, ಸಂಸ್ಕೃತಿ, ಭಾಷೆ, ಲಿಪಿ, ಶಾಸನ ವೊದಲಾದ ವಿದ್ಯಮಾನಗಳನ್ನು ತಲಸ್ಪರ್ಶಿಯಾಗಿ ಶೋಧಿಸುವ ಇರಾದೆಯನ್ನು ಇವರು ಹೊಂದಿರುತ್ತಾರೆ. ಇದಕ್ಕೆ ಸಾಕ್ಷಿಯಾಗಿ ಶಂಗಂ ತಮಿಳಿಗಂ ಮತ್ತು ಕನ್ನಡ ನಾಡುನುಡಿ, ಹಳಗನ್ನಡ: ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ, ಹಳಗನ್ನಡ : ಭಾಷೆ, ಭಾಷಾ ವಿಕಾಸ, ಭಾಷಾ ಬಾಂಧವ್ಯ (ಸಂ) ಹಾಗೂ ಸದ್ಯದ ಪ್ರಾಕೃತ ಜಗದ್ವಲಯ ಎಂಬೆಲ್ಲ ಹೊತ್ತಿಗೆಗಳನ್ನು ನೋಡಬಹುದು. ಈ ಎಲ್ಲ ಹೊತ್ತಿಗೆಗಳ ಮೂಲ ಉದ್ದೇಶ ಕನ್ನಡದ ಪ್ರಾಚೀನತೆಯ ಹುಡುಕಾಟವಾಗಿದೆ. ಆದರೆ ನುಡಿಯೊಂದರ ಪ್ರಾಚೀನತೆ ಎನ್ನುವುದು ಯಾವುದೇ ಒಂದು ನಿರ್ದಿಷ್ಟ ನೆಲೆಯಿಂದ ಮಾತ್ರ ಗುರುತಿಸಲು ಸಾಧ್ಯವಿಲ್ಲ ಎಂಬ ಚಾರಿತ್ರಿಕ ವಾಸ್ತವನ್ನೂ ಇವರ ಈ ಎಲ್ಲ ಪುಸ್ತಕಗಳು ಪ್ರಚುರಪಡಿಸುತ್ತವೆ. ಈ ಮಾತುಗಳನ್ನು ಹಿನ್ನಲೆಯಾಗಿಟ್ಟುಕೊಂಡು 'ಪ್ರಾಕೃತ ಜಗದ್ವಲಯ' ಎನ್ನುವ ಈ ಪುಸ್ತಕವನ್ನು ವಿಶ್ಲೇಷಿಸಲಾಗಿದೆ.

ಪುರಾತನ ಎನ್ನುವ ಕಾರಣಕ್ಕೆ ನುಡಿಯೊಂದನ್ನು ಸಮೃದ್ಧವಾದದ್ದೆಂದು ತೀರ್ಮಾನಿಸಲು ಸಾಧ್ಯವಿಲ್ಲ. ಯಾವುದೇ ನುಡಿಯ ಪ್ರಾಚೀನತೆ ಎಂಬುದು ಚಾರಿತ್ರಿಕ–ಸಾಂಸ್ಕೃತಿಕ ವಿದ್ಯಮಾನಗಳ ಜೊತೆಗೆ ಹೇಗೆ ಅನುಸಂಧಾನ ಮಾಡಿದೆ ಎಂಬುದನ್ನು ಆಧರಿಸಿರುತ್ತದೆ. ನುಡಿಗೆ ಲಿಪಿ, ಬರವಣಿಗೆ, ಸೃಜನಶೀಲತೆಯ ಆಯಾಮಗಳು ದೊರಕಿದರೆ, ಆ ನುಡಿಗೆ ಸಾಮಾಜಿಕ–ಸಾಂಸ್ಕೃತಿಕ ಅಸ್ತಿತ್ವ, ಅಸ್ಮಿತೆ ಹಾಗೂ ರಾಜಕೀಯ ಮಾನ್ಯತೆ ಕೂಡ ಲಭ್ಯವಾಗುತ್ತದೆ. ಕನ್ನಡವನ್ನು ಇವತ್ತು ಪ್ರಾಚೀನ ನುಡಿಯೆಂದು ಗುರುತಿಸುವ ಪ್ರಕ್ರಿಯೆಯಲ್ಲಿಯೂ ಈ ಸಾಮಾಜಿಕ–ಸಾಂಸ್ಕೃತಿಕ ಆಯಾಮಗಳು ಮುಖ್ಯವಾಗಿವೆ. ಸಂಸ್ಕೃತ ಲಿಪಿ ವ್ಯವಸ್ಥೆಯನ್ನು ಪಡೆದುಕೊಂಡ ಮೇಲೆಯೇ ವಿಶ್ವಾತ್ಮಕ ಮಾನ್ಯತೆಯನ್ನು ಪಡೆಯಿತು. ಬುದ್ಧ ಮತ್ತು ಮಹಾವೀರ ಅವರುಗಳು ತಮ್ಮ ಅನುಯಾಯಿಗಳಿಗೆ ಪ್ರಾಕೃತ ನುಡಿಗಳಲ್ಲಿ ಬೋಧನೆ ಮಾಡಿದ್ದರಿಂದ ಅವುಗಳಿಗೆ ಪ್ರಾಧಾನ್ಯತೆ ಸಿಕ್ಕಿರುತ್ತದೆ. ಕ್ರಿ.ಪೂ ೬ನೇ ಶತಮಾನದಿಂದ ಕ್ರಿ.ಶ ೩ನೇ ಶತಮಾನದವರೆಗೆ ಪ್ರಾಕೃತ ನುಡಿ(ಗಳು) ಜನಸಾಮಾನ್ಯರ ನುಡಿಯಾಗಿದ್ದವು. ಈ ನುಡಿಗಳು ಬಹಳ ವರುಷಗಳ ಕಾಲ ಮೌಖಿಕ ಪರಂಪರೆಯಲ್ಲಿಯೇ ಇದ್ದವು. ಅಶೋಕ ಚಕ್ರವರ್ತಿ ಬ್ರಾಹ್ಮೀ ಲಿಪಿಯ ನಂಟನ್ನು ಪ್ರಾಕೃತ ನುಡಿಗಳೊಂದಿಗೆ ಬೆಸೆದಿರುವುದು ಚಾರಿತ್ರಿಕ. ಕನ್ನಡ ನುಡಿಯ ಇಡೀ ಬೆಳವಣಿಗೆಯನ್ನು ಗುರುತಿಸುವ ಇಂತಹ ಪ್ರಯತ್ನಗಳು ಈ ಹೊತ್ತಿಗೆಯ ಮಹತ್ವದ ಚರ್ಚೆಗಳಾಗಿವೆ.

'ಭಾಷಾ ಅನುಸಂಧಾನ' ಎಂಬ ಪ್ರಧಾನ ನೆಲೆಯಲ್ಲಿಯೇ ಈ ಹೊತ್ತಿಗೆಯ ಚರ್ಚೆಗಳು ಬೆಳೆದಿವೆ. ಇದು ಸಾಮಾಜಿಕ–ಚಾರಿತ್ರಿಕ ಭಾಷಾಧ್ಯಯನದ ನೆಲೆಯಿಂದ ರೂಪುಗೊಂಡ ಓದು. ಹಲವು ಅಧ್ಯಯನಶಿಸ್ತುಗಳ ಸಾಮಾನ್ಯ ಗ್ರಹಿಕೆಯನ್ನು ಈ ಪುಸ್ತಕ ಬಯಸುತ್ತದೆ. ಎಂಟು ಅಧ್ಯಾಯಗಳ ಈ ಹೊತ್ತಿಗೆ ಕೇವಲ ಒಂದು ಭಾಷೆಯ ಅಧ್ಯಯನವಲ್ಲ. ಪ್ರಾಕೃತ–ಸಂಸ್ಕೃತ–ಕನ್ನಡ ನುಡಿಗಳ ನಡುವಣ ಸಂಘರ್ಷ ಮತ್ತು ಅನುಸಂಧಾನ ಕುರಿತ ವಿಶ್ಲೇಷಣೆಯಾಗಿದೆ. ಬೌದ್ಧರು ನಿರ್ಮಿಸಿದ ಪ್ರಾಕೃತ ಜಗದ್ವಲಯದ ಈ ವ್ಯಾಪ್ತಿ ಅತ್ಯಂತ ವ್ಯಾಪಕವಾಗಿದೆ. ಪಾಲಿ, ಮಗಧಿ, ಅರ್ಧಮಾಗಧಿ, ಶೌರಸೇನಿ, ಮಹಾರಾಷ್ಟ್ರೀ, ಅಪಭ್ರಂಶ, ಪೈಶಾಚೀ ಮೊದಲಾದ 'ಪ್ರಾಕೃತಂಗಳ್'ಗಳ ಸ್ವಾಯತ್ತತೆ, ಭಿನ್ನತೆ, ಪ್ರಾದೇಶಿಕತೆ, ಲಿಪೀಕರಣ, ಸಾಹಿತ್ಯ ಮುಂತಾದ ನಿಲುವುಗಳು ಇಲ್ಲಿ ವಿಶ್ಲೇಷಣೆಯ ನೆಲೆಗಳಾಗಿವೆ. ಬೌದ್ಧ ಧರ್ಮ, ಶಿಲಾಶಾಸನ, ಪ್ರಾಕೃತ ನುಡಿ, ಬ್ರಾಹ್ಮೀ ಲಿಪಿಗಳ ನಡುವಣ ಈ ನಂಟು ಭಾರತೀಯ ಸಾಂಸ್ಕೃತಿಕ ಚರಿತ್ರೆಯಲ್ಲಿಯೇ ಮಹತ್ವದ ನಡೆಯಾಗಿದೆ. ಆದರೆ ಬೌದ್ಧರಂತೆ ಪ್ರಾಕೃತವನ್ನು ಕಲ್ಬರಹದ ಮಾಧ್ಯಮವನ್ನಾಗಿ ಆರಂಭ ಕಾಲದಲ್ಲಿ ಜೈನರು ಬಳಸಿಕೊಳ್ಳಲಿಲ್ಲ (ಪು.೨).ಆದರೆ ಆರಂಭ ಕಾಲದ ಜೈನರ ಕನ್ನಡ ಬರಹಗಳು ಸುಮಾರು ಆರನೇ ಶತಮಾನದಲ್ಲಿ ಪ್ರಕಟವಾಗಿವೆ. ಕೆಳದಖ್ಖಣದ ಪ್ರಾಕೃತ ಭಾಷಾ ಇತಿಹಾಸದಲ್ಲಿ ಕ್ರಿ.ಶ ಮೂರನೇ ಶತಮಾನವು ಒಂದು ತಿರುವಿನ ಕಾಲ. ಏಕೆಂದರೆ, ಕಲ್ಬರಹದಿಂದ ತಾಮ್ರಪಟದ ಬರಹವು ಮೊದಲ ಬಾರಿಗೆ ಕಾಣಿಸಿಕೊಂಡಿದ್ದು ಇಲ್ಲಿಯೇ. ಹಾಗೂ ಆರ್ನೂರು ವರುಷಗಳ ಈ ಭಾಷೆಯ ಏಕಸ್ವಾಮ್ಯವೂ ಅಂತ್ಯಗೊಂಡದ್ದು ಇದೇ ಶತಮಾನದಲ್ಲಿ. ಅರಸು ಮನೆತನ, ಭಾಷಾರಾಜಕಾರಣ, ಧರ್ಮ ಇವುಗಳ ನಡುವಣ ಅನುಸಂಧಾನ ಮತ್ತು ಸಂಘರ್ಷದ ಮಾದರಿಗಳಲ್ಲಿ ಸಾಂಸ್ಕೃತಿಕ ಪಲ್ಲಟಗಳು ಏರ್ಪಟ್ಟವು. ಪರಿಣಾಮವಾಗಿ ಗದ್ಯ ಪ್ರಧಾನ ಪ್ರಾಕೃತವು ಮರೆಯಾಗಿ ಗದ್ಯ–ಪದ್ಯ ಮಿಶ್ರಿತ ಸಂಸ್ಕೃತವು ಬಳಕೆಗೆ ಬಂದಿತು. ಅರಸುಮನೆತನದ ಮಧ್ಯಸ್ಥಿಕೆಯಿಂದ ಈ ನುಡಿ ಬಳಕೆಯ ಮಾದರಿಗಳಲ್ಲಿ ಪಲ್ಲಟಗಳಾದವು. ಇದು ದಖ್ಖಣದ ಅರಸುಮನೆತನಗಳ ಸಾಮನ್ಯ ವರ್ತನೆಯಾಗಿತ್ತು. ಭಾಷಿಕ, ಸಾಂಸ್ಕೃತಿಕವಾಗಿ ನೆಲೆಗೊಂಡಿದ್ದ ಪ್ರಾಕೃತ ನುಡಿಗಳನ್ನು ನಿರ್ನಾಮ ಮಾಡುವ ಹುನ್ನಾರಗಳು ಇಲ್ಲಿ ಹೇಗೆ ಮುಂಚೂಣೆಗೆ ಬಂದವು ಎಂಬುದನ್ನು ಅತ್ಯಂತ ಖಚಿತವಾಗಿ ಚರ್ಚಿಸಿರುವದಿಲ್ಲ.

ಬೌದ್ದರು–ಜೈನರು–ವೈದಿಕರು ಭಾಷಾರಾಜಕಾರಣದ ಮೂರು ನೆಲೆಗಳು ಎನ್ನುವ ವಾಸ್ತವ ಮರೆತು, ಕೇವಲ ವೈದಿಕ–ಶೂದ್ರ ವಿನ್ಯಾಸಗಳಲ್ಲಿ ಮಾತ್ರ ಭಾಷಾ ರಾಜಕಾರಣವನ್ನು ವಿವರಿಸುತ್ತೇವೆ. ಇದೊಂದು ಅಪೂರ್ಣ ತಾತ್ವಿಕ ಚೌಕಟ್ಟೆಂಬುದು ಈ ಪುಸ್ತಕದ ಹಲವು ಸೈದ್ಧಾಂತಿಕ ನಿರೂಪಣೆಗಳಿಂದ ಕಂಡುಬರುತ್ತದೆ. ಬರವಣಿಗೆಯ ಮೂಲಕ ಸಾಮಾಜಿಕ, ಸಾಂಸ್ಕೃತಿಕ ಯಜಮಾನಿಕೆಯನ್ನು ಹೇಗೆ ಸಾಧಿಸಲಾಗಿದೆ ಎನ್ನುವ ಸ್ಪಷ್ಟ ತಾತ್ವಿಕ ನಿಲುವುಗಳು ಇಲ್ಲಿ ಮನವರಿಕೆಯಾಗುತ್ತವೆ. ಆದರೆ ಭಾಷಾಶಾಸ್ತ್ರೀಯ ಸಂಗತಿಗಳನ್ನು ಪರಿಣಾಮಕಾರಿಯಾಗಿ ಈ ಪುಸ್ತಕದಲ್ಲಿ ಬಳಸಿಕೊಂಡಿರುವುದಿಲ್ಲ.

ದ್ವಿಭಾಷಿಕ ಪ್ರಕ್ರಿಯೆಯಲ್ಲಿಯೇ ಭಾಷಿಕ ಅಸಮಾನತೆ ಹಾಗೂ ಅಧಿಕಾರ ಕೇಂದ್ರಗಳು ರೂಪುಗೊಂಡಿರುವುದು ಸ್ಪಷ್ಟ. ಈ ಭಾಷಾ ಯಜಮಾನಿಕೆ ನೆಲೆಗೊಳ್ಳುವುದಕ್ಕೆ ಶಾಸನ–ಬರಹ ಮತ್ತು ಪ್ರಭುತ್ವದ ಒತ್ತಾಸೆ ಹೇಗೆ ಪೂರಕವಾಗಿವೆ ಎಂಬುದಿಲ್ಲಿ ಗಮನಾರ್ಹ. ಜೈನರು–ಬೌದ್ಧರು–ವೈದಿಕರು ತಮ್ಮ ತಾತ್ವಿಕ, ಸಾಹಿತ್ಯಿಕ ನಿರೂಪಣೆಗಳಿಗೆ ಹಾಗೂ ಜನಸಾಮನ್ಯರೊಂದಿಗೆ ಸಂವಹನ ಬೆಳೆಸಲು ರೂಪಿಸಿಕೊಂಡ ಭಾಷಿಕ ವಿನ್ಯಾಸಗಳು ಭಿನ್ನವಾಗಿವೆ. ಇದರಿಂದಾಗಿ ಪ್ರಾಕೃತ, ಪ್ರಾಕೃತಮಿಶ್ರಿ ಸಂಸ್ಕೃತ ಹಾಗೂ ಸಂಸ್ಕೃತಮಿಶ್ರ ಪ್ರಾಕೃತ ನುಡಿಗಟ್ಟುಗಳು ತಲೆಯೆತ್ತಿದವು. ಇದು ಕೇವಲ ಭಾಷಾರಾಜಕಾರಣದ ಕುರುಹು ಮಾತ್ರವಲ್ಲ, ಧರ್ಮರಾಜಕಾರಣ ಮತ್ತು ಪ್ರಭುತ್ವಗಳ ನಡುವಣ ಅನುಸಂಧಾನವನ್ನೂ ಹಾಗೂ ಜನಭಾಷೆ–ಪ್ರಭುತ್ವಭಾಷೆಗಳ ನಡುವಣ ಸಂಘರ್ಷವನ್ನೂ ಏಕಕಾಲಕ್ಕೆ ಸೂಚಿಸುತ್ತವೆ. ಕರ್ನಾಟಕ ಮತ್ತು ಆಂದ್ರಪ್ರದೇಶಗಳು ಪ್ರಾಕೃತ ಮೂಲದಿಂದ ಸಂಸ್ಕೃತದ ಕಡೆಗೆ ಹೊರಳುವ ಬಗೆಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದರೆ, ಇವತ್ತಿನ ಭಾಷಾರಾಜಕಾರಣದ ಪರಿಣಾಮಗಳನ್ನು ಮನಗಾಣುತ್ತೇವೆ. ಒಂದು ಕಾಲದ ಭಾಷಾನೀತಿ ಹಾಗೂ ನಿರೂಪಣೆಗಳು, ಇವತ್ತು ಸಮುದಾಯಗಳ ಮೇಲೆ ಏನೆಲ್ಲ ಪ್ರಭಾವ–ಪರಿಣಾಮಗಳನ್ನು ಬೀರುತ್ತವೆ ಎನ್ನುವುದು ಮುಖ್ಯ.

ಕನ್ನಡದ ಆಲೋಚನಾ ಮಾದರಿಗಳನ್ನು ಪ್ರಾಕೃತ ನುಡಿಪರಂಪರೆ ಹೇಗೆ ರೂಪಿಸಿದೆ ಎಂಬ ಖಚಿತ ತಾತ್ವಿಕತೆ ಇಲ್ಲಿ ಮಂಡಿತವಾಗಿಲ್ಲ. ಆದರೆ ಅಂತಹವೊಂದು ಆಯಾಮವನ್ನು ಗ್ರಹಿಸುವುದಕ್ಕೆ ಬೇಕಾಗುವ ವಿವರಗಳು ಈ ಹೊತ್ತಿಗೆಯಲ್ಲಿ ಸಿಗುತ್ತವೆ. ಕನ್ನಡದ ಸಂವೇದನೆ, ಆಲೋಚನಾ ಪರಂಪರೆಗಳನ್ನು ಯೋಚಿಸುವಾಗೆಲ್ಲ ಸಂಸ್ಕೃತದ ಹಿರಿಮೆಯನ್ನು ಮಾತ್ರ ಕೊಂಡಾಡಲಾಗುತ್ತದೆ. ಪ್ರಾಕೃತ ಕನ್ನಡದ ಈ ಪರಂಪರೆಗಳನ್ನು ಹೇಗೆ ರೂಪಿಸಿದೆ ಎಂಬುದನ್ನು ಅರಿಯುವುದು ಜರೂರಾಗಿದೆ.

**–ಡಾ. ಮೇಟಿ ಮಲ್ಲಿಕಾರ್ಜುನ**

**'ಹೊಸ ಮನುಷ್ಯ'ಕ್ಕೆ ಚಂದಾದಾರಾಗಬಯಸುವವರು ಚಂದಾ ಮೊತ್ತವನ್ನು ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಗೀತಾಕೃಪಾ ಶಾಖೆಯಲ್ಲಿ (ifsc code: 0040444) *ಸಂಪಾದಕರು, ಹೊಸ ಮನುಷ್ಯ* ಹೆಸರಿನಲ್ಲಿರುವ ಚಾಲ್ತಿ ಖಾತೆ ಸಂ: 64110358330 ಇಲ್ಲಿಗೆ ವರ್ಗಾಯಿಸಿ (ನಗದು ವರ್ಗಾವಣೆ ಕೂಡದು) 94492 42284 ಸಂಖ್ಯೆಗೆ ತಿಳಿಸಬೇಕು–ಸಂ.**

'ಹೊಸ ಮನುಷ್ಯ' ಓದುಗರೆಲ್ಲರಿಗೂ

ದಸರಾ ಹಬ್ಬದ ಶುಭಾಶಯಗಳು



**ವಿಜಯಾನಂದ್ ಡಯಾಬಿಟಿಕ್ ಸೆಂಟರ್**

೮೩೩, ವಿನಯ ಮಾರ್ಗ,

ಸಂಗೀತ ಕಾರ್ನರ್ ಎದುರು

ಸಿದ್ಧರ್ಥ ನಗರ, ಮೈಸೂರು-೫೭೦೦೧೧

ದೂ : ೦೮೨೧-೨೪೭೯೩೩/೪೨೪೭೮೩೩



ಕೊಲ್ವ ಬತ್ತಳಿಕೆ ಬಿಲ್ಲು ಬಾಣವನು
ಅಲ್ಲೇ ಇಟ್ಟು ಬಾ
ಬಿಂಕದುಕುತಿಯನುಕೊಂಕು
ಯುಕುತಿಯನು
ಎಲ್ಲ ಬಿಟ್ಟು ಬಾ...

–ಕುವೆಂಪು

**ಶುಭಾಶಯಗಳೊಂದಿಗೆ**

**ಹಸಿರು ದಾರಿ**

(ಪಕ್ಷಿ ವೀಕ್ಷಕರ ತಂಡ, ತುಮಕೂರು

**ಸಂಪರ್ಕ; ಜಿ.ವಿ. ಆನಂದಮೂರ್ತಿ**

ಸಂಚಾರು : 9538897649

‘ಹೊಸ ಮನುಷ್ಯ’ ಓದುಗರೆಲ್ಲರಿಗೂ
ಗಾಂಧಿ ಜಯಂತಿಯ ಶುಭಾಶಯಗಳು!



**ಕುವೆಂಪು ವಿಚಾರ ವೇದಿಕೆ**

‘ಸರ್ವೋದಯ’, ನಂ.೭೨,
ಪ್ರೊ. ಎ.ಆರ್. ಕೃಷ್ಣಶಾಸ್ತ್ರಿ ರಸ್ತೆ,ಬಸವನಗುಡಿ,
**ಬೆಂಗಳೂರು–೫೬೦ ೦೦೪**

## ತಿಂಗಳ ಸಾಲುಗಳು...



ಆಸ್ತಿಕವಾದಿ ಮತ್ತು ನಾಸ್ತಿಕವಾದಿ ಸಿದ್ಧಾಂತಗಳು ಪರಸ್ಪರ ವಿರೋಧಿಗಳಂತೆ ನಟಿಸುತ್ತಾ ಬೆಳೆಯುತ್ತಿರುವ; ಆದರೆ ಆಳದಲ್ಲಿ ಒಂದೇ ಆಗಿರುವ ಚಿತ್ತವೃತ್ತಿಗಳು. ಆದ್ದರಿಂದಲೇ ಗಾಂಧೀಯವರನ್ನು ಜೆಹಾದಿಗಳೂ, ಸನಾತನ ಹಿಂದೂವಾದಿಗಳೂ, ಮಾರ್ಕ್ಸ್‌ವಾದಿಗಳೂ ಒಟ್ಟಾಗಿ ದ್ವೇಷಿಸಿ ತಮ್ಮ ನಿಜವಾದ ವಿರೋಧಿ ದಾರಿ ಮತ್ತು ಗುರಿಯ ನಿಯಮ ಹೇಳುತ್ತಿರುವ ಗಾಂಧಿ ಎಂದು ಸರಿಯಾಗಿಯೇ ಗುರುತಿಸಿದರು. ಆದರೆ ಈ ತಾತ್ವಿಕ ಸಂಘರ್ಷವನ್ನು ಗಾಂಧಿಯವರನ್ನು ತೀರಿಸಿಯೇ ಬಿಡುವ ಮಟ್ಟಕ್ಕೆ ಹಿಂದುತ್ವವಾದಿಗಳು ಒಯ್ದದ್ದು ಅದು ಕಳೆದ ಶತಮಾನದ ಅತಿ ಕ್ರೂರ ವ್ಯಂಗ್ಯ..

–ಕೆ.ಪಿ. ಪೂರ್ಣಚಂದ್ರ ತೇಜಸ್ವಿ.

*ಶುಭಾಶಯಗಳೊಂದಿಗೆ,*

**ಆರ್. ಉಮೇಶ್ ಅಂಡ್ ಅಸೋಸಿಯೇಟ್ಸ್**
**ಲೆಕ್ಕ ಪರಿಶೋಧಕರು, ಮೈಸೂರು**
**ಮೊಬೈಲ್ : ೯೪೪೮೦೮೪೭೯೩**

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper** RNI No. KARKAN/2012/47568
Rgd No. KA/SK/SMG-1209/2016-18

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204( Karnataka)